ಶ್ರೀ ಪಿ. ರಾಮ್‌ದೇವ್.— ಅಧ್ಯಕ್ಷರೆ, ಕಪಾಲಿ ಥಿಯೇಟರ್ ಬಳಿ ಸತ್ತವರಿಗೆ ಕಾಂಪನ್‌ಸೇಷನ್ ಸಿಕ್ಕಿದೆ, ಬೇರೆ ಕಡೆ ಸತ್ತವರಿಗೆ ಕಾಂಪನ್‌ಸೇಷನ್ ಸಿಕ್ಕುವುದು ಬೇಡವೇ?

ಅಧ್ಯಕ್ಷರು.— I will look into it. Now we will go to the financial business.

ಶ್ರೀ ಎಂ. ಎಸ್. ಕೃಷ್ಣನ್.— ನಮ್ಮ ಏರಿಯಾದಲ್ಲಿ ೧೨ ಮನೆಗಳು ಕುಸಿದುಬಿದ್ದು ಕೊಚ್ಚಿಕೊಂಡು ಹೋಗಿವೆ. ಇಲ್ಲಿ ಏನಾಗಿದೆ ಎಂದರೆ ಕಾರ್ಪೋರೇಷನ್ ಸಿಸ್ಟಂ ಕೆಲವುಕಡೆ ಸರಿಯಿಲ್ಲ ಇನ್ನೊಂದು ಕಡೆ ಪರಿಹಾರ ಒದಗಿಸಿಕೊಡಿ ಎಂದು ಹೇಳುವುದು ಇದೆ. ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ ಎಂದು ನೆನ್ನೆಯಿಂದ ಕೇಳುತ್ತಿದ್ದೇವೆ. ಅದರ ಬಗ್ಗೆ ಉತ್ತರ ಹೇಳುವವರು ಯಾರು? ಮಾನ್ಯ ಬಸವಣ್ಣಪ್ಪನವರು ಫುಡ್ ಕೊಡಿಸುತ್ತಾರೆಯೇ ?

ಅಧ್ಯಕ್ಷರು.— ಇವೊತ್ತಿನ ಪಟ್ಟಿ ಮುಗಿದಿದೆ. ನಾಳೆಯುದನ್ನು ಆಲೋಚನೆ ಮಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.— ಅಧ್ಯಕ್ಷರೆ, ನಮ್ಮ ಸೂಚನೆಯನ್ನು ಲ್ಯಾಪ್ಸ್ ಮಾಡಬೇಡಿ.

ಅಧ್ಯಕ್ಷರು.— ರಿನ್ಯೂ ಮಾಡಿದರೆ ಆಯಿತು.

FINANCIAL BUSINESS

ಶ್ರೀ ಜಿ. ಬಸವಣ್ಣಪ್ಪ.— ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೧,೭೭,೧೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೨೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

The Question was proposed

MR. SPEAKER.— The demand is before the House for discussion. Sri Bangarappa to initiate the discussion.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸತಕ್ಕ ಸಂದರ್ಭ ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿರತಕ್ಕಂಥ ಕಾರಣಗಳ ಆಧಾರದ ಮೇಲೆ ಬೇಡಿಕೆಯನ್ನು ವಿರೋಧ ಮಾಡತಕ್ಕಂಥ ಸುಸಂದರ್ಭ ಸಿಕ್ಕಿದ್ದಕ್ಕೆ ನಾನು ಸಂತೋಷಪಡುತ್ತೇನೆ. ಇದಕ್ಕೆ ಕಾರಣಗಳು ಹಲವಾರು ಇವೆ. ಮನುಷ್ಯನಿಗೆ ಆಹಾರ ಬೇಕು, ಆಹಾರ ಬೇಕೆಂದರೆ, ಕೆಲವರಲ್ಲಿ ಆಹಾರದ ವಿಚಾರದಲ್ಲಿ ಎರಡು ವಾದ ಇದೆ. ಒಂದು ನಾವು ಆಹಾರ ತಿನ್ನುವುದಕ್ಕೋಸ್ಕರ ಹುಟ್ಟಿದ್ದೇವೆ ಎನ್ನುವ ಭಾವನೆ ಕೆಲವರಲ್ಲಿ ಇದೆ. ಇನ್ನು ಕೆಲವರಲ್ಲಿ ನಾವು ಅನ್ನ ತಿನ್ನುವುದಕ್ಕೆ, ರೊಟ್ಟಿ ತಿನ್ನುವುದಕ್ಕೋಸ್ಕರ ನಾವು ಅನ್ನವನ್ನು ತಿಂದು ನಾವು ಮನುಷ್ಯರಾಗಿ ಉಳಿಯಬೇಕು ಎನ್ನತಕ್ಕದ್ದು ಒಂದು ವಾದವೂ ಕೂಡ ಇದೆ. ನಾವು ಸಮಾಜದಲ್ಲಿ ಎರಡು ವರ್ಗಗಳನ್ನು ಕಾಣುತ್ತೇವೆ. ಈಗ ನಾನು ಹೇಳಿರತಕ್ಕದ್ದು ಎರಡು ವರ್ಗಗಳು. ಇದರ ಬಗ್ಗೆ ಸ್ಥೂಲವಾಗಿ ವಿವರಣೆಯನ್ನು ನಾನು ಕೊಡುವುದಾದರೆ ಹೊಟ್ಟೆ ತುಂಬಿರತಕ್ಕಂಥದ್ದು ಒಂದು ವರ್ಗ ಇದೆ. ಹೊಟ್ಟೆ ತುಂಬದೇ ಇರತಕ್ಕಂಥದ್ದು ವರ್ಗ ಮತ್ತೊಂದು ಇದೆ. ನಮಗೆ ಗೊತ್ತಿರುವ ಹಾಗೆ ಈ ಒಂದು ವಿಚಾರವನ್ನು ನಾವು ಪ್ರಸ್ತಾಪ ಮಾಡಬೇಕಾದರೆ ಈ ಮಾತು ಕರ್ನಾಟಕ ರಾಜ್ಯಕ್ಕೆ ಅಥವಾ ಅಖಂಡ ಭಾರತಕ್ಕೆ ಅಷ್ಟೇ ಸೀಮಿತಗೊಳಿಸಿ ಮಾತನಾಡತಕ್ಕ ವಿಚಾರ ಅಲ್ಲ. ಇದು ಅಖಂಡ ಪ್ರಪಂಚಕ್ಕೆ ಅನ್ವಯವಾಗತಕ್ಕದ್ದು ಹೌದು. ನಾನು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಮಾತನಾಡುವುದು ಅಪ್ರಕೃತ.

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(ಶ್ರೀಮಾನ್ ಪಿ. ರಾಮದೇವ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಪ್ರಪಂಚದ ಆಹಾರಧಾನ್ಯಗಳ ಸಂಗ್ರಹಣೆ ಮತ್ತು ವಿತರಣೆಯ ಬಗ್ಗೆ ನಾನು ಪ್ರಾಸ್ತಾವಿಕವಾಗಿ ಒಂದೆರಡು ಮಾತುಗಳನ್ನು ಹೇಳಿದರೆ ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ ಅದಕ್ಕೆ ಸ್ವಲ್ಪ ಹಿನ್ನೆಲೆ ಸಿಕ್ಕಬಹುದೆಂದು ಭಾವಿಸಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ೧೪–೧೫ನೇ ಶತಮಾನ ಆದಮೇಲೆ, ಅಂದರೆ ನಂತರದ ಶತಮಾನದಲ್ಲಿ ದೈಹಿಕವಾಗಿ ಕೆಲಸ ಮಾಡಿ ಕೂಲಿಯನ್ನು ಪಡೆದು ಜೀವನವನ್ನು ಮಾಡತಕ್ಕ ವರ್ಗ ಏನಿದೆ ಆ ವರ್ಗಕ್ಕೆ ಹೆಚ್ಚಿನ ಮಹತ್ವ ಸಿಕ್ಕುವುದಕ್ಕೆ ಪ್ರಾರಂಭವಾಯಿತು. ಉತ್ಪಾದನೆಯನ್ನು ಮಾಡಿಸತಕ್ಕ ಜನ, ಉತ್ಪಾದನೆಯನ್ನು ಮಾಡತಕ್ಕ ಜನ, ಮತ್ತು ಅವರು ಪಡೆಯುತ್ತಿದ್ದ ಕೂಲಿಯ ದರ ಯಾವರೀತಿ ಇತ್ತು ಎಂಬುದನ್ನು ಇಲ್ಲಿ ನಾವು ತಿಳಿದುಕೊಳ್ಳುವುದು ಮುಖ್ಯವಾದುದು.

ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿರುವಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಇವತ್ತು ಆಹಾರೋತ್ಪಾದನೆಯಲ್ಲಿ ಬಹಳಷ್ಟು ವೇಗವಾಗಿ ಮುಂದು ಮುಂದಕ್ಕೆ ಹೋಗಿವೆ. ಉದಾಹರಣೆಗೆ ಹೇಳುವುದಾದರೆ, ಎರಡನೇ ಮಹಾಯುದ್ಧ ಆದಮೇಲೆ ಜಪಾನ್ ದೇಶವು ಸಂಪೂರ್ಣವಾಗಿ ನಾಶವಾಗಿ ಹೋಗಿತ್ತು. ಆದರೆ ಇವತ್ತು ಜಪಾನ್ ದೇಶವು ಪ್ರತಿಯೊಂದು ವಿಚಾರದಲ್ಲಿಯೂ ಅತ್ಯಂತ ಮುಂದುವರಿದ ದೇಶವಾಗಿದೆ. ಅವರು ಭತ್ತವನ್ನು ಬೆಳೆಯುವುದರಲ್ಲಿ ಒಳ್ಳೆಯ ಮಾದರಿಯನ್ನನುಸರಿಸುತ್ತಿದ್ದಾರೆ. ನಮ್ಮಲ್ಲಿಯೂ ಕೂಡ ಜಪಾನ್ ಮಾದರಿಯನ್ನೇ ಅನುಸರಿಸಿ ಜಪಾನ್ ತಳಿಯನ್ನು ಬೆಳೆಯುವುದನ್ನು ನಾವು ನೋಡುತ್ತಿದ್ದೇವೆ. ಜಪಾನ್ ದೇಶದಲ್ಲಿ ತಾಯ್‌ಚುಂಗ್ ೮೧ ಎಂಬ ಹೆಸರಿನ ಭತ್ತದ ತಳಿಯು ಬಹಳ ಹೆಸರುವಾಸಿಯಾಗಿತ್ತು. ಈ ತಳಿಯನ್ನು ಥಾಯ್‌ಲೆಂಡ್ ದೇಶದವರು ಕಂಡುಹಿಡಿದರೆಂದು ಕೇಳಿದ್ದೇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ಪ್ರಪಂಚದಲ್ಲಿ ಅತ್ಯಂತ ಅಭಿವೃದ್ಧಿ ಶೀಲ ರಾಷ್ಟ್ರಗಳು ಏನಿವೆ ಅವು ಆಹಾರಪದಾರ್ಥಗಳ ವಿಚಾರದಲ್ಲಿ ತಾವು ಸ್ವಾವಲಂಬಿಗಳಾಗಬೇಕೆಂಬ ದೃಷ್ಟಿಯಿಂದ ವ್ಯವಸಾಯದ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟರು. ಮತ್ತು ತನ್ಮೂಲಕ ಆಹಾರಪದಾರ್ಥಗಳ ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳುತ್ತಾ ಹೊರಟರು. ನಾನು ಈಗಾಗಲೇ ಹೇಳಿದಂತೆ ಜಪಾನ್ ದೇಶವನ್ನು ಉದಾಹರಣೆಗೆ ತೆಗೆದುಕೊಂಡರೆ, ಎರಡನೇ ಮಹಾಯುದ್ಧದಲ್ಲಿ ಅದು ತನ್ನಲ್ಲಿದ್ದ ಆಸ್ತಿಪಾಸ್ತಿ, ಆಹಾರಧಾನ್ಯ, ಎಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡಿದ್ದನ್ನು ನೋಡಿದರೆ ಮತ್ತೆ ಆ ಜಪಾನ್ ದೇಶ ಎಂದೆಂದಿಗೂ ಮುಂದುವರಿಯಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯಲ್ಲಿತ್ತು. ಆ ಒಂದು ಸಂದರ್ಭದಲ್ಲಿ ಅತ್ಯಂತ ಶ್ರಮವಹಿಸಿ ಏನಾದರೂ ಮಾಡಿ ತಾನು ಮುಂದುವರಿಯಲೇಬೇಕು ಅಭಿವೃದ್ಧಿ ಹೊಂದಲೇಬೇಕೆಂದು ಪಣತೊಟ್ಟು ಕಾರ್ಯೋನ್ಮುಖವಾಯಿತು. ಮೊದಲು ತಾನು ಆಹಾರ ಪದಾರ್ಥಗಳನ್ನು ಬೆಳೆಯುವುದರಲ್ಲಿ ಸ್ವಾವಲಂಬಿಯಾಗಬೇಕೆಂದು ಹೆಚ್ಚಿನ ಪ್ರಯತ್ನ ಪಟ್ಟಿದ್ದರಿಂದ ಅದು ಮುಂದಕ್ಕೆ ಬರಲು ಸಾಧ್ಯವಾಯಿತು. ಅಷ್ಟೇ ಅಲ್ಲ ಇವತ್ತು ಪ್ರತಿಯೊಂದು ವಿಚಾರದಲ್ಲೂ ಕೂಡ ಅದು ಸಂಪೂರ್ಣವಾಗಿ ಮೇಲುಗೈ ಪಡೆದಿದೆ. ಭತ್ತವನ್ನು ಬೆಳೆಯುವ ವಿಧಾನದಲ್ಲಿ ತನ್ನದೇ ಆದ ವಿಧಾನವನ್ನನುಸರಿಸುತ್ತಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಭತ್ತ, ರಾಗಿ, ಜೋಳ, ಮುಂತಾದುವನ್ನು ಬೆಳೆಯುತ್ತಿದ್ದೇವೆ, ಮತ್ತು ಇದರ ಜೊತೆಗೆ ಇನ್ನೂ ಬೇರೆ ಬೇರೆ ಆಹಾರ ಧಾನ್ಯಗಳನ್ನು ಬೆಳೆದು ಉಪಯೋಗ ಮಾಡುತ್ತಿದ್ದೇವೆ. ಅಮೆರಿಕಾ, ಜಪಾನ್, ಮುಂತಾದ ರಾಷ್ಟ್ರಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಸಲುವಾಗಿಯೇ ಇಂತಿಷ್ಟು ಎಂದು ಭೂಮಿಯನ್ನು ನಿಗದಿ ಮಾಡಿರುತ್ತಾರೆ. ಆದರೆ ನಮ್ಮಲ್ಲಿ ಅಂಥ ಒಂದು ವ್ಯವಸ್ಥೆ ಇಲ್ಲ. ನಮ್ಮಲ್ಲಿ ಒಟ್ಟು ಎಷ್ಟು ಜನಸಂಖ್ಯೆ ಇದೆ, ಅದಕ್ಕೆ ಸಾಕಾಗುವಷ್ಟು ಆಹಾರ ಧಾನ್ಯವನ್ನು ಬೆಳೆಯಲು ಸಾಕಷ್ಟು ಭೂಮಿ ಇದೆಯೆ? ಇರತಕ್ಕ ಜನರ ಪೈಕಿ ಅಕ್ಕಿಯನ್ನು ಉಪಯೋಗ ಮಾಡುವವರು ಎಷ್ಟು ಮಂದಿ, ರಾಗಿಯನ್ನು ಉಪಯೋಗ ಮಾಡುವವರು ಎಷ್ಟು ಮಂದಿ, ಗೋಧಿಯನ್ನು ಉಪಯೋಗ ಮಾಡುವವರು ಎಷ್ಟು ಮಂದಿ, ಒಂದು ವರ್ಷಕ್ಕೆ ನಮ್ಮಲ್ಲಿ ಎಷ್ಟು ಆಹಾರಧಾನ್ಯಗಳ ಬೇಡಿಕೆ ಇದೆ, ಈಗ ಎಷ್ಟು ಉತ್ಪನ್ನ ಮಾಡಿ, ಬಳಕೆ ಮಾಡುತ್ತಿದ್ದೇವೆ ಎನ್ನುವ ಬಗ್ಗೆ ನಾವು ಚಿಂತನೆಯನ್ನು ಮಾಡದೇ ಹೋದರೆ ಇಡೀ ದೇಶದ ಆಹಾರ ನೀತಿಯ ತಕ್ಕಡಿ ಏನಿದೆ ಅದು ಏರುಪೇರಾಗುತ್ತದೆ. ಪ್ರಕೃತಿಯ ವಿಚಾರ ನಮ್ಮ ಕೈಯಲ್ಲಿಲ್ಲ. ಸಾಕಷ್ಟು ಮಳೆ ಬಿದ್ದರೆ ಒಳ್ಳೆಯ ಬೆಳೆ ಬರಬಹುದು, ಇಲ್ಲದೇ ಹೋದರೆ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.— ಸ್ವಾಮಿ, ಇದು ನನ್ನ ಖಾತೆಗೆ ಸಂಬಂಧಪಡುವುದಿಲ್ಲ, ನನ್ನದು ಏನಿದ್ದರೂ ಸಂಗ್ರಹವಾಗಿರುವುದನ್ನು ವಿತರಣೆ ಮಾಡುವ ಕೆಲಸಮಾತ್ರ ನಮ್ಮಲ್ಲಿ ಸಂಗ್ರಹ ಇದ್ದರೆ ಕೊಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಮಾನ್ಯ ಸಚಿವರಾದ ಬಸವಣ್ಣೆಪ್ಪನವರು ಹೇಳಬಹುದು. ಆದರೆ ತಾವು ಹೇಳುತ್ತಿರುವ ವ್ಯವಸಾಯಕ್ಕೆ ಸಂಬಂಧಿಸಿದಂತೆ ಬೇರೆ ಇನ್ನೊಬ್ಬರು ಸಚಿವರಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಚಿವರು ನಾನು ಕೇಳುವ ಪ್ರಶ್ನೆಗೆ ಯಾವರೀತಿ ಉತ್ತರ ಕೊಡಬಹುದೆಂದು ನನಗೆ ಗೊತ್ತಿದೆ. ಈ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದರಿಂದ ಅವರಿಗೆ ಒಂದು ಹಿನ್ನೆಲೆ ಸಿಕ್ಕಬಹುದೆಂಬ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಬಹುಶಃ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಚುರುಕುಗೊಳ್ಳಬಹುದೆಂದು ನನಗೆ ಅನ್ನಿಸುತ್ತದೆ. ಇಲ್ಲಿ ನಾವೂ, ನೀವೂ ಸೇರತಕ್ಕದ್ದು, ಈ ರಾಜ್ಯದ ಹಿತಚಿಂತನೆಯನ್ನು ಸಮಗ್ರವಾಗಿ ಪರ್ಯಾಲೋಚಿಸುವ ಸಲುವಾಗಿ. ಆದರೆ ಇದಕ್ಕೆ ಸರಿಯಾದ ಉತ್ತರವನ್ನು ಕೊಡುವುದು, ಬಿಡುವುದು ಸಚಿವರಿಗೆ ಸೇರಿದ್ದು. ನಾನು ಈಗಾಗಲೇ ಹೇಳಿದಂತೆ ನಮ್ಮಲ್ಲಿರತಕ್ಕ ಜನಸಂಖ್ಯೆ ಎಷ್ಟು ? ಆಹಾರಧಾನ್ಯದ ಬೇಡಿಕೆ ಎಷ್ಟು ? ಇದನ್ನು ಪೂರೈಸಲು ಆಹಾರಧಾನ್ಯ ಬೆಳೆಯಬೇಕಾದರೆ ಎಷ್ಟು ಜಮೀನನ್ನು ನಿಗದಿಮಾಡಬೇಕು ಮುಂತಾದುವನ್ನು ಇಲಾಖೆಯವರು ಮಾಡಿರುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಪ್ರಕೃತಿ ವಿಕೋಪಕ್ಕೆ ಸಿಕ್ಕಿದಾಗ ನಮ್ಮ ಲೆಕ್ಕಾಚಾರವೆಲ್ಲಾ ತಲೆಕೆಳಗಾಗಬಹುದು. ೧೯೭೧ರ ಜನಗಣತಿಯ ಪ್ರಕಾರ ಅಕ್ಕಿಯನ್ನು ಉಪಯೋಗ ಮಾಡತಕ್ಕವರ ಪ್ರಮಾಣವನ್ನು ಹೆಚ್ಚು ಹೆಚ್ಚು ನೋಡುತ್ತಿದ್ದೇವೆ. ಆದರೆ ಅಕ್ಕಿ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕದಿದ್ದರೆ ರಾಗಿ, ಜೋಳ ಮುಂತಾದ ಇತರೇ ಪದಾರ್ಥಗಳನ್ನು ಉಪಯೋಗ ಮಾಡುತ್ತೇವೆ. ಪ್ರಕೃತಿ ಕೋಪಗೊಂಡಾಗ ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಏನೂ ಮಾಡುವುದಕ್ಕಾಗುವುದಿಲ್ಲ. ಇವತ್ತು ಗೋಧಿಯನ್ನು ಉಪಯೋಗ ಮಾಡತಕ್ಕ ಜನ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದ್ದಾರೆ. ನಗರ ಪ್ರದೇಶದಲ್ಲಿ ಅಕ್ಕಿಯನ್ನು ಉಪಯೋಗ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರತಕ್ಕ ಜನರು ರಾಗಿಯನ್ನು ಉಪಯೋಗ ಮಾಡುವುದು ಹೆಚ್ಚು. ಅಕ್ಕಿಯನ್ನು ಕೊಳ್ಳತಕ್ಕಂಥ ಜನರು ಪಟ್ಟಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಷ್ಟೇ ಅಲ್ಲ ಗ್ರಾಮಾಂತ ಪ್ರದೇಶಗಳಲ್ಲೂ ಕೂಡ ಇರುತ್ತಾರೆ. ಮಾನ್ಯ ಅಧ್ಯಕ್ಷರೇ ಇದರಲ್ಲಿ ಇರತಕ್ಕಂಥ ವಿಚಾರ ಇಷ್ಟೇ. ಸರ್ಕಾರದವರು ಯಾವುದೇ ಒಂದು ನೀತಿಯನ್ನು ರೂಪಿಸಬೇಕಾದರೂ ಅದಕ್ಕೆ ಒಂದು ಮುಂದಾಲೋಚನೆ ಇರಬೇಕು. ಯಾವ ವರ್ಗ ಯಾವ ಆಹಾರ ಧಾನ್ಯಗಳನ್ನು ಬಯಸುತ್ತಾರೆ, ಅದು ಎಷ್ಟು ಬೇಕಾಗುತ್ತದೆ ಅಷ್ಟೇ ಬೇಡಿಕೆಯ ವಿಚಾರದಲ್ಲೂ ಮುಂದಾಲೋಚನೆ ಇರಬೇಕು. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಉತ್ಪಾದನೆಯಾಗತಕ್ಕಂಥ ಆಹಾರ ಧಾನ್ಯಗಳನ್ನು ಯಾವ ರೀತಿ ಶೇಖರಣೆ ಮಾಡಬೇಕು ಪ್ರೊಕ್ಯೂರ್‌ಮೆಂಟ್ ಪಾಲಿಸಿ, ಎತ್ತುವಳಿ ಏನು ನಡೆಯುತ್ತಿದೆ ಅದನ್ನೂ ಕೂಡ ಯಾವ ರೀತಿ ಮಿಂಟ್ ಮಾಡಬೇಕು ಎನ್ನುವುದನ್ನು ಕೂಡ ಸರ್ಕಾರದವರು ಬಹಳ ವಿವೇಚನೆಯಿಂದ ಮಾಡಬೇಕು. ರಾಜ್ಯದ ಜನಸಂಖ್ಯೆಯ ಆಧಾರದ ಮೇಲೆ ಪರ್ ಕ್ಯಾಪಿಟ ಡಿಮ್ಯಾಂಡ್ ಏನು ಇದೆ ಅದರ ಆಧಾರದ ಮೇಲೆ ನಮ್ಮಲ್ಲಿ ಎಷ್ಟು ಬಫರ್ ಸ್ಟಾಕ್ ಇದೆ, ನಾವು ಎಷ್ಟು ಲೆವಿ ಮೂಲಕ ಸಂಗ್ರಹಣೆ ಮಾಡುತ್ತೇವೆ, ಯಾವ ಯಾವ ಆಹಾರ ಧಾನ್ಯಗಳನ್ನು ಕೇಂದ್ರಕ್ಕೆ ಒತ್ತಡವನ್ನು ತಂದು ಪಡೆದುಕೊಳ್ಳಬೇಕು ಎನ್ನುವ ಈ ನೀತಿಯನ್ನು ರಾಜ್ಯ ಸರ್ಕಾರದವರು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. ನನಗೆ ಗೊತ್ತಿರುವ ಹಾಗೆ ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಇಲಾಖೆಯವರು ಮುಖ್ಯವಾಗಿ ೨-೩ ವಿಷಯಗಳಲ್ಲಿ ಒಂದು ಪಾಲಿಸಿಯನ್ನು ಮಾಡಬೇಕಾಗಿರುತ್ತದೆ. ಯಾವ ಆಹಾರದ ಬೇಡಿಕೆ ಹೆಚ್ಚಾಗಿರುತ್ತದೋ ಆ ಆಹಾರ ಧಾನ್ಯಗಳನ್ನು ಬೆಳೆಯಲು ಸರ್ಕಾರದವರು ಹೆಚ್ಚಿನ ನಿಗಾವಹಿಸಬೇಕು. ಈಗ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ಸಂಬಂಧ ಪಟ್ಟಂಥ ಕಾನೂನುಗಳನು ಎನ್‌ಫೋರ್ಸ್ ಮಾಡತಕ್ಕಂತಹ ಸೆಲ್ ಇಲ್ಲ. ಎಸೆನ್‌ಶಿಯಲ್ ಕಮಾಡಿಟೀಸ್ ಆಕ್ಟ್, ಸೆಂಟ್ರಲ್ ಗೌವರ್ನಮೆಂಟ್ ಆಕ್ಟ್ ಇದಕ್ಕೆ ಸಂಬಂಧಪಟ್ಟ ಕಾನೂನು ಏನು ಇದೆ ಅದರ ಅಡಿಯಲ್ಲಿ ೧೯೭೦ರಲ್ಲಿ ಬ್ಲಾಕ್ ಮಾರ್ಕೆಟ್ ಹೋಲ್ಡರ್ಸ್‌ಗೆ ಸಂಬಂಧಪಟ್ಟ ಹಾಗೆ ೪೨೦ ಸೆಕ್ಷನ್ ಪ್ರಕಾರ ಅವರು ಮೋಸ ಮಾಡತಕ್ಕಂಥದ್ದು ಇದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಎಂದು ಇದೆ. ಅದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಪ್ರೆಸ್ ಕಟಿಂಗ್ ಕೂಡ ನನ್ನ ಹತ್ತಿರ ಇದೆ. ಈ ರೀತಿ ಫುಡ್ ವಿಚಾರದಲ್ಲಿ ಎನ್‌ಫೋರ್ಸ್‌ಮೆಂಟ್ ಸೆಲ್ ಕಾನೂನುಗಳನ್ನು ಜಾರಿಗೆ ಕೊಟ್ಟು ವಿತರಣೆ ಮಾಡತಕ್ಕಂಥದ್ದನ್ನು ಕೂಡ ಶಾಸನ ಮಾಡಿ ಇಟ್ಟಿದ್ದಾರೆ. ಮತ್ತೊಂದು ವಿಚಾರ ಹೇಳುವುದಾದರೆ ಪ್ರೊಕ್ಯೂರ್‌ಮೆಂಟ್ ಮತ್ತು ಡಿಸ್ಟ್ರಿಬ್ಯೂಷನ್‌ಗೆ ಸಂಬಂಧಪಟ್ಟ ಹಾಗೆ ಆಹಾರ ಧಾನ್ಯಗಳನ್ನು ಎತ್ತುವಳಿ ಮಾಡತಕ್ಕಂಥದ್ದಕ್ಕೆ ಆಜ್ಞೆಯನ್ನು ರಾಜ್ಯ ಸರ್ಕಾರದವರು ಮಾಡಿದ್ದಾರೆ. ಇದು ತಮಗೆ ಗೊತ್ತಿರುವ ಹಾಗೆ ಫುಡ್ ಅಂಡ್ ಸಿವಿಲ್ ಸಪ್ಲೈ ಕಾರ್ಪೊರೇಷನ್ ಏನು ಇದೆ ಅವರಿಗೆ ಇದು ಬಿಟ್ಟಿರತಕ್ಕಂಥ ವಿಚಾರ. ಅಗತ್ಯ ವಸ್ತುಗಳ ಪ್ರೊಕ್ಯೂರ್‌ಮೆಂಟ್, ಡಿಸ್ಟ್ರಿಬ್ಯೂಷನ್ ಏನು ಇದೆ ಅದರ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಇದ್ದರೂ ಕೂಡ ಪ್ರೊಕ್ಯೂರ್‌ಮೆಂಟ್ ಪಾಲಿಸಿ ವಿಚಾರದಲ್ಲಿ ಡಿಸ್ಟ್ರಿಬ್ಯೂಷನ್ ವಿಚಾರದಲ್ಲಿ ಸ್ಟೇಟ್ ಫುಡ್ ಕಾರ್ಪೊರೇಷನ್ ಮೂಲಕ ಜವಾಬ್ದಾರಿ ಕೂಡ ಇರುತ್ತದೆ. ಅದೇ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡತಕ್ಕಂಥದ್ದನ್ನು ಕೂಡ ಸ್ಪಷ್ಟವಾಗಿ ಇಟ್ಟುಕೊಂಡು ಕೇಂದ್ರ

ಸರ್ಕಾರದ ಸಹಾಯವನ್ನು ಪಡೆದು ರಾಜ್ಯ ಸರ್ಕಾರ ವ್ಯವಸ್ಥಿತವಾಗಿ ಜಾರಿಗೆ ತರಬೇಕು. ನಮ್ಮ ಎತ್ತುವಳಿ ನೀತಿಯ ವಿಚಾರವಾಗಿ ತಮಗೆ ಗೊತ್ತಿದೆ. ಹಲವಾರು ವರ್ಷಗಳ ಅನುಭವದ ಪ್ರಕಾರ ಹೇಳುವುದಾದರೆ ಈ ಒಂದು ನೀತಿ ಒಂದು ಪಾಯಿಂಟ್‌ನಿಂದ ಮತ್ತೊಂದು ಪಾಯಿಂಟ್‌ಗೆ ಷಿಫ್ಟ್ ಆಗುತ್ತಿದೆ. ಯಾರು ರೈತರು ಬೆಳೆಯನ್ನು ತೆಗೆಯುತ್ತಿದ್ದಾರೆ, ರಾಗಿ, ಜೋಳ, ಬತ್ತ, ಇವುಗಳನ್ನು ನೇರವಾಗಿ ಪಡೆಯತಕ್ಕಂಥ ಒಂದು ಪದ್ಧತಿ ಅದನ್ನು ಕೂಡ ಜಾರಿಗೆ ಕೊಟ್ಟು ಹಲವಾರು ವರ್ಷಗಳ ಕಾಲ ನಡೆಯಿತು. ಈಗ ನೇರವಾಗಿ ಬೆಳೆಯತಕ್ಕಂಥ ಬೆಳಗಾರರಿಂದ ಲೆವಿಯನ್ನು ವಸೂಲು ಮಾಡತಕ್ಕಂಥದ್ದನ್ನು ಬಿಟ್ಟು ಮಿಲ್ ಪಾಯಿಂಟ್‌ಗಳು ಏನು ಇರುತ್ತವೆ ಅವುಗಳನ್ನು ಲೆವಿ ಪಾಯಿಂಟ್‌ಗಳಾಗಿ ಕನ್‌ವರ್ಟ್ ಮಾಡಿರತಕ್ಕಂಥದ್ದು ಈಗಿನ ಕಾನೂನು ಆಗಿದೆ. ಮಿಲ್‌ಗಳಿಂದ ನೇರವಾಗಿ ವಸೂಲು ಮಾಡತಕ್ಕಂಥದ್ದು ಹೇಗೆ ಎಂದರೆ ಅವರು ಎಷ್ಟು ಹಲ್ಲಿಂಗ್ ಮಾಡಿರುತ್ತಾರೆ ಅದರಲ್ಲಿ ೫೦ ಪರ್ಸೆಂಟ್ ಟ್ರೇಡರ್ಸ್‌ನಿಂದ ೭೫ ಪರ್ಸೆಂಟ್ ವಸೂಲು ಮಾಡತಕ್ಕಂಥ ನೀತಿ ರಾಜ್ಯ ಸರ್ಕಾರದ್ದು ಇರುತ್ತದೆ. ವಸೂಲು ಮಾಡತಕ್ಕಂಥ ವಿಚಾರದಲ್ಲಿ ಕಟ್ಟುನಿಟ್ಟಾದ ಕಾನೂನನ್ನು ರಾಜ್ಯ ಸರ್ಕಾರದವರು ಜಾರಿಗೆ ಕೊಡದಿದ್ದರೆ ನಮಗೆ ಎಷ್ಟು ರಿಕ್ವೈಯರುಮೆಂಟ್, ಬೇಡಿಕೆ ಇದೆ ಅಷ್ಟನ್ನು ಪೂರೈಕೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಕಾನೂನನ್ನು ಜಾರಿಗೆ ಕೊಡತಕ್ಕಂಥ ವಿಚಾರದಲ್ಲಿ ಇಲಾಖೆ ಒಳ್ಳೆಯ ಅಧಿಕಾರಿಗಳ ಕೈಗೆ ಅಧಿಕಾರವನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲು ಬಿಡಬೇಕು. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ರೈಸ್ ಮಿಲ್‌ಗಳಲ್ಲಿ ಪವರ್ ಎಷ್ಟು ಉಪಯೋಗ ಮಾಡಿರುತ್ತಾರೆ ಅಷ್ಟು ಬತ್ತವನ್ನು ಹಲ್ಲಿಂಗ್ ಮಾಡಿರುತ್ತಾರೆಂಬುದರ ಲೆಕ್ಕಾಚಾರ ಸಿಕ್ಕಿಬಿಡುತ್ತದೆಂಬ ವಿಚಾರ ಅನೇಕ ಸಾರಿ ಈ ಸದನದಲ್ಲಿ ಚರ್ಚೆಗೆ ಬಂದಿರುತ್ತದೆ. ಎಷ್ಟು ಪವರ್ ಕನ್‌ಸಂಪ್‌ಷನ್ ರೈಸ್ ಮಿಲ್‌ನಲ್ಲಿ ಮಾಡಿರುತ್ತಾರೋ ಅದರ ಪ್ರಮಾಣಕ್ಕೆ ಅನುಗುಣವಾಗಿ ಹಲ್ಲಿಂಗ್ ಆಗಿರುತ್ತದೆ. ಆದರೆ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳನ್ನು ಒಳಗೆ ಹಾಕಿಕೊಂಡು ಈ ಮಿಲ್ ಮಾಲೀಕರು ಶ್ರೀಮಂತರಾಗುತ್ತಿದ್ದಾರೆ. ಇದು ಹಲವಾರು ವರ್ಷಗಳಿಂದ ಅಂಟಿಕೊಂಡು ಬಂದಿರತಕ್ಕಂಥ ಒಂದು ರೋಗ. ಇದರ ಬಗ್ಗೆ ಯಾರೂ ಅನುಮಾನ ಪಡಬೇಕಾಗಿಲ್ಲ, ಯಾವುದೇ ಒಂದು ಸರ್ಕಾರ ಕಾರ್ಯ ನಿರ್ವಹಣೆ ಮಾಡತಕ್ಕಂಥ ವಿಚಾರದಲ್ಲಿ ಯಾವುದೇ ಇಲಾಖೆ ಇರಲಿ ಒಳ್ಳೆಯವರ ಕೈಯಲ್ಲಿ ಇರಬೇಕು. ನನಗೆ ಗೊತ್ತಿರುವ ಹಾಗೆ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ತಹಸೀಲ್ದಾರ್ ಏನು ಇರುತ್ತಾರೆ ಅವರಿಂದ ಪ್ರಾರಂಭವಾಗಿ ಫುಡ್ ಇನ್ಸ್‌ಪೆಕ್ಟರ್‌ರವರು ಫೇರ್ ಪ್ರೈಸ್ ಷಾಪ್‌ಗೆ ಪೀರಿಯಾಡಿಕಲ್ ಆಗಿ ದಾಸ್ತಾನು ಬಂದ ತಕ್ಷಣವೇ ಅದನ್ನು ಸರಿಯಾಗಿ ಚಕ್ಕಿಂಗ್ ಮಾಡಬೇಕು. ಅದನ್ನು ಸರಿಯಾಗಿ ಡಿಸ್ಟ್ರಿಬ್ಯೂಷನ್ ಮಾಡಬೇಕು. ಇಲ್ಲದಿದ್ದರೆ ಆಹಾರ ಧಾನ್ಯಗಳ ವಿತರಣೆಯ ವಿಚಾರದಲ್ಲಿ ಸರ್ಕಾರ ವಿಫಲವಾಗುತ್ತದೆ ಎನ್ನುವ ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಇದು ಅನೇಕ ಬಾರಿ ಸರ್ಕಾರದ ಗಮನಕ್ಕೆ ಬಂದು ಅನುಭವ ಕೂಡ ಆಗಿರುತ್ತದೆ. ಆಹಾರ ಧಾನ್ಯಗಳ ವಿಚಾರವಾಗಿ ತಹಶೀಲ್‌ದಾರರು ಒಂದು ಹೇಳಿಕೆಯನ್ನು ಕೊಟ್ಟಿರತಕ್ಕಂಥದ್ದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ನೋಡಿದಾಗ ನಮಗೆ ಎಷ್ಟು ಬೇಕಾಗುತ್ತದೆ, ಇಷ್ಟೊಂದು ಆಹಾರದ ಕೊರತೆ ಹೇಗೆ, ಇದು ಏತಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ನಮಗೆ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೇ ಅವರ ಅಂಕಿ ಅಂಶಗಳ ಪ್ರಕಾರ ಉದಾಹರಣೆಗೆ ಅಕ್ಕಿಯನ್ನೇ ತೆಗೆದುಕೊಂಡಾಗ ನಮಗೆ ೧೯೮೧ರ ಸೆನ್ಸಸ್ ಪ್ರಕಾರ ೬ ಲಕ್ಷ ಟನ್ ಆಹಾರ ಧಾನ್ಯಗಳು ಬೇಕಾಗುತ್ತದೆ, ಅಕ್ಕಿಯ ಬಗ್ಗೆ ಹೇಳುವುದಾದರೆ, ೨೧.೬೪ ಲಕ್ಷ ಟನ್ ನಮಗೆ ಬೇಕಾಗುತ್ತದೆ. ಪ್ರೊಡಕ್ಷನ್ ಎಷ್ಟಾಗುತ್ತದೆ ಎಂದರೆ ೨೧.೨೩. ಅಂದರೆ ನಮಗೆ ಕೊರತೆ ಬೀಳತಕ್ಕಂಥದ್ದು ೦.೪೧. ಅಂದರೆ ನಾವು ಇಷ್ಟು ಆಹಾರವನ್ನು ಹೆಚ್ಚಿಗೆ ಪ್ರೊಡಕ್ಷನ್ ಮಾಡಬೇಕು ಎನ್ನುವ ವಿಚಾರ ಸ್ಪಷ್ಟವಾಗಿ ಗೊತ್ತಾಗುತ್ತದೆ.

೩-೦೦ ಪಿ.ಎಂ.

ತಮಗೆಲ್ಲಾ ಗೊತ್ತಿರುವಂತೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಕ್ಕಿಯ ಕೊರತೆ ಬರಲು ಸಾಧ್ಯವಿಲ್ಲ. ಏಕೆಂದರೆ, ಪಟ್ಟಣ ಪ್ರದೇಶಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೂಲಕ, ಸೊಸೈಟಿಗಳ ಮೂಲಕ ಹಾಗೂ ಯೂತ್-ಕ್ಲಬ್‌ಗಳ ಮೂಲಕ ಜನರಿಗೆ ಹಂಚಲು ಅಕ್ಕಿ ಬೇಕಾಗಿರುವುದು ೨೧.೬೪ ಲಕ್ಷ ಟನ್‌ಗಳು. ಈಗ ಉತ್ಪಾದನೆಯಾಗುತ್ತಿರುವುದು ೨೧.೨೩ ಲಕ್ಷ ಟನ್‌ಗಳು, ಆದ್ದರಿಂದ ಸ್ವಲ್ಪ ಹೆಚ್ಚು ಕಡಿಮೆ ನಮಗೆ ಬೇಕಾದಂಥ ಅಕ್ಕಿಯ ಉತ್ಪಾದನೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ. ಆದರೆ ಬೇರೆ ಆಹಾರಧಾನ್ಯಗಳ ಕೊರತೆ ಇದೆ. ಅಗತ್ಯ ವಸ್ತುಗಳಲ್ಲಿ ಸೀಮೆ ಎಣ್ಣೆಯೂ ಸಹ ಒಂದು. ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಕೇಂದ್ರದಿಂದ ಪಡೆಯಲು ನಮ್ಮ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ. ಈ ಮೊದಲು ಕೆ.ಜಿ. ರಾಗಿಯ ಬೆಲೆ ಒಂದು

ರೂಪಾಯಿ ಮೇಲೆ ಹೋಗಿರಲಿಲ್ಲ. ಆದರೆ ಈಗ ರಾಗಿ, ಜೋಳ ಮುಂತಾದ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳೂ ಸಹ ಹೆಚ್ಚಿವೆ. ಇಂತಹ ಸಂದರ್ಭಗಳಲ್ಲಿ ಇವುಗಳನ್ನು ಬೆಳೆಯುವ ರೈತರ ಬಗ್ಗೆಯೂ ಸಹ ನಾವು ಯೋಚನೆ ಮಾಡಬೇಕಾಗುತ್ತದೆ. ಈ ಆಹಾರ ಧಾನ್ಯಗಳನ್ನು ಜಪಾನ್, ಅಮೇರಿಕಾ ಹಾಗೂ ಇನ್ನಿತರ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾವ ರೀತಿ ಬೆಳೆಯುತ್ತಾರೆಂಬುದನ್ನು ಈಗ ಹೇಳಲು ಹೋಗುವುದಿಲ್ಲ. ಈಗ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಬಹುದು, ಇಲ್ಲವೇ ಹೋಗಬಹುದು, ಸರ್ಕಾರ ಬರುತ್ತದೆ ಹೋಗುತ್ತದೆ, ಅದು ಮುಖ್ಯವಲ್ಲ. ಆದರೆ ನನ್ನ ಮನಸ್ಸಿಗೆ ನೋವಾಗತಕ್ಕಂಥ ವಿಚಾರವೆಂದರೆ, ಹೆಚ್ಚಾಗಿ ಬತ್ತ ಬೆಳೆಯುತಕ್ಕಂಥ ಕಡೆಗಳಲ್ಲಿಯೇ ಇವೊತ್ತು ಶೇಕಡಾ ೯೦ ರಿಂದ ೯೫ ರಷ್ಟು ಬತ್ತವೇ ಇಲ್ಲ. ಪರಿಸ್ಥಿತಿ ಇಷ್ಟೊಂದು ಹದಗೆಟ್ಟು ಹೋಗಿರುವುದನ್ನು ನೋಡಿ ನನ್ನೆದೆ ಒಡೆದು ಹೋಯಿತು. ಬತ್ತದ ಬೆಲೆ ಕ್ವಿಂಟಾಲ್‌ಗೆ ಯಾವಾಗಲು ೨೦೦ ರೂಪಾಯಿಗಳ ಮೇಲೆ ಹೋಗಿರಲಿಲ್ಲ. ಆದರೆ ಇವೊತ್ತು ನಾನಾ ದರ್ಜೆಯ ಬತ್ತದ ಬೆಲೆ ೨೪೦ ರೂಪಾಯಿಗಳಿಂದ ೨೭೫ ರೂಪಾಯಿಗಳವರೆಗೂ ಹೋಗಿದೆ. ಅದೇ ಲೆವಿ ದರ ಯಾವ ಯಾವ ದರ್ಜೆಯ ಬತ್ತಕ್ಕೆ ಎಷ್ಟೆಷ್ಟು ಇದೆ ಎಂಬುದನ್ನು ಇಲ್ಲಿ ಕೊಟ್ಟಿದ್ದಾರೆ. ಈ ಸರ್ಕಾರದ ದರಕ್ಕೂ ಮತ್ತು ಮುಕ್ತ ಮಾರುಕಟ್ಟೆಯ ದರಕ್ಕೂ ಕನಿಷ್ಟ ಪಕ್ಷ ೧೫೦ ರೂಪಾಯಿಗಳ ವ್ಯತ್ಯಾಸವಿದೆ. ನೆನ್ನೆಯ ದಿವಸ ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿದ್ದ ದರ ೨೬೦ ರಿಂದ ೨೭೫ ರೂಪಾಯಿಗಳು. ಜೋಳ, ರಾಗಿ ಮುಂತಾದ ಯಾವುದೇ ಆಹಾರ ಧಾನ್ಯ ತೆಗೆದುಕೊಂಡರೂ ಸಹ ಸರ್ಕಾರದ ಲೆವಿ ಧಾರಣೆಗೂ ಮತ್ತು ಮುಕ್ತ ಮಾರುಕಟ್ಟೆ ಧಾರಣೆಗೂ ಬಹಳ ವ್ಯತ್ಯಾಸವಿದೆ, ಆದರೆ ಎಲ್ಲರೂ ಮುಕ್ತ ಮಾರುಕಟ್ಟೆಯಲ್ಲಿ ಕೊಳ್ಳಲು ಸಾಧ್ಯವಿಲ್ಲವೆಂಬ ಕಾರಣದಿಂದ ಸರ್ಕಾರ ಒಳ್ಳೆಯ ಅಕ್ಕಿಯನ್ನು ಕೆ.ಜಿ.ಗೆ ೨ ರೂಪಾಯಿ ಹತ್ತು ಪೈಸೆ ದರದ ಪ್ರಕಾರ ಗ್ರಾಹರಿಗೆ ಮಾರಾಟ ಮಾಡುತ್ತಿದೆ ಕೆಲವು ಸಲ ಗೋಡನ್‌ಗಳಲ್ಲಿ ಅಕ್ಕಿ ಏನಾದರೂ ಕೆಟ್ಟು ಹೋಗಿದ್ದರೆ ಅಂತಹ ಅಕ್ಕಿಯನ್ನು ಗ್ರಾಹಕರಿಗೆ ಕೊಡದಂತೆ ಸರ್ಕಾರ ನೋಡಿಕೊಳ್ಳಬೇಕು. ಈಗಿನ ಆಹಾರ ಇಲಾಖೆಯ ನಿರ್ದೇಶಕರು ಒಳ್ಳೆಯವರಾಗಿದ್ದಾರೆ. ಇವರು ಮೊದಲು ಮಂಗಳೂರಿನ ಡಿ. ಸಿ. ಆಗಿದ್ದರು. ಇವರು ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಿದ್ದನ್ನು ನಾನು ನೋಡಿದ್ದೇನೆ. ಇವರು ಒಳ್ಳೆಯ ಕೆಲಸ ಮಾಡತಕ್ಕಂಥ ಒಬ್ಬ ನಿಷ್ಟಾವಂತ ಅಧಿಕಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಇಂಟರ್‌ಫಿಯರ್ ಆಗದೇ ಅವರಿಗೇ ಸಂಪೂರ್ಣವಾದ ಅಧಿಕಾರ ಕೊಟ್ಟರೆ ಚೆನ್ನಾಗಿ ಕೆಲಸ ಮಾಡುತ್ತಾರೆ. ಈಗ ಬೆಂಗಳೂರಿನ ಜನರಿಗೆ ಸಬ್ಸಿಡಿ ಮೂಲಕ ಅಕ್ಕಿಯನ್ನು ಕಡಿಮೆ ಬೆಲೆಗೆ ಒದಗಿಸಲಾಗುತ್ತಿದೆ. ನಮ್ಮದು ಕೊರತೆಯ ಬಡ್ಜೆಟ್ ಆದರೂ ಸಹ ಇಲ್ಲಿ ಸಬ್ಸಿಡಿ ಕೊಡಲಾಗುತ್ತಿದೆ. ಈ ಸಬ್ಸಿಡಿ ದರದ ಅಕ್ಕಿಯನ್ನು ಇನ್ನು ಮುಂದೆ ವಾರ್ಷಿಕವಾಗಿ ೬ ಸಾವಿರಕ್ಕಿಂತ ಕಡಿಮೆ ಆದಾಯವಿರುವವರಿಗೆ ಮಾತ್ರ ಕೊಡಬೇಕು, ಇದಕ್ಕಿಂತ ಜಾಸ್ತಿ ಆದಾಯ ಇರುವವರಿಗೆ ಕೊಡಬಾರದು ಎಂಬತಕ್ಕಂಥ ವಿಚಾರ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿದೆ ಎಂದು ನನಗೆ ತಿಳಿದು ಬಂದಿದೆ. ಈ ಬಗ್ಗೆ ಪತ್ರವ್ಯವಹಾರಗಳೂ ಸಹ ನಡೆದಿದೆ ಎಂದು ಗೊತ್ತಾಗಿದೆ ಈಗ ಬೆಲೆ ಸೂಚ್ಯಾಂಕ ಎಷ್ಟರಮಟ್ಟಿಗೆ ಹೆಚ್ಚಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಸರ್ಕಾರದ ಸಬ್ಸಿಡಿ ಅಕ್ಕಿ ಪಡೆಯಲು ೬ ಸಾವಿರ ರೂಪಾಯಿಗಳ ವರಮಾನದ ಮಿತಿ ಏನಾದರೂ ಇಟ್ಟರೆ, ಸರ್ಕಾರದ ಕಛೇರಿ ಬಾಗಿಲು ಕಾಯುವ ಲಾಯತ್ ಕಾರ್ಪೊರೇಷನ್‌ನಲ್ಲಿ ಕಸ ಗುಡಿಸುವ ಬಡ ವರ್ಗದ ನೌಕರರೂ ಸಹ ಇದರ ಅನುಕೂಲ ಪಡೆಯಲು ಸಾಧ್ಯವಾಗುವುದಿಲ್ಲ. ಮಧ್ಯಮ ವರ್ಗದವರಿಗೆಲ್ಲಾ ಇದರ ಪೆಟ್ಟು ಬೀಳುತ್ತದೆ. ಏಕೆಂದರೆ ಇವೊತ್ತು ಇವರುಗಳ ವಾರ್ಷಿಕ ಆದಾಯವೂ ಸಹ ೬ ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇದೆ. ಆದ್ದರಿಂದ ಈ ಒಂದು ಕ್ರಮವನ್ನು ಅನುಸರಿಸದೆ ಬೆಂಗಳೂರು ಹಾಗೂ ಇನ್ನಿತರ ೩೧ ನಗರಗಳಲ್ಲಿ ಅನೌಪಚಾರಿಕ ಪಡಿತರ ಪದ್ಧತಿ ಮೂಲಕ ನ್ಯಾಯಬೆಲೆ ಅಂಗಡಿಗಳ ಮೂಲಕ ಒಳ್ಳೆಯ ಅಕ್ಕಿಯನ್ನು ಕಡಿಮೆ ದರದಲ್ಲಿ ಏನು ಒದಗಿಸುತ್ತಿದ್ದೀರಿ, ಇದನ್ನು ಮುಂದುವರೆಸಬೇಕೆಂದು ಹೇಳುತ್ತೇನೆ. ಈ ಒಂದು ಜವಾಬ್ದಾರಿ ನಿಮ್ಮ ಮೇಲಿದೆ. ಇಲ್ಲದಿದ್ದರೆ ಬಡವರಿಗೆ ಕಷ್ಟವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈಗಿನ ಪದ್ಧತಿಯನ್ನೇ ಮುಂದುವರೆಸುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದರೆ ನನಗೆ ಸಂತೋಷವಾಗುತ್ತದೆ.

ಇನ್ನು ನಮ್ಮ ಮಲೆನಾಡು ಪ್ರದೇಶದಲ್ಲಿ ಬತ್ತವನ್ನು ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿನಿಂದ ಹಿಡಿದು ಜನವರಿ ತಿಂಗಳವರೆಗೆ ಕಟಾವ್ ಮಾಡಲಾಗುತ್ತಿದೆ. ಆದ್ದರಿಂದ ಪ್ರೊಕ್ಯೂರ್‌ಮೆಂಟ್ ಪಾಲಿಸಿಯನ್ನು ಈ ಸಮಯದಲ್ಲಿಯೇ ನಿಶ್ಚಯ ಮಾಡಬೇಕಾಗುತ್ತದೆ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಿದ್ದು ಜನವರಿ ತಿಂಗಳಲ್ಲಿ. ಆದರೂ ಸಹ ಅಧಿಕಾರಕ್ಕೆ ಬಂದ ಕೂಡಲೆ ಲೆವಿ

ನೀತಿಯನ್ನು ತಕ್ಷಣವೇ ಪ್ರಕಟಣೆ ಮಾಡುವುದರ ಮೂಲಕ ಆಹಾರ ಧಾನ್ಯವನ್ನು ಸಂಗ್ರಹ ಮಾಡಿದ್ದರೆ ಈ ರಾಜ್ಯದ ಬೇಡಿಕೆಗೆ ಬೇಕಾದ ಆಹಾರ ಧಾನ್ಯವನ್ನು ಜನತೆಗೆ ಹಂಚಬಹುದಾಗಿತ್ತು. ತುಂಗಭದ್ರಾ, ಭದ್ರಾ ಮುಂತಾದ ಜಲಾಯನ ಪ್ರದೇಶಗಳಲ್ಲಿ ಹಾಗೂ ಕೃಷ್ಣಾ ಬೇಸಿನ್‌ನಲ್ಲಿ ಬತ್ತವನ್ನು ಕಟಾವು ಮಾಡುವುದು ಬಹಳ ತಡವಾಗುತ್ತದೆ. ಇದರ ಜೊತೆಗೆ ಮಳೆ ನೀರಿನ ಆಶ್ರಯದಲ್ಲಿ ಬತ್ತ ಬೆಳೆಯುತಕ್ಕಂಥ ಪ್ರದೇಶಗಳಲ್ಲಿಯೂ ಸಹ ಕಟಾವು ಮಾಡುವುದು ನಿಧಾನವಾಗುತ್ತದೆ. ಈ ರೀತಿ ನಿಧಾನವಾಗುವುದರಿಂದ ರೈತರು ನಾನಾ ಕಡೆಗಳಲ್ಲಿ ಮಾಡಿರುವಂತಹ ಸಾಲವನ್ನು ತೀರಿಸಲು ಮತ್ತು ಸಾಲಗಾರರ ಕಾಟವನ್ನು ತಾಳಲಾರದೆ ತಾವು ಬೆಳೆದಿದ್ದನ್ನು ಬಂದಷ್ಟು ಬೆಲೆಗೆ ಮಾರಾಟ ಮಾಡಿಬಿಡುತ್ತಾರೆ.

ಮಾನ್ಯ ಅಧ್ಯಕ್ಷರೇ, ಅನಿವಾರ್ಯವಾಗಿ ಮಾರಾಟ ಮಾಡುವಂತಹ ಸಂದರ್ಭಗಳು ಅಕ್ಟೋಬರ್ ತಿಂಗಳಿಂದ ಪ್ರಾರಂಭವಾಗುತ್ತದೆ. It goes on up to end of February and March. ಬೇರೆ ಬೇರೆ ಪ್ರದೇಶಗಳಲ್ಲಿ ಕಾಲಕ್ಕೆ ಅನುಸಾರವಾಗಿ ಕೊಯ್ಲಿಗೆ ಅನುಸಾರವಾಗಿ ಇದು ನಡೆಯುತ್ತದೆ. ಇದಕ್ಕೆ ಸರ್ಕಾರ, ಲೆವಿನೀತಿಯನ್ನು ಪ್ರಕಟಿಸಿ, ಬೆಲೆ ನೀತಿಯ ಬಗ್ಗೆ ಮಾತನಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್ ಇದೆ. ಗೋಧಿ. ಭತ್ತ, ರಾಗಿ ಯಾವುದೇ ಇರಬಹುದು ಅದರ ಬಗ್ಗೆ ತಾವೊಂದು ನೀತಿಯನ್ನು ಮಾಡಬೇಕು. ಹೆಚ್ಚಿನ ಬೆಲೆಯನ್ನು ಕೊಡದಿದ್ದರೆ ಕೆಳಗಿನ ಉತ್ಪಾದನಾ ದೃಷ್ಟಿಯಿಂದ ರಾಜ್ಯ ಸರ್ಕಾರ ಹೆಚ್ಚಿನ ಬೆಲೆಯನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಬೆಂಬಲ ಬೆಲೆಯನ್ನು ಪ್ರಕಟ ಮಾಡುತ್ತಾರೆ. ಆ ಬೆಲೆಯನ್ನು ಜಾರಿಗೆ ತಂದಾಗ ಕಾರಣಾಂತರಗಳಿಂದ ಒಂದು ಕ್ವಿಂಟಾಲ್ ಬೆಲೆ ೧೨೦, ೧೨೫ ರೂಪಾಯಿಗಳು ಇದ್ದದ್ದು ೧೩೦ರಿಂದ ೧೩೫ ರೂಪಾಯಿಗಳವರೆಗೆ ಹೋಯಿತು. ರಾಗಿ, ಜೋಳ, ಬತ್ತ ಹೀಗೆ ಅದು ಯಾವುದೇ ಇರಬಹುದು ಅವುಗಳ ಬೆಲೆಯನ್ನು ನಿಗದಿ ಮಾಡತಕ್ಕ ನೀತಿಯನ್ನು ಇಟ್ಟುಕೊಂಡಿದ್ದೀರಿ. ಈ ಸರ್ಕಾರ ಜನವರಿಯಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಜೋಳ, ರಾಗಿ, ಬತ್ತ, ಮೆಣಸಿನಕಾಯಿ ಅದು ಯಾವುದೇ ಇರಬಹುದು ಈ ರೀತಿ ದವಸಧಾನ್ಯಗಳನ್ನು ಕಡಿಮೆ ಧಾರಣೆಗೆ ಕೊಡುತ್ತೇವೆಂದು ಹೇಳಿ ೧೦೦ ರೂಪಾಯಿಗಳು ಇದ್ದದನ್ನು ೯೫ ರೂಪಾಯಿಗಳಿಗೆ ಇಳಿಸಿದರು. ಆದರೆ, ರೈತರ ಪರಿಸ್ಥಿತಿ ಏನು? ಮಾನ್ಯ ಬಸವಣ್ಣಪ್ಪನವರು ಕೂಡ ನನ್ನ ಪಕ್ಕದ ತಾಲ್ಲೂಕಿನವರು ಅವರಿಗೆ ಇದು ಗೊತ್ತಿದೆ. ಒಂದು ಕ್ವಿಂಟಾಲ್ ರಾಗಿ, ಬತ್ತ, ಜೋಳಕ್ಕೆ ೧೨೦ ರೂಪಾಯಿಗಳು ಹೆಚ್ಚು ಅಂದರೆ ೧೩೦ ರೂಪಾಯಿಗಳವರೆಗೂ ಹೋಯಿತು. ಇದು ಮಾರ್ಚಿ ತಿಂಗಳವರೆಗೂ ಹೋಯಿತು. ಎಲ್ಲಿ ಯಾವ ಪದಾರ್ಥಗಳನ್ನು ಬೆಳೆಯುತ್ತಾರೆ ಅಲ್ಲಿಯೇ ಕಡಿಮೆ ಬೆಲೆಗೆ ಧಾನ್ಯಗಳು ಸಿಗುವುದು ರೈತರ ಕೈತಪ್ಪಿ ಹೊರಟು ಹೋಯಿತು. ತಾವು ಲೆವಿ ಪದ್ಧತಿಯನ್ನು ಬಲಪಡಿಸಬೇಕೆಂದು ಕಾನೂನನ್ನು ತಂದು ಬಾರ್ಡರ್ ಏರಿಯಾಗಳಲ್ಲಿ ರಾಜ್ಯದ ಗಡಿ ಸ್ಥಳಗಳಲ್ಲಿ ಹೊರಗಡೆ ಹೋಗತಕ್ಕ ಆಹಾರ ಪದಾರ್ಥಗಳನ್ನು ತಡೆಯಲಿಕ್ಕೆ ತಮ್ಮ ಸರ್ಕಾರ ರಚನೆಯಾದ ಕೆಲವು ತಿಂಗಳುಗಳ ಮೇಲೆ ಈ ಒಂದು ಕಾನೂನನ್ನು ತಂದಿರಿ, ಈ ಬಿಗಿಯಾದ ಕಾನೂನನ್ನು ಮೊದಲೇ ತಂದಿದ್ದರೆ ಅಷ್ಟು ಪ್ರಮಾಣದ ಬತ್ತ ನಿಮ್ಮಿಂದ ಬಿಟ್ಟು ಹೊರಗಡೆ ಹೋಗುವುದಕ್ಕೆ ಕಾರಣವಾಗುತ್ತಿರಲಿಲ್ಲ. ನಿಮಗೆ ಎಷ್ಟು ಬೇಕೋ ಅಷ್ಟು ಭತ್ತದ ಸಂಗ್ರಹ ಸಿಗುತ್ತಿತ್ತು, ಇದು ಸಾಧ್ಯವಾಗುತ್ತಿತ್ತು. ಬೇರೆ ಬೇರೆ ದರಗಳಲ್ಲಿ ಖರೀದಿ ಮಾಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕಾಗಿತ್ತು. ನೀವು ಭತ್ತ, ರಾಗಿಯನ್ನು ರೈತರಿಗೆ ಕ್ವಿಂಟಾಲ್ ಒಂದಕ್ಕೆ ೨೦೦ ರೂಪಾಯಿಗಳಿಗೆ ಕೊಟ್ಟು ಕೊಂಡುಕೊಂಡು ಕಡಿಮೆ ದರದಲ್ಲಿ ಗ್ರಾಹಕರಿಗೆ ಕೊಟ್ಟಿದ್ದರೆ ಸಂತೋಷಪಡಬಹುದಾಗಿತ್ತು. ಆದರೆ ಬೆಳೆದವನಿಗೆ ಹೆಚ್ಚಿನ ಬೆಲೆ ಸಿಕ್ಕಿಲ್ಲ. ಮಧ್ಯದಲ್ಲಿರತಕ್ಕವರು ಹಣವಂತರು ಕಡಿಮೆ ದರದಲ್ಲಿ ಜೋಳ, ರಾಗಿ, ಭತ್ತ, ಮೆಣಸಿನಕಾಯಿ ಎಲ್ಲವನ್ನು ಕೊಂಡುಕೊಂಡು ಸ್ಟಾಕ್ ಮಾಡಿ ಇಟ್ಟರು, ವ್ಯಾಪಾರಸ್ಥರ ಅಂಗಡಿಗಳನ್ನು ಮುಚ್ಚಿಸಬೇಕೆಂದು ನಾನು ಹೇಳುತ್ತಿಲ್ಲ. ವ್ಯಾಪಾರಸ್ಥರು ಯಾವುದು ಸಿಗುತ್ತದೋ ಅದನ್ನೆಲ್ಲಾ ಕೊಳ್ಳುತ್ತಾರೆ, ಸ್ಟಾಕ್ ಮಾಡುತ್ತಾರೆ.

ಶ್ರೀ ಕೆ.ಎಚ್. ರಂಗನಾಥ್.—ಅವರು ಮನುಷ್ಯರನ್ನು ಕೊಳ್ಳುತ್ತಾರೆಯೆ?

ಶ್ರೀ ಎಂ.ಎಸ್. ಕೃಷ್ಣನ್.—ಅವರನ್ನು ಕೊಂಡುಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಭತ್ತ ವಗೈರೆ ಬಾರ್ಡರ್ ಏರಿಯಾಗಳಲ್ಲಿ ಸೀಜ್ ಮಾಡತಕ್ಕ ಒಂದು ಕಾನೂನನ್ನು ಜಾರಿಗೆ ತಂದ ಮೇಲೆ, ಭತ್ತದ ಮೇಲೆ ಕಂಟ್ರೋಲ್ ತಂದಮೇಲೆ ಇದು ಈ ಒಂದು ಮಟ್ಟಕ್ಕೆ ಹೋಗಿ ಮುಟ್ಟಿದೆ. ರಾಗಿಯ ಬೆಲೆ ಕೆ.ಜಿ. ಯೊಂದಕ್ಕೆ ೧ ರೂಪಾಯಿಗಳಿಗಿಂತ ಎಂದೂ ಹೆಚ್ಚಾಗಿರಲಿಲ್ಲ. ಹಿಂದೆ ರಾಗಿ ಕೆ.ಜಿ.ಗೆ ೧ ರೂಪಾಯಿ ೬೦ ಪೈಸೆ ಚಿಲ್ಲರೆ ಇತ್ತು. ಇವತ್ತು ಎಷ್ಟಾಗಿದೆ? ಇವತ್ತು ಒಂದು ಕೆ.ಜಿ.ಯ ರಾಗಿ ಬೆಲೆ ೨–೫೦ ಪೈಸೆಯಿಂದ ೨–೬೦ ಪೈಸೆಯವರೆಗೂ

ಹೋಗಿದೆ. ಈ ಒಂದು ಬಿಗಿ ಹಿಡಿತವನ್ನು ಇಟ್ಟು ಅಕ್ಕಿ, ರಾಗಿ, ಜೋಳ ಇವುಗಳನ್ನು ಕಡಿಮೆ ದರದಲ್ಲಿರುವಂತೆ ಮಾಡಬೇಕಾಗಿತ್ತು.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ರಾಗಿ ಕ್ವಿಂಟಾಲ್ ೧೬೦ರಿಂದ ೧೭೦ ರೂಪಾಯಿಗಳಿಗೆ ಸಿಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ಸದಸ್ಯರು ಆಹಾರ ಮಂತ್ರಿಗಳು ಪ್ರಶ್ನೆಯೊಂದಕ್ಕೆ ಕೊಟ್ಟ ಉತ್ತರವನ್ನು ಗಮನಿಸಿದ್ದೀರಾ? ರಾಗಿ, ಜೋಳ, ಇವುಗಳ ಬೆಲೆ ಹೇಗಿದೆ ಎಂಬುದನ್ನು ಅವರು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕಡಿಮೆ ದರದಲ್ಲಿ ಆಹಾರ ಪದಾರ್ಥಗಳು ಸಿಕ್ಕಿದರೆ ಸಂತೋಷಪಡೋಣ.

ಶ್ರೀ ಪಂಪಾಪತಿ.—ಕಡಿಮೆ ದರದಲ್ಲಿ ರಾಗಿ ಸಿಗುತ್ತದೆ ಎಂದರೆ ಅದರಲ್ಲಿ ಮಣ್ಣು ಕಲ್ಲು ಕಸಕಡ್ಡಿ ಎಲ್ಲಾ ಇರುತ್ತದೆ. ಅದನ್ನು ಕಡಿಮೆ ಬೆಲೆಗೆ ಕೊಡುತ್ತಾರೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಆಹಾರ ಧಾನ್ಯಗಳ ಬೆಲೆಗಳು ಏರುಪೇರು ಆಗತಕ್ಕದ್ದು ಯಾರ ಕೈಯಲ್ಲೂ ಇಲ್ಲ. ಬೇಡಿಕೆ ಮತ್ತು ಪೂರೈಕೆ ಆಧಾರದ ಮೇಲೆ ಧಾರಣೆವಾಸಿಗಳು ಹೆಚ್ಚು ಕಮ್ಮಿ ಆಗುತ್ತವೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಸದಸ್ಯರಾದ ಲಕ್ಷ್ಮಯ್ಯನವರು ಮೊದಲು ಅಬಕಾರಿ ಮಂತ್ರಿಗಳ ವಕಾಲತ್ತು ವಹಿಸಿದ್ದರು. ಈಗ ಫುಡ್ ಮಿನಿಸ್ಟರ್ ಪರವಾಗಿ ವಕಾಲತ್ತು ವಹಿಸುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬೇಡಿಕೆ ಮತ್ತು ಪೂರೈಕೆ ವ್ಯತ್ಯಾಸವಾದಾಗ ಅದೂ ಸೇರಿಕೊಳ್ಳುತ್ತವೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಸರ್ಕಾರ ದಾಸ್ತಾನು ಇಡತಕ್ಕ ವಿಚಾರಕ್ಕೆ ಮುಂದೆ ಬರುತ್ತೇನೆ. ನಾನು ಹೇಳುತ್ತಿರುವುದು ಭತ್ತ ರಾಗಿ, ಜೋಳ ಬೆಳೆಯುತಕ್ಕವರ ಕೈತಪ್ಪಿ ಹೋದ ಮೇಲೆ ಬೆಲೆ ಜಾಸ್ತಿಯಾಗುತ್ತದೆ. ಮುಕ್ತ ಮಾರುಕಟ್ಟೆಯ ಬೆಲೆಗೆ ಧಾನ್ಯಗಳು ಸಿಗುವುದಿಲ್ಲ. ಬೇರೆ ಅಗತ್ಯ ವಸ್ತುಗಳು ಬೇಳೆ, ಎಣ್ಣೆ ಇವುಗಳು ಸಹ ಕಡಿಮೆ ಬೆಲೆಗೆ ದೊರೆಯುವುದಿಲ್ಲ. ಟೀಪುಡಿ ಇದರ ಬೆಲೆ ಎಷ್ಟು ಏರಿದೆ ಎಂದರೆ ಚುನಾವಣೆಗೆ ಮುಂಚೆ ಒಂದು ಕೆ.ಜಿ. ಟೀಪುಡಿ ೨೦ ರೂಪಾಯಿಯಿಂದ ೨೨ ರೂಪಾಯಿಗಳವರೆಗೂ ಇತ್ತು. ಈಗ ಒಂದು ಕೆ.ಜಿ. ಟೀಪುಡಿ ಬೆಲೆ ೩೦ ರೂಪಾಯಿಗಳಿಂದ ೩೬ ರೂಪಾಯಿಗಳವರೆಗೂ ಹೋಗಿದೆ. ಹಳ್ಳಿಗಳಲ್ಲಿ ಒಂದು ಕೆ.ಜಿ. ಟೀಪುಡಿ ಬೆಲೆ ೩೫ ರೂಪಾಯಿಗಳಿಂದ ೪೦ ರೂಪಾಯಿಗಳವರೆಗೆ ಹೊರಟು ಹೋಗಿದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಯಾವುದೇ ಬೆಲೆಯನ್ನು ಯಾರೂ ಕೇಳುವವರೇ ಇಲ್ಲ. ಟೀಸೊಪ್ಪಿನ ಮೇಲೆಯೂ ತಾವು ಟ್ಯಾಕ್ಸ್ ಹಾಕಿದ್ದೀರಿ. ಭತ್ತ ಕೈತಪ್ಪಿ ಹೊರಟು ಹೋಗುತ್ತಿದೆ. ಗಡಿ ಪ್ರದೇಶಗಳಲ್ಲಿ ಭದ್ರತೆ ಇಲ್ಲದೇ ಇರುವುದರಿಂದ ಕಳ್ಳಸಾಗಾಣಿಕೆದಾರರಿಗೆ, ಅಕ್ರಮ ದಾಸ್ತಾನು ಇಟ್ಟುಕೊಂಡಿರುವವರಿಗೆ ಒಂದು ಒಳ್ಳೆಯ ಸಮಯ ಪ್ರಾರಂಭವಾಯಿತು. ಪಕ್ಕದ ರಾಜ್ಯವಾದ ಕೇರಳಕ್ಕೆ ಭತ್ತ, ಅಕ್ಕಿ ಹೋಗುತ್ತಿದೆ. ಅಲ್ಲಿ ಅಕ್ಕಿಯ ಬೆಲೆ ಜಾಸ್ತಿಯಿದೆ. ಕರ್ನಾಟಕದ ಉತ್ಪಾದನೆ ಶಿವಮೊಗ್ಗ, ಚಿಕ್ಕಮಗಳೂರು, ಕಾರವಾರ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಕಾಸರಗೋಡು ಮುಖಾಂತರ ಹೋಗುತ್ತಿದೆ. ಇದು ಅವ್ಯಾಹತವಾಗಿ ಹೋಗುತ್ತಿವೆ. ಸಮರ್ಥನಾದ ಒಬ್ಬ ವ್ಯಾಪಾರಸ್ಥ ಒಂದು ಲಾರಿ ಹೋಗಲಿಕ್ಕೆ ಪರ್ಮಿಟ್ ತೆಗೆದುಕೊಂಡರೆ, ಒಂದೇ ಪರ್ಮಿಟ್‌ನಲ್ಲಿ ೮–೧೦ ಲಾರಿ ಹೊರಗಡೆ ಸಾಗಿಸುತ್ತಾರೆ. ಗಡಿಗಳಲ್ಲಿ ಚೆಕ್ ಸಿಬ್ಬಂದಿ ಇದ್ದು ಅವರು ಲಂಚದ ಆಸೆಗೆ ಬಲಿಬಿದ್ದರೆ ಒಂದೇ ಪರವಾನಗಿಯಲ್ಲಿ ೮–೧೦ ಲಾರಿ ದಾಸ್ತಾನು ಹೊರಗೆ ಹೋಗಲು ಅವಕಾಶ ಮಾಡಿಕೊಡುತ್ತಾರೆ. ಗೊತ್ತಾಗದ ರೀತಿಯಲ್ಲಿ ಈ ಕೆಲಸ ಮಾಡುತ್ತಾರೆ.

ಮಾನ್ಯ ಅಧ್ಯಕ್ಷರೇ ನಮ್ಮ ಭಾರತೀಯ ಜನತಾ ಪಕ್ಷದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಆಹಾರ ನೀತಿಯ ಬಗ್ಗೆ ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ಚಳುವಳಿಯನ್ನು ಮಾಡಿದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಜನತೆ ಯಾವಾಗಲೂ ಕೂಡ ಅಕ್ಕಿಯನ್ನು ಊಟ ಮಾಡತಕ್ಕಂಥ ಜನ. ಅವರಿಗೆ ರಾಗಿ ಮತ್ತು ಜೋಳವನ್ನು ತಿನ್ನತಕ್ಕಂಥ ಅಭ್ಯಾಸವಿಲ್ಲ. ಅವರು ಯಾವಾಗಲೂ ಅಕ್ಕಿಯಲ್ಲಿ ಮಾಡಿದ

ಗಂಜಿಯನ್ನು ಊಟ ಮಾಡುತ್ತಾರೆ. ಆ ಗಂಜಿಯ ಜೊತೆಗೆ ಒಣ ಮೀನು ಬಹಳ ರುಚಿಯಾಗಿರುತ್ತದೆ. ಅದರ ರುಚಿಯನ್ನು ಒಂದು ಸಲ ನೋಡಿದರೆ ಸಾಕು. ಇನ್ನು ತಿನ್ನಬೇಕೆನ್ನುವ ಆಸೆ ನಿಮಗೆ ಆಗುತ್ತದೆ.

ಒಬ್ಬ ಸದಸ್ಯರು.—ನೀವು ಆದರ ರುಚಿಯನ್ನು ನೋಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ನಾನು ಅದರ ರುಚಿಯನ್ನು ನೋಡಿಯೇ ಹೇಳುತ್ತಿರುವುದು. ನಮ್ಮ ಭಾರತೀಯ ಜನತಾ ಪಕ್ಷದ ಸದಸ್ಯರು ಚಳುವಳಿಯನ್ನು ಮಾಡಿದಾಗ ಮಾನ್ಯ ಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಕಾನೂನು ಪ್ರಕಾರವಾಗಿ ಯಾರೇ ತಪ್ಪು ಮಾಡಿದರೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ನಮ್ಮ ಕಾನೂನು ಯಾವಾಗ ಕೆಲಸ ಮಾಡುವುದು ಗೊತ್ತೇ ? ನಾವು ಮೊದಲು ತಪ್ಪು ಮಾಡಿದನಂತರ ನಮ್ಮ ಮೇಲೆ ಕಾನೂನು ಪ್ರಕಾರವಾಗಿ ಕ್ರಮ ಕೈಗೊಳ್ಳಬಹುದು. ಆದರೆ ತಪ್ಪು ಮಾಡುವುದಕ್ಕಿಂತ ಮುಂಚಿತವಾಗಿ ಯಾವ ರೀತಿಯ ಕ್ರಮನ್ನು ತೆಗೆದುಕೊಳ್ಳುವುದಕ್ಕೂ ಬರುವುದಿಲ್ಲ. ನಮ್ಮ ಇಂಡಿಯನ್ನು ಪೀನಲ್‌ಕೋಡ್ ಪ್ರಕಾರವಾಗಿ ತಪ್ಪು ಮಾಡದೇ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾವಿಜನ್ ಇಲ್ಲ. ಒಬ್ಬ ವ್ಯಕ್ತಿ ಯಾವುದಾದರೂ ಖೂನಿ ಅಥವಾ ಕೊಲೆಯನ್ನು ಮಾಡಿದ ಮೇಲೆ ತಾನೆ ಆತನನ್ನು ದಸ್ತಗಿರಿ ಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದು. ಅದಕ್ಕಿಂತ ಮುಂಚಿತವಾಗಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಕಾನೂನು ಮೀರಿ ನಾವು ವರ್ತನೆ ಮಾಡಿದರೆ ಆಗ ಕಾನೂನು ತನ್ನಷ್ಟಕ್ಕೆ ತಾನೆ ಜಾರಿಗೆ ಬರುತ್ತದೆ. ಆದ್ದರಿಂದ ಭಾರತೀಯ ಜನತಾ ಪಕ್ಷದ ಶಾಸಕರು ಇದನ್ನು ಅರಿತು ಆ ರೀತಿಯಾದಂಥ ಚಳುವಳಿಯನ್ನು ಮಾಡಲು ಪ್ರಾರಂಭ ಮಾಡಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಅವರು ನಿಜವಾಗಿಯೂ ಕೂಡ ಒಳ್ಳೆಯ ಕೆಲಸವನ್ನೇ ಮಾಡಿದರು. ಮಾನ್ಯ ಸದಸ್ಯರಾದಂಥ ಕೆ. ಹೆಚ್. ರಂಗನಾಥ್‌ರವರು ಮಾತನಾಡುತ್ತಾ ಸರ್ಕಾರದವರು ಕೆಲಸ ಮಾಡದಿದ್ದರೆ ನಾವು ಮಾಡಬೇಕಾಗುತ್ತದೆ ಎಂದು ತಿಳಿದುಕೊಂಡು ಅವರು ಚಳುವಳಿಯನ್ನು ಮಾಡಿದರು ಎಂದು ಹೇಳಿದರು. ತಾವು ಚುನಾವಣೆಯ ಕಾಲದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ಆ ಆಶ್ವಾಸನೆಗಳನ್ನು ತಾವು ಎಷ್ಟರಮಟ್ಟಿಗೆ ಈಡೇರಿಸಿದ್ದೀರಿ ಎಂಬುದನ್ನು ಕೂಡ ತಾವು ಅರ್ಥಮಾಡಿಕೊಳ್ಳಬೇಕು. ಅದನ್ನು ನೋಡಿ ಅವರು ಕಾನೂನು ಮುರಿದು ಚಳುವಳಿಯನ್ನು ಮಾಡಲು ಪ್ರಾರಂಭ ಮಾಡಿದ್ದಾರೆ. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದರೆ ನಾನೂ ಕೂಡ ತಮಗೆ ಶಹಬಾಶ್‌ಗಿರಿಯನ್ನು ಕೊಡುತ್ತಿದ್ದೆ. ಆದರೆ ತಾವು ಒಳ್ಳೆಯ ಕೆಲಸವನ್ನು ಇದುವರೆಗೂ ಯಾವುದೂ ಕೂಡ ಮಾಡಿಲ್ಲ. ಇವತ್ತು ರಾಜ್ಯದಲ್ಲಿ ಅಗತ್ಯ ವಸ್ತುಗಳ ಬೆಲೆಗಳು ವಿಪರೀತವಾಗಿ ಜಾಸ್ತಿಯಾಗುತ್ತಿವೆ ಈ ಏರುತ್ತಿರುವ ಬೆಲೆಗಳನ್ನು ಯಾರೂ ಕೇಳುವವರು ಇಲ್ಲ. ಮತ್ತೆ ನಾವು ಹಳ್ಳಿಗಾಡು ಪ್ರದೇಶಗಳಲ್ಲಿ ಹೋಗಿ ನೋಡಿದಾಗ ಅಲ್ಲಿನಬೆಲೆಗಳನ್ನು ಆ ದೇವರೇ ನೋಡಿಕೊಳ್ಳಬೇಕು. ಅಲ್ಲಿ ಅವರಿಗೆ ಮನಸ್ಸಿಗೆ ಬಂದ ಹಾಗೆ ಬೆಲೆಯನ್ನು ಇಟ್ಟು ಮಾರಾಟ ಮಾಡುತ್ತಾರೆ. ಆ ಬೆಲೆಗಳನ್ನು ಹತೋಟಿಗೆ ತರುವುದರಲ್ಲಿ ಸರ್ಕಾರ ಕೂಡ ವಿಫಲವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆಹಾರ ಪದಾರ್ಥಗಳನ್ನು ಕಳ್ಳಸಾಗಣಿಕೆ ಮಾಡುವವರು ಯಾರೇ ಆಗಲಿ ಅವರ ಮೇಲೆ ನಾವು ಉಗ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಆದರೆ ತಾವು ಯಾರ ಮೇಲೂ ಕೂಡ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಲಾಭಕೋರರು ಇವತ್ತು ರಾಜ್ಯದಲ್ಲಿ ದಿನೇ ದಿನೇ ಜಾಸ್ತಿಯಾಗುತ್ತಿದ್ದಾರೆ. ಕಳ್ಳಸಾಗಾಣಿಕೆದಾರರು ಕೂಡ ದಿನೇ ದಿನೇ ಜಾಸ್ತಿಯಾಗುತ್ತಿದ್ದಾರೆ. ಆದರೆ ಅವರ ಮೇಲೆ ತಾವು ಇದುವರೆಗೂ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ನನಗೆ ಈ ಸಂದರ್ಭದಲ್ಲಿ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ ಒಂದು ದೊಡ್ಡ ಕೆರೆ. ಆ ಕೆರೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಒಂದು ಎಮ್ಮೆ ಹೋಗಿ ನೀರಿನಲ್ಲಿ ಮಲಗಿಕೊಂಡಿರುತ್ತದೆ. ಆ ಎಮ್ಮೆಯ ತಲೆಯಮೇಲೆ ಒಂದು ನೊಣ ಹೋಗಿ ಕುಳಿತುಕೊಳ್ಳುತ್ತದೆ. ಆಗ ಆ ನೊಣಕ್ಕೆ ಏನು ಭಾಸವಾಗುತ್ತದೆ ಎಂದರೆ ನಾನು ಎಮ್ಮೆಯ ತಲೆಯ ಮೇಲೆ ಕುಳಿತುಕೊಂಡಿರುವುದರಿಂದ ಎಮ್ಮೆ ನೀರಿನಲ್ಲಿ ಮುಳಗಿ ಹೋಗಿದೆ ಎಂದು. ಆ ರೀತಿ ಒಳ್ಳೆಯ ಕೆಲಸ ಮಾಡುತ್ತಿದ್ದೇವೆಂದು ನೀವು ಭ್ರಮೆಯನ್ನು ಇಟ್ಟುಕೊಂಡಿದ್ದೀರಿ. ಆ ರೀತಿಯ ಭ್ರಮೆಯನ್ನು ತಾವು ಇಟ್ಟುಕೊಳ್ಳಬಾರದು. ತಾವು ಮಾಡುವಂಥ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿ ಮತ್ತೆ ಪ್ರೊಕ್ಯೂರ್‌ಮೆಂಟ್ ಪಾಲಸಿಯ ಬಗ್ಗೆ ನಾನು ಹೇಳುವುದೇನೆಂದರೆ, ತಾವು ಲೆವಿಯನ್ನು ಸಂಗ್ರಹವಮಾಡಿ ಬೇಡವೆಂದು ಹೇಳುವುದಿಲ್ಲ. ಆದರೆ ಈ ಒಂದು ನೀತಿಯಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ

ತಾವು ಈಗ ಮಿಲ್‌ಪಾಯಿಂಟ್‌ನಿಂದ ಲೆವಿಯನ್ನು ವಸೂಲು ಮಾಡುತ್ತಿದ್ದೀರಿ. ಆದರೆ ಮಿಲ್‌ಪಾಯಿಂಟ್‌ನಿಂದ ಸರಿಯಾದ ಪ್ರಮಾಣದಲ್ಲಿ ವಸೂಲು ಆಗುತ್ತಿದೆಯೇ ಎಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. ಸಾಮಾನ್ಯವಾಗಿ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ನಮಗೆ ಮಿಲ್‌ಪಾಯಿಂಟ್‌ನಿಂದ ಲೆವಿ ಬರತಕ್ಕದ್ದು. ಆದರೆ ಆ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಒಂದು ಸಾರಿ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ಏನೆಂದರೆ ಮಿಲ್ ಪಾಯಿಂಟ್‌ನಿಂದ ಸರಿಯಾದ ಪ್ರಮಾಣದಲ್ಲಿ ಲೆವಿ ವಸೂಲು ಆಗುತ್ತಿಲ್ಲ ಮತ್ತು ತಮಗೆ ಬೇಕಾದಂಥ ಮಿಲ್ ಮಾಲೀಕರಿಂದ ಲೆವಿಯನ್ನು ವಸೂಲು ಮಾಡುತ್ತಿಲ್ಲ ಎನ್ನುವ ಬಗ್ಗೆ ಹೇಳಿಕೆ ಬಂದಿತ್ತು. ಶಿವಮೊಗ್ಗದಲ್ಲಿ ಸರಿಯಾದ ಪ್ರಮಾಣದಲ್ಲಿ ಲೆವಿಯನ್ನು ಸಂಗ್ರಹಣೆ ಮಾಡುತ್ತಿಲ್ಲ ಬೇಧ ಭಾವ ಮಾಡುತ್ತಿದ್ದಾರೆಂದು ಕೂಡ ಹೇಳಿದ್ದಾರೆ. ತಮ್ಮ ಈ ನೀತಿಯ ಪ್ರಕಾರ ೫೦ ಪರ್ಸೆಂಟ್ ಮಿಲ್ ಪಾಯಿಂಟ್‌ನಿಂದ ಸರ್ಕಾರಕ್ಕೆ ಲೆವಿಯನ್ನು ಕೊಡಬೇಕು. ಆದರೆ ಆ ಒಂದು ನೀತಿಯಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂದು ಹೇಳುತ್ತೇನೆ. ನಾನು ಈ ಬಗ್ಗೆ ಒಂದು ಅಪಾದನೆ ಯನ್ನು ಮಾನ್ಯ ಮುಖ್ಯಮಂತ್ರಿಗಳ ಸಂಬಂಧಿಯ ಮೇಲೆ ಮಾಡಿದಾಗ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಸಂಬಂಧಿ ನನ್ನ ಮೇಲೆ ಕೇಸು ಹಾಕಿದ್ದಾರೆ. ಅವರು ಕೇಸು ಹಾಕಿದರೆ ನಾನು ಭಯ ಪಡುವುದಿಲ್ಲ. ಆದರೆ ಒಬ್ಬ ಸಾಮಾನ್ಯ ಮನುಷ್ಯನ ಮೇಲೆ ಏನಾದರೂ ಅಪಾದನೆ ಮಾಡಿದರೆ ಅದು ಅವರಿಗೆ ಗೊತ್ತಾಗುವುದಿಲ್ಲ. ಆದರೆ ದೊಡ್ಡ ಮನುಷ್ಯರು ಮಾಡುವ ತಪ್ಪು ಗೊತ್ತಾಗುವುದಿಲ್ಲ ಆ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸಮಾಜದಲ್ಲಿ ನಾವು ಇಂಥ ವಿಷಯಗಳನ್ನು ಧೈರ್ಯವಾಗಿ ಎದುರಿಸಬೇಕಾಗುತ್ತದೆ. ನಾನು ಇಂಥ ವಿಷಯಗಳನ್ನು ಎದುರಿಸಲು ಸದಾ ಸಿದ್ಧ ವಾಗಿರುತ್ತೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರ ರೈತರ ಮೇಲೆ, ಕಾರ್ಮಿಕರ ಮೇಲೆ ಮತ್ತು ಬಡವರ ಹಿತರಕ್ಷಣೆಯ ಬಗ್ಗೆ ಚಿಂತನೆಯನ್ನು ಹರಿಸಿಲ್ಲ.

೩-೩೦ ಪಿ. ಎಂ.

ಇದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ. ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈಗಲೂ ಕೂಡ ನೂರಾರು ಲಾರಿಗಳು ಭತ್ತವನ್ನು ಕೇರಳದ ಕಡೆಗೆ, ಗೋವಾದ ಕಡೆಗೆ ತೆಗೆದುಕೊಂಡು ಹೋಗುತ್ತಿವೆ. ಇದು ಯಾವುದೇ ಸರ್ಕಾರಕ್ಕೆ ಮರ್ಯಾದೆ ತರತಕ್ಕಂಥ ವಿಚಾರ ಅಲ್ಲ. ಲೆವಿ ಪ್ರೊಕ್ಯೂರ್‌ಮೆಂಟ್ ಪಾಲಿಸಿ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಇನ್ನು, ಆಹಾರ ವಿತರಣೆ ವಿಚಾರದಲ್ಲಿ ತಮಗೆ ಗೊತ್ತಿರುವ ಹಾಗೆ ಕರ್ನಾಟಕ ರಾಜ್ಯದ ಮೂರು ಕೋಟಿ ಎಪ್ಪತ್ತೊಂದು ಲಕ್ಷ ಜನರನ್ನು ೧೯೭೧ರ ಸೆನ್ಸಸ್ ಪ್ರಕಾರ ಈ ವಿತರಣಾ ವ್ಯವಸ್ಥೆ ಯಲ್ಲಿ ಕವರ್ ಮಾಡಿದ್ದಾರೆ. ಇವರಿಗೆ ನ್ಯಾಯ ಬೆಲೆಯ ಅಂಗಡಿಗಳು, ಸೊಸೈಟಿಗಳ ಮುಖಾಂತರ ಆಹಾರಧಾನ್ಯಗಳನ್ನು ಒದಗಿಸಲಾಗಿದೆ. ಆದರೂ ಬೆಲೆಗಳು ಇಳಿದಿಲ್ಲ. ಇಲ್ಲಿ ಸರ್ಕಾರದ ಜವಾಬ್ದಾರಿ ಏನು ? ಬೆಲೆಗಳು ಇಳಿಯದೇ ಹೋದರೆ ಅದರ ಜವಾಬ್ದಾರಿ ಕೂಡ ರಾಜ್ಯಸರ್ಕಾರದ ಮೇಲೆಯೇ ಇದೆ. ನಾನು ಪತ್ರಿಕೆಯಲ್ಲಿ ಓದಿದ್ದೇನೆ. 'ಬೆಲೆ ಏರಿಕೆ ವಿಚಾರದಲ್ಲಿ ನಮ್ಮ ಹೊಣೆ ಇಲ್ಲ' ಎಂದು ಶ್ರೀಮಾನ್ ಬಸವಣ್ಣಪ್ಪನವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ ಇದೆಲ್ಲಾ ಕೇಂದ್ರ ಸರ್ಕಾರದ ಹೊಣೆ, ಇದರಲ್ಲಿ ನಮ್ಮ ಜವಾಬ್ದಾರಿ ಇಲ್ಲ. ಎಂದು ೧೩ನೇ ತಾರೀಖು ಕನ್ನಡಪ್ರಭ ಪತ್ರಿಕೆಯಲ್ಲಿ ಮಂತ್ರಿಗಳ ಹೇಳಿಕೆ ಬಂದಿದೆ. ಅದೇ ರೀತಿಯಾಗಿ ಆಹಾರ ಇಲಾಖೆಯ ಸಚಿವರು ಕೂಡ ಕೊಟ್ಟಿದನ್ನು ನಾವು ನೋಡಿದ್ದೇವೆ. ನಾನು ಇದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ಆದರೆ ನಿಜವಾಗಿಯೂ ಬೆಲೆ ಏರಿಕೆ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಯಾವ ಜವಾಬ್ದಾರಿಯೂ ಇಲ್ಲ ಎನ್ನತಕ್ಕಂಥ ಮಾತು ಕಾನೂನಿನ ಚೌಕಟ್ಟಿನೊಳಗೆ ಬಂದರೆ ನನ್ನದೇನೂ ಅಭ್ಯಂತರ ಇಲ್ಲ. ಇವತ್ತು ಕಾನೂನು ಪ್ರಕಾರ ಇವರ ಜವಾಬ್ದಾರಿ ಈ ವಿಚಾರದಲ್ಲಿ ಇಲ್ಲವೆನ್ನುವು ದಾದರೆ ಅವರ ವಾದವೇ ಸರಿಯೆಂದು ಒಪ್ಪೋಣ ಅಂದರೆ ಕೇಂದ್ರದ ಮೇಲೆ ಈ ಜವಾಬ್ದಾರಿ ಇಲ್ಲ ವೆಂದಲ್ಲ. ಆದರೆ, ರಾಜ್ಯಸರ್ಕಾರದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಎಸೆನ್ಸಿಯಲ್ ಕಮಾಡಿಟೀಸ್ ಆಕ್ಟ್ ೧೯೫೫ರ ಸೆಕ್ಷನ್ ೩,೬,೬,(ಎ) ಮತ್ತು ಸೆಕ್ಷನ್ ಮೂರರ ಪ್ರಕಾರ ಪವರ್ ಡೆಲಿಗೇಶನ್ ಮಾಡುವುದಕ್ಕೆ ಅಧಿಕಾರ ಇದೆ. ಸೆಕ್ಷನ್ ೫ರಲ್ಲಿ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರ ಗಳಿಗೆ ಅಧಿಕಾರ ಕೊಟ್ಟಿರತಕ್ಕಂಥಾದ್ದು ಇದೆ. 'ಸೆಕ್ಷನ್ ೩ರಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ ಅದು ಹೀಗಿದೆ.

"Powers to control production, supply distribution etc., of essential commodities—(1) If the Central Government is of opinion that it is necessary or expedient so to do for maintaining or increasing supplies of any essential commodity or for securing their equitable distribution and availability at fair prices, (or for securing any essential commodity for the defence of India or the efficient conduct or military operations) it may, by order, provide for regulating or prohibiting the production, supply and distriubtion thereof and trade and commerce therein.

(2) Without prejudice to the generality of the powers conferred by sub-section (1) an order made thereunder may provide—

(a) for regulating by licences; permits or otherwise the production or manufacture of any essential commodity;

ಮಾನ್ಯ ಅಧ್ಯಕ್ಷರೇ, ಸೆಕ್ಷನ್ ೬(ಎ)ನಲ್ಲಿ, Confiscation of foodgrains, edible oilseeds and edible oils ಬರುತ್ತದೆ. Duties of State Governments, ಸೆಕ್ಷನ್ ೪ ರಲ್ಲಿ ಇದೆ.

"Section 4: Imposition of duties on State Governments, etc.: An order made under Section 3 may confer powers and impose duties upon the Central Government or the State Government or officers and authorities of the Central Government or State Government, and may contain directions to any State Government or to officers and authorities thereof as to the exercise of any such powers of the discharge of any such duties."

ಇದು ಸಂಪೂರ್ಣವಾಗಿ ರಾಜ್ಯಸರ್ಕಾರಕ್ಕೆ ಯಾವ ರೀತಿ ಡೈರೆಕ್ಷನ್ಸ್ ಕೊಡಬೇಕು ಎನ್ನುವಂಥಾದ್ದು. We have got a list of directions issued by the Government of India under the Essential Commodities" Act, 1955 ನಮ್ಮ ಹತ್ತಿರ ಲಿಸ್ಟ್ ಇದೆ. ಡೆಲಿಗೇಷನ್ಸ್ ಆಫ್ ಪವರ್ಸ್ ಕ್ಲಾಸ್–೨ ಸೆಕ್ಷನ್–೫ "such State Government or such officer or authority subordinate to a State Government, as may be specified in the direction' ಸೆಕ್ಷನ್ ೫ರಲ್ಲಿ ಹೀಗೆ ಹೇಳಿದೆ— 'Parliament itself has delegated powers to the State Government. That is most important thing. Parliament itself has delegated the powers to the State Government through the Central Government...Hence there is no question of exclusive delegation. ಏತಕ್ಕಾಗಿ ಈ ಕಾನೂನನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ ಅಗತ್ಯ ವಸ್ತುಗಳಿಗೆ ಸಂಬಂಧಪಟ್ಟ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರದವರು ಸಂಪೂರ್ಣವಾಗಿ ಕೊಟ್ಟಿದ್ದಾರೆ. ನಾನು ಒಪ್ಪುತ್ತೇನೆ. ಕೆರೊಸಿನ್ ಡಿಸ್ಟ್ರಿಬ್ಯೂಷನ್ ವಿಚಾರದಲ್ಲಿ ಇವರಿಗೆ ಅಧಿಕಾರ ಇಲ್ಲದಿರಬಹುದು, ಆದರೆ ಬೇರೆ ಬೇರೆ ಅಗತ್ಯ ವಸ್ತುಗಳ ವಿಚಾರದಲ್ಲಿ ಸಂಪೂರ್ಣವಾಗಿ ಅಧಿಕಾರವನ್ನು ಅಧಿಕಾರಿ ವರ್ಗದವರ ಕೈಗೆ ಕೊಡುವುದಕ್ಕೆ ಸಾಧ್ಯತೆ ಇದೆ. ಇದೇ ರೀತಿ ಇನ್ನೊಂದು

ಕಾನೂನು ಇದೆ. 'Prevention of black-marketing, maintenance and supplies of essential commodities act, 1980' ಅಕ್ರಮ ದಾಸ್ತಾನುಗಾರರು, ಕಳ್ಳಸಾಗಾಣಿಕೆಗಾರರನ್ನು ಬಂಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇರುವುದು ಇದೆ. ಸೆಕ್ಷನ್ ೩ರಲ್ಲಿ ಅವಕಾಶವಿದೆ. ಪೋಲೀಸಿನವರು ಕೂಡ ಉಪಯೋಗ ಮಾಡುವುದಕ್ಕೆ ಕಾನೂನು ಪ್ರಕಾರ ಅವಕಾಶ ಇದೆ. ಸೆಕ್ಷನ್ ೫ರ ಪ್ರಕಾರ ಒಬ್ಬ ವ್ಯಕ್ತಿಯನ್ನು ಡಿಟೇನ್ ಅಥವಾ ಅರೆಸ್ಟ್ ಮಾಡಬಹುದು. ರಾಷ್ಟ್ರೀಯ ಭದ್ರತಾ ಕಾನೂನು ಇದೆ. ಅಕ್ರಮ ದಾಸ್ತಾನುಗಾರರು, ಕಾಳಸಂತೆಕೋರರು ಇವರಿಗೆ ಸಂಬಂಧಪಟ್ಟಂತೆ ಈ ಸೆಂಟ್ರಲ್ ಆ್ಯಕ್ಟ್ ಸೆಕ್ಷನ್ ೩, ೪, ೫, ಮತ್ತು ೭ರ ಪ್ರಕಾರ ಸಂಪೂರ್ಣವಾಗಿ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದು ಭದ್ರತಾ ಕಾನೂನಿಗೆ ಸಂಬಂಧಪಟ್ಟ ವಿಚಾರ.

ಚೇರ್ಮನ್.—ನೀವು ಮಾತನಾಡಲು ಪ್ರಾರಂಭಿಸಿ ಒಂದು ಗಂಟೆ ಆಗಿದೆ. ಇನ್ನೂ ತಮಗೆ ಎಷ್ಟು ಹೊತ್ತು ಬೇಕು.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ನನಗೆ ಬೇರೆ ಮಾನ್ಯ ಸದಸ್ಯರ ಕಾಲವನ್ನು ತೆಗೆದುಕೊಳ್ಳುವ ಆಸೆ ಇಲ್ಲ. ಬೇರೆಯವರಿಗೆ ತೊಂದರೆಯಾಗಬಹುದೆನ್ನುವ ಅರಿವು ನನಗಿದೆ. ಇನ್ನು ಅರ್ಧ ಗಂಟೆಯಲ್ಲಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಕಾನೂನು ಬಗ್ಗೆ ಹೇಳುತ್ತಿದ್ದೆ. ಇಲ್ಲಿ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ರಿವ್ಯೂ ೧೯೮೨-೮೩—ಈ ಪುಸ್ತಕದ ಅನೆಕ್ಸರ್ ೫ರಲ್ಲಿ ಒಂದು ಲಿಸ್ಟ್ ಇದೆ. List showing several control orders issued under Essential Commodities Act, 1955 in force as on 1-5-83 ಈ ಸರ್ಕಾರ ಜನವರಿಯಲ್ಲಿ ಅಧಿಕಾರಕ್ಕೆ ಬಂದಿದೆ. ಇದು ಮಾರ್ಚ್ ತಿಂಗಳಿನಲ್ಲಿ ಜಾರಿಗೆ ಬಂದಿರತಕ್ಕಂಥ ವಿಚಾರ. Sugur Control Order of 1966, Karnataka Sugar Dealers' Licensing Order, 1962, Karnataka Foodgrains whole-sale dealers 1964. Order, Karnataka Food-grains dealers order, Karnataka Essential Commodities, maintenance of accounts, (display of prices and stocks,) Order, 1966—ಈ ಎಲ್ಲಾ ಆರ್ಡರ್‌ಗಳು ಕಾನೂನು ಪ್ರಕಾರ ಇರತಕ್ಕದ್ದು. ಲೇಖಕ್ ಪುಸ್ತಕಗಳು ಈ ಕಾನೂನಿನ ವ್ಯಾಪ್ತಿಯಲ್ಲಿ ಬರುತ್ತವೆ. ಅಗತ್ಯ ವಸ್ತುಗಳ ಕಾಯಿದೆ ೧೯೫೫ ಪ್ರಕಾರ ಬರುತ್ತವೆ. ಅದೇ ರೀತಿ ರೇಷನ್ ಕಾರ್ಡ್ Karnataka prevention of unauthorised ration card order of 1977. ಇತ್ಯಾದಿ ಸುಮಾರು ೩೧ ಕಾನೂನುಗಳಿವೆ. ಇಂತಹ ಒಂದು ಸಂದರ್ಭದಲ್ಲಿ ಈ ಎಲ್ಲಾ ಕಾನೂನುಗಳನ್ನು ರಾಜ್ಯ ಸರ್ಕಾರದವರು ಪಡೆದಿದ್ದೀರಿ. ಅಂದಮೇಲೆ ರಾಜ್ಯ ಸರ್ಕಾರದವರು ಈವತ್ತಿನ ದಿವಸ ಆಹಾರ ಪದಾರ್ಥವನ್ನು ಸರಿಯಾದ ರೀತಿಯಲ್ಲಿ ಸರಬರಾಜು ಮಾಡುವುದಕ್ಕೆ ಕಾನೂನುಗಳಿವೆ. ಅದೇ ರೀತಿ ತಂದಂತಹ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದಕ್ಕೂ ಕಾನೂನುಗಳಿವೆ. ಆಹಾರ ಧಾನ್ಯಗಳ ಬೆಲೆಗಳನ್ನು ಮತ್ತು ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ಕಾನೂನುಗಳು ಇವೆ. ಅಂದಮೇಲೆ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯಿಂದ ಮತ್ತು ಆಹಾರ ಮಂತ್ರಿಗಳ ಹೇಳಿಕೆಯಿಂದ ಬೆಲೆ ಏರಿಕೆ ರಾಜ್ಯ ಸರ್ಕಾರ ಹೊಣೆಯಲ್ಲ ಬೆಲೆ ಏರಿಕೆಯ ಬಗ್ಗೆ ಕೇಂದ್ರ ಸರ್ಕಾರ ಮಾತ್ರ ಹೊಣೆ ಎನ್ನತಕ್ಕಂತಹ ಅಭಿಪ್ರಾಯವನ್ನು ಏನು ವ್ಯಕ್ತಪಡಿಸಿದ್ದಾರೆ, ಇದರಿಂದ ಮುಖ್ಯ ಮಂತ್ರಿಗಳು ಅಥವಾ ಮಂತ್ರಿಗಳಿರಬಹುದು, ಅಥವಾ ಮತ್ತೊಬ್ಬರು ಇರಬಹುದು ಏನು ಹೇಳಿಕೆ ಕೊಟ್ಟಿದ್ದಾರೆ ಅವರಿಗೆ ಕಾನೂನು ಗೊತ್ತಿಲ್ಲ ಎನ್ನತಕ್ಕಂತಹ ಅಭಿಪ್ರಾಯಕ್ಕೆ ಬರಬೇಕಾಗಿದೆಯೆಂದು ವಾದಕ್ಕೋಸ್ಕರ ಈ ಮಾತನ್ನು ಹೇಳಬೇಕಾಗುತ್ತದೆ. ಆದರೆ ಗೊತ್ತಿಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ನಾವು ಇಲ್ಲಿ ಒಪ್ಪುವುದಕ್ಕೆ ತಯಾರಿರಬಾರದು. ಏಕೆಂದರೆ ಅದಕ್ಕಾಗಿಯೇ ಒಂದು ಇಲಾಖೆ ಎಂದು ಇದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳ ಸಂಬಳ ಸಾರಿಗೆ ಕೊಟ್ಟು ಇಲಾಖೆಯನ್ನು ಮಾಡಿದ್ದೇವೆ. ಕಾನೂನು, ಮಂತ್ರಿಗಳಿಗೆ ಗೊತ್ತಿಲ್ಲದಿದ್ದರೆ ಕಾನೂನನ್ನು ಹೇಳಿಕೊಡುವುದಕ್ಕೆ ಅಧಿಕಾರಿಗಳನ್ನು ಇಟ್ಟಿದ್ದೇವೆ. ಕಾನೂನನ್ನು ಮೊದಲು ತಿಳಿದುಕೊಳ್ಳಬೇಕು, ಹೇಳಿಕೆಯನ್ನು ಕೊಡುವುದಕ್ಕೆ ಮೊದಲು ಕಾನೂನು ಗೊತ್ತಿದ್ದೂ ಈ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಇನ್ನೊಂದು ದೃಷ್ಟಿಯಿಂದ ಕಾನೂನು ಪ್ರಕಾರವಾಗಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. Orders issued under the Essential Commodities Act. ಇದಕ್ಕೆ ಸಂಬಂಧಪಟ್ಟ ಮೂರು ಕಾನೂನು ಇವರಿಗೆ ಗೊತ್ತುಂಟು.

ಆದರೆ ಕರ್ನಾಟಕ ರಾಜ್ಯದ ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೋಸ್ಕರ ಮಾತ್ರ ಈ ರೀತಿಯ ಹೇಳಿಕೆಗಳನ್ನು ಇವರು ಕೊಟ್ಟಿದ್ದಾರೆಂದು ಸ್ಪಷ್ಟವಾಗಿ ಹೇಳಲಿ ಬೇಕಾದ ಅಭಿಪ್ರಾಯಕ್ಕೆ ಬರಲೇ ಬೇಕಾಗುತ್ತದೆ, ಇದು ಅನಿವಾರ್ಯ. ಇನ್ನು ಮೇಲಾದರೂ ಅದನ್ನು ಅವರು ಬಿಡಬೇಕು. ಯಾವ ರಾಜಕೀಯಕ್ಕೋಸ್ಕರ ಈ ಮಾತನ್ನು ನಾನು ಹೇಳುತ್ತಿಲ್ಲ. ಕ್ಷಮಿಸಬೇಕು. ಏತಕ್ಕೆ ನಾನು ಈ ಮಾತನ್ನು ಹೇಳಿದೆ ಎಂದರೆ ನಾನೂ ಸಹ ಕಾನೂನುಗಳನ್ನು ಓದಿದ್ದೇನೆ, ಸೆಕ್ಷನ್ ಓದಿದ್ದೇನೆ. ರಾಜ್ಯ ಸರ್ಕಾರದಲ್ಲಿರತಕ್ಕಂತಹ ಕಾನೂನುಗಳು ಇದ್ದರೂ ಕೂಡ ಇವರು ಬೆಲೆ ಏರಿಕೆ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳದೆ ಇದ್ದಾರೆ. ಇವತ್ತು ನಾನು ಇವರನ್ನು ಕೇಳುತ್ತಿದ್ದೇನೆ, ಈಗ ಇರತಕ್ಕಂತಹ ಕಾನೂನು ಪ್ರಕಾರ ಅಕ್ರಮ ದಾಸ್ತಾನುಗಾರರು ಏನು ಇದ್ದಾರೆ, ಅದೇ ರೀತಿ ಕಾಳಸಂತೆಕೋರರು ಏನು ಇದ್ದಾರೆ, ಅವರನ್ನು ಜೈಲಿಗೆ ಕಳುಹಿಸಬಹುದು. ಅದನ್ನು ಪತ್ರಿಕೆಯಲ್ಲೂ ಪ್ರಕಟ ಮಾಡ ಬಹುದು. ಹೀಗಿರುವಾಗ ನೀವು ಎಷ್ಟು ಜನರನ್ನು ಈ ರೀತಿಯಾಗಿ ಜೈಲಿಗೆ ಕಳುಹಿಸಿದ್ದೀರಿ? ಹಾಗಾ ದರೆ ರಾಜ್ಯದಲ್ಲಿ ಕಾಳಸಂತೆಕೋರರು ಇಲ್ಲ ಎಂದು ನಾವು ತಿಳಿದುಕೊಳ್ಳೋಣವೇನು ? ಅಕ್ರಮ ದಾಸ್ತಾನುಗಾರರು ಇಲ್ಲ ಎಂದು ತಿಳಿದುಕೊಳ್ಳೋಣವೇನು ? ಬಡವರ ಜೀವ ಹಿಂಡತಕ್ಕಂತಹ ಜನ ಸಮಾಜದಲ್ಲಿ ಇಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರೋಣವೇ ? ಯಾವ ಒಂದು ಕ್ರಮವನ್ನು ರಾಜ್ಯ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡಿದ್ದೀರಿ ? ನೇರವಾಗಿ ಈ ಪ್ರಶ್ನೆಯನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತಂದು ಸಂಬಂಧಪಟ್ಟವರಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ. ನನಗೆ ಗೊತ್ತಿದ್ದ ಹಾಗೆ ಕೆಲವಾರು ಸಾರಿ ಈ ಪ್ರಶ್ನೆಯನ್ನು ನಾವು ಎತ್ತಿದಂತಹ ಕಾಲದಲ್ಲಿ, ಈ ಸದನದಲ್ಲಿ ಮಾನ್ಯ ಮಂತ್ರಿಗಳು ನಾವು ಇಷ್ಟು ಜನಗಳನ್ನು ಹಿಡಿದಿದ್ದೇವೆಂದು ಹೇಳಿರುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲೂ ಹಿಡಿದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಇದುವರೆವಿಗೂ ಹಿಡಿದು ಬಿಟ್ಟಂತಹ ಜನರ ಸಂಖ್ಯೆ ಎಷ್ಟು ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಸಭೆಗೆ ಕೊಡುವುದು ಒಳ್ಳೆಯದು. ನೀವು ಅಧಿಕಾರದಲ್ಲಿದ್ದಾಗ ನಿಮ್ಮ ಚಿಂತನೆ ಬದಲಾವಣೆಯಾಗಬೇಕು. ಅಧಿಕಾರದಲ್ಲಿರುವವರಿಗೆ ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಣೆ ಮಾಡಬೇಕು. ಇದನ್ನು ಹೇಳೋವಾಗ ನಾನು ಯಾರ ಮೇಲೆ ಆಪಾದನೆ ಮಾಡಬೇಕೆಂದು ಈ ಮಾತನ್ನು ಹೇಳುತ್ತಿಲ್ಲ. ಅದರಲ್ಲಿಯೂ ಕಾಳಸಂತೆಕೋರರು, ಅಕ್ರಮ ದಾಸ್ತಾನುಗಾರರು ಯಾರ್ಯಾರು ಇದ್ದಾರೆ ಅವರ ಬಗ್ಗೆ ನಿಮಗೆ ಬಹಳ ಎಚ್ಚರಿಕೆ ಇರಬೇಕು. ಆಹಾರ ಮಂತ್ರಿಗಳು ಕಾರವಾರ ಜಿಲ್ಲೆಗೆ ಹೋಗಿದ್ದಾಗ ಸಿದ್ದಾಪುರದಲ್ಲಿ ಯಾರ ಮನೆಗೆ ನೀವು ಊಟಕ್ಕೆ ಹೋಗಿದ್ದೀರಿ ? ಇದು ಒಳ್ಳೆಯದಲ್ಲ. ಸಿದ್ದಾಪುರದಲ್ಲಿ ಇರತಕ್ಕಂತಹ ಜನರು ಅವರ ಮನೆಗೆ ಊಟಕ್ಕೆ ಹೋಗುವುದು ಒಳ್ಳೆಯದಲ್ಲ ಎಂದು ಹೇಳಿದರೂ ಅವರ ಮಾತಿನ ವಿರುದ್ಧ ಅವರ ಮನೆಗೆ ಊಟಕ್ಕೆ ಹೋಗಿದ್ದೀರಿ. ಬಡವರ ಜೀವ ಹಿಂಡಿ ವ್ಯಾಪಾರ ಮಾಡತಕ್ಕಂತಹ ಉದ್ಯಮಿಗಳ ಮನೆಗೆ ನೀವೆಲ್ಲಾ ಹೋಗುತ್ತಿರುವುದನ್ನು ಜನ ಸಾಮಾನ್ಯರು ಒಪ್ಪುವುದಿಲ್ಲ. ಅಂತಹವರ ಮನೆಗೆ ನೀವು ಊಟಕ್ಕೆ ಹೋಗಿಬಿಟ್ಟರೆ ನಾಳೆ ಆ ಜನರ ಮೇಲೆ ಪೋಲೀಸ್ ಅಧಿಕಾರಿಗಳು ಹೇಗೆ ಕೇಸ್ ಹಾಕಬೇಕು ? ನಿಮ್ಮ ಆಹಾರ ಇಲಾಖೆಯ ಅಧಿಕಾರಿಗಳು ಯಾವ ವ್ಯವಹಾರಕ್ಕೂ ಹೋಗುವುದಿಲ್ಲ. ಇನ್ನು ಮೇಲಾ ದರೂ ಈ ರೀತಿ ಮಾಡುವುದನ್ನು ನಿಲ್ಲಿಸಿ. ಇದರಿಂದ ಏನಾಗುತ್ತದೆ ಎಂದರೆ ನಾಳೆ ಇಂತಹ ವ್ಯಕ್ತಿಗಳನ್ನು ಕಂಟ್ರೋಲ್ ಮಾಡುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ.

ಅಕ್ಕಿಗೆ ೪ ಪರ್ಸೆಂಟ್ ಮಾರಾಟ ತೆರಿಗೆಯನ್ನು ಸರ್ಕಾರಕ್ಕೆ ಕೊಡಬೇಕು. ಇವರಲ್ಲಿ ಸೇಲ್ಸ್ ಟ್ಯಾಕ್ಸ್ ಹಾಗೂ ಆರ್.ಎಂ.ಸಿ. ತೆರಿಗೆ, ಅದು ೨ ಪರ್ಸೆಂಟ್ ಇದೆ. ಈ ರೀತಿ ಇರತಕ್ಕಂತಹದ್ದರಲ್ಲಿ ಒಂದು ಲೋಡು ಅಕ್ಕಿ ಕಾನೂನು ಬಾಹಿರವಾಗಿ ರಾಜ್ಯದಿಂದ ಹೊರಗಡೆ ಹೋಗಿಬಿಟ್ಟರೆ ನಮ್ಮ ರಾಜ್ಯದ ಖಜಾನೆಗೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಪ್ರಭಾವಶಾಲಿಗಳಾಗಿರತಕ್ಕಂತಹವರ ಮನೆಗಳಿಗೆ ನೀವು ಈ ರೀತಿ ಹೋಗತಕ್ಕಥಹದ್ದನ್ನು ಮಾಡಿ ಬಿಟ್ಟರೆ ಹೇಗೆ ? ಒಂದೇ ಪರವಾನಗಿಯ ಮೇಲೆ ಲಾರಿಗಟ್ಟಲೆ ಅಕ್ಕಿ ಹೊರಗೆ ಹೋಗುವುದಾದರೆ ಅದರಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿ ಬಹಳ ನಿಷ್ಠಾವಂತ ಅಧಿಕಾರಿ. ಅವರು ಇದನ್ನು ಕಂಡು ಹಿಡಿಯುವುದಕ್ಕಾಗಿ ಕೊಚ್ಚಿನ್ ಮತ್ತು ಎರ್ನಾಕುಲಂಗೆ ಹೋಗಿದ್ದರು. ಹೇಗೆ ಯಾವ ಯಾವ ಲಾರಿ ಗಳು ಎಲ್ಲೆಲ್ಲಿಗೆ ಹೋಗಿದ್ದವೆಂಬುದು ಅವರ ಲೆಕ್ಕದ ಪ್ರಕಾರ ಇಟ್ಟುಕೊಂಡಿರುತ್ತಾರೆ. ಅವರು ಅಲ್ಲಿಗೆ ಹೋಗಿ ಎಲ್ಲಾ ವಿವರಗಳನ್ನು ತೆಗೆದುಕೊಂಡು ಬಂದಿದ್ದಾರೆ. ಒಂದೇ ಪರ್ಮಿಟ್ ಮೇಲೆ ೧೦–೧೫ ಲಾರಿ ಅಕ್ಕಿ ಹೋಗಿಬಿಟ್ಟಿದೆ. ಇದರಿಂದ ಎಷ್ಟು ನಷ್ಟವಾಗಿದೆ ? ಇದೇ ರೀತಿ ಇನ್ನೆಷ್ಟು ಲಾರಿ ಅಕ್ಕಿ ಹೊರಗೆ ಹೋಗಿದೆ ಎಂಬುದನ್ನು ವಿಚಾರ ಮಾಡಬೇಕು. ಇದರಿಂದ ಲಂಚಗುಳಿತನ ಜಾಸ್ತಿಯಾಗುತ್ತದೆ ಎಂಬು ದನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ರೀತಿ ಇವರು ಮಾಡುತ್ತಿದ್ದರೆ,

ನಾಳೆ ಇಂತಹ ವ್ಯಾಪಾರಿಗಳ ಮನೆಗೆ ನೀವು ಊಟಕ್ಕೆ ಹೋಗಿಬಿಟ್ಟರೆ ಪೋಲೀಸ್‌ನವರು ಯಾವ ರೀತಿ ಇವರ ಮೇಲೆ ಕೇಸ್ ಹಾಕುತ್ತಾರೆ ? ಯಾರಿಗೆ ಆ ಧೈರ್ಯ ಬರುತ್ತದೆ ? ಸೇಲ್ಸ್‌ಟ್ಯಾಕ್ಸ್ ಇಲಾಖೆಯವರೇ ಆಗಲಿ ಅಥವಾ ಆಹಾರ ಇಲಾಖೆಯವರೇ ಆಗಲಿ ಯಾರೂ ಹೋಗಿ ಅವರನ್ನು ಹಿಡಿಯುವುದಕ್ಕಾಗುತ್ತದೆ ಎನ್ನತಕ್ಕಂತಹ ಈ ವಿಷಯವನ್ನು ನಿಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಒಂದು ಅಭಿಪ್ರಾಯವನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಬಯಸುತ್ತೇನೆ. ವಿತರಣೆ ಮಾಡತಕ್ಕಂತಹ ವಿಚಾರದಲ್ಲಿ ರಾಜ್ಯ ಸರ್ಕಾರದ ಪಡಿತರ ಪದ್ಧತಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಹೇಳಬೇಕಾಗಿದೆ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಹೇಳುವುದಾದರೆ ಇಲ್ಲಿ ಬೋಗಸ್ ರೇಷನ್ ಕಾರ್ಡ್ ಹೋಲ್ಡರ್ಸ್ ಇಟ್ಟುಕೊಂಡು ಈ ಪದ್ಧತಿಯನ್ನು ದುರುಪಯೋಗ ಮಾಡುತ್ತಿರುವುದು ಅವ್ಯಾಹತವಾಗಿ ನಡೆದಿದೆ. ಇದನ್ನು ತಡೆಹಿಡಿಯುವುದಕ್ಕೋಸ್ಕರ ಯಾವ ಕ್ರಮ ಕೈಗೊಂಡಿದ್ದೀರಿ ? ಇದುವರೆಗೆ ಎಷ್ಟು ಬೋಗಸ್ ಕಾರ್ಡ್ ಹೋಲ್ಡರ್ಸ್‌ಗಳನ್ನು ಹಿಡಿದು ಹಾಕಿದ್ದೀರಿ? ಇದರ ಬಗ್ಗೆ ನೀವು ವೈಜ್ಞಾನಿಕವಾದ ಕಾರಣಗಳನ್ನು ಹುಡುಕಬೇಕು. ಇದನ್ನು ತಡೆಹಿಡಿಯದಿದ್ದರೆ ನ್ಯಾಯವಾಗಿ ಕಾರ್ಡುಗಳನ್ನು ಇಟ್ಟುಕೊಂಡಿರತಕ್ಕಂತಹ ಜನರಿಗೆ ಬಹಳ ಕಷ್ಟವಾಗುತ್ತದೆ. ಅವರು ಯಾವಮಟ್ಟಕ್ಕೆ ಹೋಗಿದ್ದಾರೆಂದರೆ ತಮ್ಮ ಆಡಳಿತದ ಅವಧಿಯಲ್ಲಿ ಬಹಳ ಸುಲಭವಾಗಿ ನ್ಯಾಯ ಬೆಲೆ ಅಂಗಡಿಯ ಲೈಸೆನ್ಸನ್ನು ತೆಗೆದುಕೊಳ್ಳಬಹುದೆಂದು ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಬಹಳಹಗುರವಾಗಿ ಮಾತನಾಡುವ ಮಟ್ಟಕ್ಕೆ ಹೋಗಿರಬೇಕಾದರೆ ಅದನ್ನು ದುರುಪಯೋಗ ಮಾಡತಕ್ಕಂಥದ್ದು ಒಂದು ಮತ್ತೆ ಪೀರಿಯಾಡಿಕಲ್ ಚಕಿಂಗ್ಸ್, ರೇಂಜ್ ಆಫೀಸರ್ಸ್ ಏನು ಇರುತ್ತಾರೆ, ಅವರು ಕೂಡ ಪೀರಿಯಾಡಿಕಲ್ ಚಕ್ಕಿಂಗ್ ಮಾಡುತ್ತಿಲ್ಲ. ನನ್ನ ಹತ್ತಿರ ಗ್ರಾಹಕರ ಪರವಾಗಿ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ ನ್ಯಾಯ ಬೆಲೆ ಅಂಗಡಿಗೆ ಲೈಸೆನ್ಸನ್ನು ಕೊಡುವಾಗ ಒಂದೇ ಮನೆಯವರಿಗೆ ನಾಲ್ಕಾರು ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ. ನಿಮ್ಮ ಕಾಲದಲ್ಲೇ ಕೊಟ್ಟಿದ್ದೀರೋ ಅಥವಾ ಯಾರ ಕಾಲದಲ್ಲಿ ಮಾಡಿದ್ದಾರೋ ಅದು ನನಗೆ ಗೊತ್ತಿಲ್ಲ. ಹಿಂದೆ ತಪ್ಪು ಮಾಡಿದ್ದರೆ. ಅದನ್ನು ಸರಿಮಾಡುವುದಕ್ಕಾಗಿ ರಾಜ್ಯದ ಜನತೆ ನಿಮ್ಮ ಕೈಗೆ ಅಧಿಕಾರವನ್ನು ತಂದು ಕೊಟ್ಟಿದ್ದಾರೆ ನೀವೂಕೂಡ ಅದನ್ನು ಸರಿಪಡಿಸದಿದ್ದರೆ ನಿಮ್ಮನ್ನು ಅಧಿಕಾರದಲ್ಲಿ ಏಕೆ ಇಡಬೇಕು ಎನ್ನತಕ್ಕಂತ ಪ್ರಶ್ನೆ ಸಹಜವಾಗಿ ಜನತೆ ಮುಂದೆ ಬರುತ್ತದೆ.

ಡಿವಿಜನ್ ನಂ. ೪೮ ಷಾಪ್ ನಂ. ೪೮ ರೇಂಜ್ ನಂ. ೪ ಲೈಸನ್ಸ್‌ದಾರ ತಂದೆ, ಸಿ. ಎಸ್. ಸತ್ಯನಾರಾಯಣ ಶೆಟ್ಟಿ. ಮತ್ತೊಂದು, ಡಿವಿಜನ್ ನಂ. ೪೮, ಷಾಪ್ ನಂ. ೨೦೪, ರೇಂಜ್ ನಂ. ೪ ಮಗ ಸಿ. ಎಸ್. ನಾಗರಾಜ ಶೆಟ್ಟಿ. ನಂತರ ಡಿವಿಜನ್ ನಂ. ೫೬, ಷಾಪ್ ನಂ. ೧೨೬, ರೇಂಜ್ ನಂ. ೪ ಮತ್ತು ೬೧ನೇ ಡಿವಿಜನ್‌ನಲ್ಲಿ ಷಾಪ್ ನಂಬರ್ಸ್ ೧೬೫ ಹಾಗೂ ೧೬೬, ರೇಂಜ್ ೪, ಲೈಸನ್ಸ್‌ದಾರ ಸೋಲಂಕಿ. ಇವೆಲ್ಲವೂ ಶ್ರೀ ಸೋಲಂಕಿಯವರು ಕೆ. ಸಿ. ಕೋ–ಆಪರೇಟಿವ್ ಸೊಸೈಟಿಯ ಹೆಸರಿನಲ್ಲಿ ನಡೆಸುತ್ತಿದ್ದಾರೆ. ತಂದೆ ಮಗ, ಹೆಂಡತಿ–ಮಕ್ಕಳು. ಸರ್ಕಾರಿ ನೌಕರರು ತೆಗೆದಾಗ ಎಲ್ಲರ ಮೇಲೆ ಹೇಳಬಹುದು. ಬಾಕಿಯವರಿಗೆ ಲೈಸನ್ಸ್ ಕೊಟ್ಟು ಸ್ಪಷ್ಟವಾಗಿ ನೋಡಿ ಕೊಡಬೇಕು. ಇಂತಹವರಿಗೆಲ್ಲಾ ನ್ಯಾಯ ಬೆಲೆ ಅಂಗಡಿಯ ಲೈಸನ್ಸನ್ನು ಕೊಟ್ಟು ಬಿಟ್ಟರೆ ನಾಳೆ ಯಾರಿಗೆ ಧೈರ್ಯ ಬರುತ್ತದೆ ? ಯಾವ ರೀತಿ ಅವರನ್ನು ಕಂಟ್ರೋಲ್ ಮಾಡಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಲೆಸನ್ಸ್ ಕೊಡತಕ್ಕಂತಹ ವಿಚಾರದಲ್ಲಿ ಸಮಾಜದಲ್ಲಿರತಕ್ಕಂತಹ ಎಲ್ಲಾ ವರ್ಗಗಳಿಗೂ ಅವಕಾಶ ಕೊಡುವುದರ ಕಡೆ ಗಮನ ಕೊಡಬೇಕು. ಎಂದರೆ ಹರಿಜನ–ಗಿರಿಜನ ಹಾಗೂ ಅಲ್ಪಸಂಖ್ಯಾತರು ಅವರಿಗೆ ಆದ್ಯತೆಯನ್ನು ಕೊಡಬೇಕು ಅಂದರೆ ಬೇರೆಯವರಿಗೆ ಕೊಡಬಾರದು ಎಂದು ಅರ್ಥವಲ್ಲ. ಆದರೆ ಹರಿಜನ–ಗಿರಿಜನರಿಗೆ ಆದ್ಯತೆಯನ್ನು ಕೊಟ್ಟು ಅವರನ್ನು ಮುಂದೆ ತರತಕ್ಕಂತಹ, ವ್ಯವಹಾರದಲ್ಲಿ ಬುದ್ಧಿವಂತರಾಗಿ, ನ್ಯಾಯಬದ್ಧವಾಗಿ ಜೀವನ ಮಾಡುವುದಕ್ಕೆ ಕಾನೂನು ಪ್ರಕಾರ ಹರಿಜನ–ಗಿರಿಜನರಿಗೆ ಆದ್ಯತೆಯ ಮೇಲೆ ಪರವಾನಗಿಗಳನ್ನು ಕೊಡಬೇಕು. ಅಂದರೆ ಈ ವರ್ಗಗಳಿಗೆ ಕುಮ್ಮಕ್ಕು ಕೊಡಬೇಕು. ಚುನಾವಣೆಯಲ್ಲಿ ಪ್ರತಿಪಾದನೆ ಮಾಡಿದ್ದನ್ನು ರಾಜ್ಯ ಸರ್ಕಾರ ಸ್ಪಷ್ಟವಾಗಿ ಜಾರಿಗೆ ಕೊಡತಕ್ಕಂತಹ ವಿಚಾರದಲ್ಲಿ ಗಮನ ಕೊಡಬೇಕು.

ಬೆಂಗಳೂರು ನಗರದಲ್ಲಿ ಆಗಲೀ, ಗ್ರಾಮಾಂತರ ಪ್ರದೇಶಗಳಲ್ಲಿ ಆಗಲೀ ಅಥವಾ ಇತರ ಕಡೆಗಳಲ್ಲಿ ಆಗಲೀ ಸಕ್ಕರೆ ಎಷ್ಟರಮಟ್ಟಿಗೆ ಸಿಕ್ಕುತ್ತದೆ, ಕೆರೋಸಿನ್ ಎಷ್ಟರಮಟ್ಟಿಗೆ ಸಿಕ್ಕುತ್ತದೆ, ವೀಟ್ ಎಷ್ಟರಮಟ್ಟಿಗೆ ಸಿಕ್ಕುತ್ತದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಕಡೆ ಜನ ಗೋಧಿ ತಿನ್ನುವವರಲ್ಲ. ಮಾನ್ಯ ಮಂತ್ರಿಗಳಾದ ಬಸವಣ್ಣಪ್ಪನವರು ರಾಜ್ಯ

ದಲ್ಲಿ ಅಕ್ಕಿಯು ಸರಬರಾಜು ಕಡಿಮೆಯಾಗಿದೆ ಗೋಧಿಯನ್ನು ಜಾಸ್ತಿ ಕೊಡುತ್ತೇವೆಂದು ಹೇಳಿದರು. ಅವರು ಕೊಟ್ಟಿರತಕ್ಕ ಹೇಳಿಕೆ ನನಗೆ ಸಿಕ್ಕಲಿಲ್ಲ, ಆದರೆ ಇವರು ಈ ರೀತಿಯಾಗಿ ಹೇಳುವುದಕ್ಕೆ ಬದಲು ಅಕ್ಕಿಯನ್ನು ಹೆಚ್ಚಾಗಿ ಪಡೆಯಲಿಕ್ಕೆ ಹೋರಾಟ ಮಾಡಬೇಕಾಗಿತ್ತು. ಇಲ್ಲಿ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ, ಯಾರೋ ಒಬ್ಬರು ಶೆಟ್ಟರ ಅಂಗಡಿಗೆ ಹೋದರಂತೆ, ಹೋಗಿ, ಸ್ವಾಮಿ ಒಳ್ಳೆಯ ತೊಗರಿಬೇಳೆ ಕೊಡಿ ಎಂದರಂತೆ, ಶೆಟ್ಟರು ತೊಗರಿಬೇಳೆ ಇಲ್ಲ, ಒಳ್ಳೆಯ ಕಡ್ಲೆಬೇಳೆ ತೆಗೆದುಕೊಂಡು ಹೋಗಿ ಎಂದು ಹೇಳಿದರಂತೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಅಕ್ಕಿ ತೊಗರೀಬೇಳೆ ಬೇಡ ಎಂದರೆ ಯು. ಪಿ. ಮಂತ್ರಿಗಳು ಯು. ಪಿ. ಯಲ್ಲಿ ಗೋಧಿ ಸಿಕ್ಕಲಿಲ್ಲ ಎಂದರೆ ಇಲಿ ತಿಂದು ಜೀವಿಸಿರಿ ಎಂದು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಮಾನ್ಯ ಆಹಾರ ಮಂತ್ರಿಗಳು ಹೇಳಿದ್ದುದು, ಸಕ್ಕರೆ ಖಾಯಿಲೆ ಇರುವವರು ಅಕ್ಕಿಯನ್ನು ತಿನ್ನುವುದು ಬೇಡ, ಗೋಧಿ ತಿಂದರೆ ಒಳ್ಳೆಯದು ಎಂದು.

ಶ್ರೀ ಎಸ್. ಬಂಗಾರಪ್ಪ.—ಅಂಥ ಜನ ನಿಮ್ಮ ಮಂತ್ರಿ ಮಂಡಲದಲ್ಲಿ ಇರಬಹುದೇನೋ ಮತ್ತು ಎಸೆನ್ಸಿಯಲ್ ಕಮಾಡೀಟೀಸ್ ಏನು ಇವೆ ಇವುಗಳ ಬೆಲೆಗಳ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇದರ ಬಗ್ಗೆ ಪತ್ರಿಕೆಯಲ್ಲಿ ಆಗಸ್ಟ್ ೨೨, ೮೩ರಂದು ಒಂದು ಆರ್ಟಿಕಲ್ ಬಂದಿದೆ. ನಮಗೆ ಗೊತ್ತಿರುವ ಹಾಗೆ ಬೆಲೆ ಏರಿಕೆಗೆ ಕಾರಣ ಹಣದ ಬೆಲೆ ಕಡಿಮೆಯಾಗುವುದು, ಇದಕ್ಕೆ ಹಣದುಬ್ಬರ ಎನ್ನುತ್ತಾರೆ. ಇದಕ್ಕೆ ಅನೇಕ ಜನ ಆರ್ಥಿಕ ತಜ್ಞರು ಹಲವಾರು ಕಾರಣಗಳನ್ನು ಕೊಡುತ್ತಾರೆ. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಹಣದುಬ್ಬರದ ಪ್ರಶ್ನೆ ಬಂದಾಗ ದೇಶದಲ್ಲಿ ಪ್ರೊಡಕ್ಷನ್‌ನ್ನು ಜಾಸ್ತಿ ಮಾಡಬೇಕು ಹಣದುಬ್ಬರವನ್ನು ತಡೆಯಬೇಕಾದರೆ ಆರ್ಥಿಕ ತಜ್ಞರು ಕೆಲವು ಸಲಹೆಗಳನ್ನು ಕೊಡುತ್ತಾರೆ. ಇದಕ್ಕೆ ನನಗೆ ಗೊತ್ತಿರುವ ಹಾಗೆ ನಮ್ಮ ಉತ್ಪನ್ನವನ್ನು ನಾವು ಜಾಸ್ತಿ ಮಾಡಬೇಕು. ಇಂಪೋರ್ಟ್ಸನ್ನು ಕಡಿಮೆ ಮಾಡಬೇಕು, ಬ್ಲಾಕ್ ಮನಿಯನ್ನು ಅನ್‌ಅರ್ಥ್ ಮಾಡಬೇಕು. ಇದೆಲ್ಲಾ ಇನ್‌ಫ್ಲೇಷನರಿ ಮೆಷರ್ಸ್‌ನ್ನು ಸರ್ಕಾರದವರು ಜಾರಿಗೆ ತಂದರೆ ಹಣದುಬ್ಬರವನ್ನು ಕಡಿಮೆಮಾಡಬಹುದು. ಹಣದುಬ್ಬರ ಕಡಿಮೆಯಾದರೆ ಬೆಲೆ ಏರಿಕೆಯನ್ನು ಕಡಿಮೆ ಮಾಡಬಹುದು. ಇಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ರಾಜ್ಯ ಸರ್ಕಾರಕ್ಕೆ ಹಕ್ಕಿದೆ ಎಂದು ಕೆಲವರು ಹೇಳುತ್ತಾರೆ. ಈಗಲೂ ಇಂಥ ಹಕ್ಕು ಸರ್ಕಾರಕ್ಕೆ ಇದೆಯೆಂದು ನಾನು ಭಾವಿಸುತ್ತೇನೆ.

೧೯೮೩ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಜನವರಿಯಲ್ಲಿ ಒಂದು ಕ್ವಿಂಟಾಲ್‌ಗೆ ೩೨೦ರಿಂದ ೩೭೦ಕ್ಕೆ ಹೋಯಿತು.

ಏಪ್ರಿಲ್‌ನಲ್ಲಿ	೩೭೦ರಿಂದ ೪೦೦ಕ್ಕೆ ಹೋಯಿತು.
ಜುಲೈನಲ್ಲಿ	೩೮೦ರಿಂದ ೪೨೦ಕ್ಕೆ ಹೋಯಿತು.
ಆಗಸ್ಟ್ ತಿಂಗಳಲ್ಲಿ	೪೦೦ರಿಂದ ೪೮೦ಕ್ಕೆ ಹೋಯಿತು.

ರಾಗಿಯ ಬೆಲೆ	ಜನವರಿಯಲ್ಲಿ	೧೫೫—೧೬೫
	ಏಪ್ರಿಲ್‌ನಲ್ಲಿ	೧೭೫—೧೮೨
	ಜುಲೈನಲ್ಲಿ	೧೬೫—೧೯೦
	ಆಗಸ್ಟ್‌ನಲ್ಲಿ	೧೯೫—೨೦೫
ಮುಸ್ಕಿನಜೋಳ	ಜನವರಿಯಲ್ಲಿ	೧೪೦
	ಏಪ್ರಿಲ್‌ನಲ್ಲಿ	೧೫೦
	ಜುಲೈನಲ್ಲಿ	೨೦೫
	ಆಗಸ್ಟ್ ತಿಂಗಳಲ್ಲಿ	೨೩೦ಕ್ಕೆ ಹೋಯಿತು.

ಮೆಣಸಿನಕಾಯಿ	ಜನವರಿ	ಒಂದು ಕ್ವಿಂಟಾಲ್‌ಗೆ	೫೦೦-೯೦೦ ರೂಪಾಯಿಗಳು
	ಏಪ್ರಿಲ್		೪೦೦-೯೦೦
	ಜುಲೈ		೫೦೦-೯೦೦
	ಆಗಸ್ಟ್‌ನಲ್ಲಿ		೫೦೦-೯೦೦

ಹುಣಸೇಹಣ್ಣು ಜನವರಿಯಲ್ಲಿ ಕ್ವಿಂಟಾಲ್‌ಗೆ ೨೫೦–೪೦೦
ಏಪ್ರಿಲ್‌ನಲ್ಲಿ ೩೦೦–೫೫೦
ಜುಲೈನಲ್ಲಿ ೩೦೦–೫೫೦
ಆಗಸ್ಟ್‌ನಲ್ಲಿ ೩೦೦–೫೫೦

ಉಪಸಭಾಧ್ಯಕ್ಷರು.—ಮುಕ್ತ ಮಾರುಕಟ್ಟೆಯಲ್ಲಿ ಈ ರೇಟಿನಲ್ಲಿ ಪದಾರ್ಥಗಳು ಸಿಕ್ಕುವುದಿಲ್ಲ.

ಎಸ್. ಬಂಗಾರಪ್ಪ.—ಆಮೇಲೆ ಕಡ್ಲೆಕಾಯಿ ಎಣ್ಣೆ, ಜನವರಿಯಲ್ಲಿ ಜಾಸ್ತಿಯಾಗಿದೆ. ಈಗಲೂ ಜಾಸ್ತಿಯಾಗಿದೆ. ಅದೇ ರೀತಿಯಲ್ಲಿ ಬೆಲ್ಲ ಜನವರಿಯಲ್ಲಿ ೧೮೦–೨೩೦

ಏಪ್ರಿಲ್‌ನಲ್ಲಿ ೨೫೦–೪೦೦
ಜುಲೈನಲ್ಲಿ ೩೦೦–೪೨೦
ಆಗಸ್ಟ್‌ನಲ್ಲಿ ೩೫೦–೪೮೦
ತೊಗರೀಬೇಳೆ ಜನವರಿ ೪೮೩

ಆಗಸ್ಟ್‌ನಲ್ಲಿ ೫೭೬ಕ್ಕೆ ಹೋಯಿತು, ಈಗ ಕೆಲವರು ಹೇಳುತ್ತಾರೆ ಇದು ೮೦೦ ರೂಪಾಯಿಗಳು ಆಗಿದೆಯೆಂದು.

ಆಮೇಲೆ ಈರುಳ್ಳಿ, ಜನವರಿಯಲ್ಲಿ ಒಂದು ಕ್ವಿಂಟಾಲ್‌ಗೆ ೬೦–೧೨೦ ರೂಪಾಯಿಗಳು
ಏಪ್ರಿಲ್‌ನಲ್ಲಿ ೧೨೦–೧೪೦
ಜುಲೈನಲ್ಲಿ ೧೬೦–೧೮೦
ಆಗಸ್ಟ್‌ನಲ್ಲಿ ೧೯೦–೨೦೦ ಈಗ ೨೫೦ ರೂಪಾಯಿಗಳ ವರೆಗೂ ಹೋಗಿದೆ. ಆಮೇಲೆ ತೆಂಗಿನಕಾಯಿ, ೧೪೦೦–೧೮೦೦

ಜುಲೈನಲ್ಲಿ ೧೮೦೦–೧೯೦೦
ಆಗಸ್ಟ್‌ನಲ್ಲಿ ೧೯೦೦–೨೨೦೦, ೧೦೦೦ಕ್ಕೆ.

ವೈಸ್. ಚೇರ್ಮನ್ (ಶ್ರೀ ಪಿ. ರಾಮದೇವ್.(—ಈಗ ಹಬ್ಬದ ಕಾಲ ಆದ್ದರಿಂದ ಬೆಲೆಗಳು ಜಾಸ್ತಿಯಾಗಿದೆ. ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲವೇ

ಶ್ರೀ ಎಚ್. ಬಿ. ಲಕ್ಷ್ಮಯ್ಯ.—ನಿಜವಾಗಿಯೂ ಬೆಳೆಗಾರರಿಗೇ ರೇಟು ಸಿಕ್ಕಲ್ಲ. ತೆಂಗಿನಕಾಯಿ ಯಾರು ಬೆಳೆಯುತ್ತಾರೆ ಅವರಿಗೆ ಈ ರೇಟು ಸಿಕ್ಕಿದೆ.

ಶ್ರೀ ಹನುಮಂತರಾವ್ ದೇಸಾಯಿ.—೧೯೭೮ರಲ್ಲಿ ಈರುಳ್ಳಿಯ ಬೆಲೆ ಉತ್ತರ ಪ್ರದೇಶದಲ್ಲಿ ೧೫ ರೂಪಾಯಿಗಳಿಗೆ ಒಂದು ಕೆ. ಜಿ. ಇತ್ತು.

ಶ್ರೀ ಎಸ್. ಬಂಗಾರಪ್ಪ.—ನಾನು ಇಲ್ಲಿ ಈ ವಿಚಾರದಲ್ಲಿ ಯಾವುದೇ ರೀತಿಯ ರಾಜಕೀಯ ಬಣ್ಣವನ್ನು ಕೊಡುವುದು ಬೇಕಾಗಿಲ್ಲ. ತಪ್ಪುಗಳು ಯಾರ ಕಾಲದಲ್ಲಿ ಆಗಿದ್ದರೂ ತಪ್ಪು ತಪ್ಪೇ. ಆದರೆ ಈ ಸರ್ಕಾರ ಹಿಂದಿನವರು ತಪ್ಪು ಮಾಡಿದ್ದಾರೆಂದು ತಪ್ಪನ್ನು ಸರಿ ಮಾಡದೆ ಇದ್ದರೆ ಅದೂ ತಪ್ಪಾಗುತ್ತದೆಂದು ನಾನು ಹೇಳಬೇಕಾಗಿದೆ. ಮಾನ್ಯ ಹನುಮಂತರಾವ್ ದೇಸಾಯಿಯವರು ಹೇಳುವಂಥ ರೇಟಿನಲ್ಲಿ ಈರುಳ್ಳಿಯನ್ನು ಮಾರಾಟ ಮಾಡಿಸಿದರೆ ಆ ಕ್ಷೇತ್ರದ ಜನ ಅವರು ಸುಮ್ಮನೆ ಬಿಡುತ್ತಾರೆಯೇ? ಆದ್ದರಿಂದ ನಾನು ಹೇಳುವುದು, ಸರ್ಕಾರದವರು ಬೆಲೆಗಳನ್ನು ತಗ್ಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇ ಆಗಿದ್ದರೆ ಬೆಲೆಗಳು ಈ ಮಟ್ಟಕ್ಕೆ ಹೋಗುತ್ತಿರಲಿಲ್ಲ. ಸರ್ಕಾರದ ಕಂಟ್ರೋಲ್ ತಪ್ಪಿ ಹೋಯಿತು. ತಮ್ಮ ಪ್ರಯತ್ನವನ್ನು ಈ ದಿಸೆಯಲ್ಲಿ ರುಜುವಾತು ಮಾಡಬೇಕಾದರೆ ತಾವು ಕೈಗೊಂಡಿರುವ ಕ್ರಮವನ್ನು ಹೇಳಿ, ನೋಡೋಣ.

ಶ್ರೀ ಕೆ.ಜಿ. ಮಹೇಶ್ವರಪ್ಪ.—ಭಾರತದ ಯಾವುದಾದರೂ ರಾಜ್ಯದಲ್ಲಿ ಇದಕ್ಕಿಂತ ಕಡಿಮೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಪದೇ ಪದೇ ಹೇಳುತ್ತಾ ಇದ್ದೇನೆ. ಪ್ರಾಮಾಣಿಕ ಪ್ರಯತ್ನದ ಕೊರತೆ ಬಿದ್ದಾಗ ಇದು ಆಗುತ್ತದೆ, ಆದ್ದರಿಂದ ಕೊನೆಯ ಪಕ್ಷ ಬೆಲೆಗಳು ಪುನಃ ಏರದ ಹಾಗೆ ನಿಲ್ಲಿಸಬೇಕು. we have to arrest the price rise at certain level. ಇದನ್ನು ಇಳಿಸುವುದಕ್ಕೆ ಆಗಲಿಲ್ಲ ಎಂದರೆ, That is al right. ನಾವು ಒಂದು ಮಾರ್ಜಿನ್ ಕೊಡೋಣ, ನೀವು ಬೆಲೆಗಳು ಏರದಹಾಗೆ ಆ ಕೆಲಸ ನೀವು ಮಾಡಿಬಿಟ್ಟರೆ ಸಾಕು. ನೀವು ಬಂದಮೇಲೆ ಏರಿಬಿಟ್ಟರೆ ನೀವು ಏಕೆ ಇಲ್ಲಿರಬೇಕು ಎನ್ನತಕ್ಕ ಪ್ರಶ್ನೆಯನ್ನು ಜನ ಕೇಳುತ್ತಾರೆ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರದವರು ಸ್ಪಷ್ಟವಾಗಿ ಮಾಡಿಲ್ಲ. ಬೆಲೆ ಏರಿಕೆ ವಿಚಾರ ನಮಗೆ ಸಂಬಂಧವಿಲ್ಲ ಎಂದು ನೂರಾರು ಪತ್ರಿಕಾ ಹೇಳಿಕೆಗಳನ್ನು ಮುಖ್ಯ ಮಂತ್ರಿಯವರು, ಮಂತ್ರಿಯವರು ಕೊಟ್ಟಿದ್ದಾರೆ. ಅದೆಲ್ಲಾ ಇಲ್ಲಿದೆ ಒದುತ್ತೇನೆ. ಬೆಲೆ ಏರಿಕೆ ವಿಚಾರದಲ್ಲಿ ಕೇಂದ್ರದ ಹೊಣೆ ಎನ್ನತಕ್ಕ ಮಾತನ್ನು ಅಧಿಕಾರದಲ್ಲಿರತಕ್ಕವರು ಹೇಳಿಬಿಟ್ಟರೆ, ಕಾನೂನು ಪ್ರಕಾರ ನಿಮಗೆ ಎಷ್ಟು ಅಧಿಕಾರವಿದೆ ಎನ್ನುವುದನ್ನು ಓದಿದ್ದೀರಾ ?

ಶ್ರೀ ಕೆ.ಬಿ. ಮಲ್ಲಪ್ಪ.—ಹಿಂದೆ ನಮ್ಮ ರಾಷ್ಟ್ರದಲ್ಲಿ ಸಕ್ಕರೆ ಬೆಲೆ ಜಾಸ್ತಿ ಆದಾಗ ನಮ್ಮ ಕೇಂದ್ರದ ನಾಯಕಿಯವರು ಏನು ಹೇಳಿದರು ಅಂದರೆ, ಪ್ರಪಂಚದ ಎಲ್ಲಾ ಭಾಗಗಳಲ್ಲಿ ಆಗಿದೆ, ನಮ್ಮ ದೇಶದಲ್ಲಿ ಏನು ಮಹಾ ಎಂದು ಹೇಳಿದರು. ಈ ರೀತಿ ಕೇಂದ್ರ ಸರ್ಕಾರದವರು ಬೆಲೆ ಏರಿಕೆಗೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದು ಭ್ರಷ್ಟಾಚಾರಕ್ಕೆ ಬೆಂಬಲ ಕೊಡುತ್ತಾ ಬಂದರು. ಅದರ ಪ್ರತಿಫಲವಾಗಿ ನಾವು ಇವತ್ತು ಇದನ್ನು ಅನುಭವಿಸತಕ್ಕ ಸಂದರ್ಭ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸರ್ಕಾರದಲ್ಲಿ ಪ್ರಾಮಾಣಿಕತನದ ಕೊರತೆ ಎದ್ದು ಕಾಣುತ್ತಾ ಇದೆ ಎಂದು ಹೇಳುತ್ತಾ ಇದ್ದೇನೆ ಪ್ರಾಮಾಣಿಕತನದ ಬಗ್ಗೆ ನನಗೆ ಬಂದಿರತಕ್ಕ ವರದಿಗಳ ಪ್ರಕಾರ ಇಲ್ಲಿ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಗವರ್ನಮೆಂಟ್ ಆರ್ಡರ್ ಇದೆ. ಪ್ರಾಮಾಣಿಕದ ಕೊರತೆ ಹೇಗೆ ಇದೆ ಎನ್ನುವುದಕ್ಕೆ ಇದನ್ನು ನಾನು ಹೇಳುತ್ತಾ ಇದ್ದೇನೆ. ಪುಣ್ಯಕ್ಕೆ ಅಧಿಕಾರಿಗಳು ಬಹಳ ಎಚ್ಚರದಿಂದ ಇದ್ದರು, ಅದಕ್ಕಾಗಿ ನಾನು ಅವರಿಗೆ ಶಹಭಾಸ್‌ಗಿರಿ ಕೊಡಬೇಕು, ಸರ್ಕಾರಕ್ಕೆ ಅಲ್ಲ ನೀವು ಮಾಡಿರತಕ್ಕ ಜಿ.ಒ. ನೋಡಿದರೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ದಿನಾಂಕ ೨೬-೭-೧೯೮೩ರಲ್ಲಿ ಒಂದು ಗವರ್ನಮೆಂಟ್ ಆರ್ಡರ್ ಆಗಿದೆ. ಇದರಲ್ಲಿ ವೀಟ್ ಬ್ರಾನ್, ಬೂಸಾ ವಿಚಾರದಲ್ಲಿ ರೋಲರ್ ಫ್ಲೋರ್ ಮಿಲ್ಸ್‌ಗೆ ಆರ್ಡರ್ ಕೊಟ್ಟಿರತಕ್ಕಂಥಾದ್ದು ಒಂದು ದೊಡ್ಡ ಪಟ್ಟಿ ಇದೆ. ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಕರ್ನಾಟಕ ಫುಡ್ ಕಾರ್ಪೊರೇಷನ್ ಇವರಿಬ್ಬರಿಗೂ ಎಲ್ಲಾ ಬೂಸಾವನ್ನು ಕೊಳ್ಳಿರಿ ಎನ್ನತಕ್ಕ ಒಂದು ಆರ್ಡರ್ ಮಾಡಿದರು ಯಾವ ರೇಟಿಗೆ ಎಂದರೆ, ಇದರಲ್ಲಿ ಬರೆದಿದ್ದಾರೆ. It says

> "This regulation of distribution of wheat bran letter No.... dated... June 1983 from the Government of Karnataka, Food and Civil Supplies Department, Bangalore."

Sir this was issued by the Director of Food and Civil Supplies Department. Name of the roller mills ಇದರಲ್ಲಿ ಎಲ್ಲೆಲ್ಲಿ ಪರ್ಚೇಸ್ ಮಾಡಬೇಕು ಎನ್ನತಕ್ಕ ಲಿಸ್ಟ್ ಇದೆ. RSM Roller Flour Mill, Seethalaksmi Roller Mill, Krishna Flour Mill, Srinivasa Flour Mill. ಒಟ್ಟು 14 Roller Flour Mills ನಲ್ಲಿ ಬೂಸ ಕೊಳ್ಳಬೇಕು, ೧೨೦೦ ಮೆಟ್ರಿಕ್ ಟನ್ ಬೂಸ ಪರ್ಚೇಸ್ ಮಾಡಬೇಕು ಎಂದು ಗವರ್ನಮೆಂಟ್ ಆರ್ಡರ್ ಮಾಡಿದ್ದಾರೆ, ಯಾವ ರೇಟಿಗೆ ಕೊಳ್ಳಬೇಕು. ಎಂದು ಮಾಡಿದ್ದಾರೆಂದರೆ.

It further says "The above roller flour mills are directed to deliver the wheat bran in the form of flakes to the Karnataka Dairy Development Corporation Limited and Karnataka State Co-operative Marketing Federation at the rate not more than Rs. 120 per quintal, *i.e.* the rate which has been notionally fixed *vide* O.M. dated 30th April 1983."

At that time, this wheat bran was available in the open market at Rs. 90/- per quintal. 120 ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಕೊಳ್ಳಬೇಕು ಇಲ್ಲಿ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ಬೂಸಾ ರೇಟು ಒಪನ್ ಮಾರ್ಕೆಟ್‌ನಲ್ಲಿ ಪರ್ ಕ್ವಿಂಟಾಲ್‌ಗೆ ೯೦ ರೂಪಾಯಿಗಳು ಇದೆ ಈ ರೇಟಿಗೆ ಬೆಂಗಳೂರಿನಲ್ಲಿ ಸಿಗುತ್ತದೆ. ಮಾರ್ಕೆಟಿಂಗ್ ಫೆಡರೇಷನ್‌ಗೆ ಮತ್ತು ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಒಂದು ಕ್ವಿಂಟಾಲ್ ೧೨೦ ರೂಪಾಯಿಗಳಂತೆ ಬೂಸ ಕೊಳ್ಳಿ ಎನ್ನತಕ್ಕ ಬಗ್ಗೆ ನೀವು ಜಿ.ಓ. ಮಾಡತಕ್ಕ ಮಟ್ಟಕ್ಕೆ ಹೋಗುವುದಿದ್ದರೆ, ೧೨೦೦ ಮೆಟ್ರಿಕ್ ಟನ್ ಹಣದ ಇನ್‌ವಾಲ್ವ್‌ಮೆಂಟ್ ಎಷ್ಟಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಹಾಗಾದರೆ, Difference of about Rs. 30/- per quintal. ದಿನಾಂಕ ೧೨-೮-೧೯೮೩ರಲ್ಲಿ ಮತ್ತೊಂದು ಜಿ.ಓ. ಆಗಿದೆ. On 12-8-83, they have issued another G.O. which says :

> "The Karnataka Dairy Development Corporation Limited, Bangalore and Karnataka Co-operative Marketing Federation, Bangalore were allotted wheat bran purchased by the roller flour mills out of the allotment of the wheat for the month of July and August 1983. None of the above organisations lifted the wheat bran allotted to them by this O.M. of even Number dated 26-7-1983. Hence the roller flour mills are permitted to dispose off the wheat bran allotted to the Karnataka Dairy Development Corporation and the Karnataka State Co-operative Marketing Federation, Bangalore for the month of July and August 1983 in free sales."

ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೋಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ೧೨೦೦ ಮೆಟ್ರಿಕ್ ಟನ್ ಒಪನ್ ಮಾರ್ಕೆಟ್‌ನಲ್ಲಿ ಒಂದು ಕ್ವಿಂಟಾಲ್‌ಗೆ ೯೦ ರೂಪಾಯಿಗಳು ಇದ್ದಾಗ ಇವರು ಕ್ವಿಂಟಾಲ್‌ಗೆ ೧೨೦ ರೂಪಾಯಿಗಳಂತೆ ತೆಗೆದುಕೊಂಡು ಬಿಟ್ಟರೆ ಎಷ್ಟು ಲಾಸ್ ಆಗುತ್ತಿದೆ ಎನ್ನುವುದು ಅವರ ಗಮನಕ್ಕೆ ಬಂದು, The officials refused the Government directions here. ಇವರು ಆರ್ಡರ್ ಮಾಡಿ ಕಳಿಸಿರತಕ್ಕಂಥಾದ್ದು ಒಂದು ಕ್ವಿಂಟಾಲ್‌ಗೆ ಇಷ್ಟು ವ್ಯತ್ಯಾಸ ಇದ್ದರೆ ಯಾರ ಹೊಟ್ಟೆ ಉರಿಸುವುದಕ್ಕೆ ? ಒಂದು ಕ್ವಿಂಟಾಲ್‌ಗೆ ೧೨೦ ರೂಪಾಯಿಗಳನ್ನು ರೋಲರ್ ಫ್ಲೋರ್ ಮಿಲ್ಸ್‌ನವರಿಗೆ ಕೊಡುವಂಥಾದ್ದು ಇದೆ. ಅನೇಕ ರೋಲರ್ ಫ್ಲೋರ್ ಮಿಲ್ಸ್‌ಗಳ ಮೇಲೆ ಬೇಕಾದಷ್ಟು ಗುರುತರವಾದ ಆಪಾದನೆಗಳಿವೆ. ಅದರ ಬಗ್ಗೆ ಹಿಂದೆ ಈ ಸದನದಲ್ಲಿ ಬೇಕಾದಷ್ಟು ಚರ್ಚೆಗಳು ನಡೆದಿವೆ. ೯೦ ರೂಪಾಯಿಗಳು ಇರುವುದನ್ನು ೧೨೦ ರೂಪಾಯಿಗಳಿಗೆ ಕೊಳ್ಳಿ ಎಂದು ಜಿ.ಓ. ಮೂಲಕ ವಿಧಾನಸೌಧದಿಂದ ಹೋಗುವುದಿದ್ದರೆ ಇದಕ್ಕೆ ನಾವು ಏನು ಕಲ್ಪನೆ ಮಾಡಬೇಕು? ಏನು ಅರ್ಥ ಮಾಡಬೇಕು ?

ಒಬ್ಬ ಸದಸ್ಯರು.—ತಾವು ಗುಣಮಟ್ಟ ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಕ್ವಾಲಿಟಿ ಬೇರೆ ಪ್ರಶ್ನೆ. ೯೦ ರೂಪಾಯಿ ರೇಟ್ ಇದೆ, ಅದನ್ನು ೧೨೦ ರೂಪಾಯಿಗಳಿಗೆ ಕೊಂಡರೆ ನಮಗೆ ಎಷ್ಟು ಲಾಸ್ ಆಗುತ್ತದೆ ? Since the Heads of those organisations were upright persons. ಈ ವಿಚಾರದಲ್ಲಿ ಇದ್ದುದರಿಂದ ನಮಗೆ ಹಣವನ್ನು ಉಳಿಸುವುದಕ್ಕೆ ಕಾರಣವಾಯಿತು. ರೋಲರ್ ಫ್ಲೋರ್ ಮಿಲ್‌ಗಳಿಗೆ ಹೋಗಿ ಸೇರತಕ್ಕ ಲಕ್ಷಾಂತರ ರೂಪಾಯಿಗಳನ್ನು ಉಳಿಸುವುದಕ್ಕೆ ಅಧಿಕಾರಿಗಳು ಕಾರಣರಾಗಿದ್ದಾರೆ, ಅದಕ್ಕೋಸ್ಕರ I must thank them. ಮಾನ್ಯ ಅಧ್ಯಕ್ಷರೇ ಇವರ ಪ್ರಾಮಾಣಿಕತನಕ್ಕೆ ಇದು ಒಂದು ಉದಾಹರಣೆ ಕೊಟ್ಟೆ. ಇಂತಹ ಉದಾಹರಣೆಗಳು ಬೇಕಾದಷ್ಟು ಇವೆ, ಇದನ್ನೆಲ್ಲಾ ಪಟ್ಟಿ ಮಾಡುವುದಕ್ಕೆ ಈ ಸಂದರ್ಭದಲ್ಲಿ ನಾನು ಹೋಗುವುದಿಲ್ಲ. ಪ್ರಾಮಾಣಿಕತನ ಬೆಲೆಗಳ ಏರಿಕೆಯ ವಿಚಾರದಲ್ಲಿ ಇರಬೇಕು. ತರಕಾರಿ ವಿಚಾರದಲ್ಲಿ ಇವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅದನ್ನು ಒಪ್ಪುತ್ತೇನೆ. ಮಳೆ ಸಕಾಲಕ್ಕೆ ಬಂದಿಲ್ಲ. ನಮಗೆ ತರಕಾರಿ ಬೆಳೆಯುವುದಕ್ಕೆ ಸಾಕಷ್ಟು

ಕಾಲ ಸಿಕ್ಕಿಲ್ಲ ಎಂದು ಹೇಳಿದ್ದಾರೆ. ಆದರೆ ಎಷ್ಟು ಪ್ರಮಾಣದಲ್ಲಿ ? ನನಗೆ ಗೊತ್ತಿರುವ ಹಾಗೆ, ಡಿಸೆಂಬರ್–ಜನವರಿಯಲ್ಲಿ ಹುರುಳಿಕಾಯಿ ರೇಟು ಒಂದು ಕೆ.ಜಿ.ಗೆ ಒಂದು ರೂಪಾಯಿ ೪೦ ಪೈಸೆ ಇದ್ದದ್ದು ಜುಲೈ ಆಗಸ್ಟ್‌ನಲ್ಲಿ ಎರಡೂವರೆ, ಮೂರು ರೂಪಾಯಿಗಳು ಆಯಿತು, ಕೆಲವು ಕಡೆ ೪ ರೂಪಾಯಿಗಳ ತನಕ ಹೋಯಿತು. ಹಸಿಮೆಣಸಿನಕಾಯಿ ಡಿಸೆಂಬರ್–ಜನವರಿಯಲ್ಲಿ ಒಂದು ಕೆ.ಜಿ.ಗೆ ೪ ರೂಪಾಯಿಗಳು ಇತ್ತು ಜುಲೈ, ಆಗಸ್ಟ್‌ನಲ್ಲಿ ೮ ರೂಪಾಯಿಗಳವರೆಗೆ ಹೋಯಿತು. ಹಬ್ಬದ ಕಾಲದಲ್ಲಿ ಆಯಿತು ಮತ್ತು ಕೂಡ ವಿರತಕ್ಕ ಪರಿಸ್ಥಿತಿ ಆಯಿತು. ಟೊಮಾಟೊ ಡಿಸೆಂಬರ್ ಜನವರಿಯಲ್ಲಿ ಚುನಾವಣೆ ಕಾಲದಲ್ಲಿ ಒಂದು ಕೆ.ಜಿ.ಗೆ ೨ ರೂಪಾಯಿ ೫೦ ಪೈಸೆ ಇತ್ತು, ತಮಗೆ ಗೊತ್ತಿರುವ ಹಾಗೆ ೧೦ ರೂಪಾಯಿಗಳಿಂದ ೧೪ ರೂಪಾಯಿಗಳ ತನಕ ಒಂದು ಕೆ.ಜಿ.ಗೆ ಹೋಯಿತು.

ಶ್ರೀ ಕೆ.ಜಿ. ಮಹೇಶ್ವರಪ್ಪ.—ಈಗ ರೇಟ್ ಕಡಿಮೆಯಾಗಿದೆಯಲ್ಲ ಅದಕ್ಕೆ ಕಾಂಪ್ಲಿಮೆಂಟ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಬೆಲೆಗಳು ತುಟ್ಟತುದಿ ಮುಟ್ಟಿ ತಮಗೆ ತಾವೇ ಇಳಿದುಕೊಂಡವೇ ಹೊರತು ನೀವು ಇಳಿಸಿದ್ದು ಅಲ್ಲ ಅವು ಬೇಜಾರಾಗಿ ಇಳಿದಿವೆ ನಿಮ್ಮ ವಾದ ಹೇಗೆ ಆಗುತ್ತದೆ ಎಂದರೆ ತಂದೆಗೆ ಒಬ್ಬ ಮಗ ಇರುತ್ತಾನೆ, ತಂದೆ ಹೇಳಬಹುದು, ನಿನ್ನನ್ನು ದೊಡ್ಡವನನ್ನಾಗಿ ಮಾಡಿದ್ದೇನೆ, ನಿನಗೆ ಮೀಸೆ ಬರುವುದಕ್ಕೆ ಕಾರಣ ನಾನೇ ಎಂದು. ಹಾಗೆ ಅಂದು ಬಿಟ್ಟರೆ ಹೇಗೆ ? ವಯಸ್ಸಿಗೆ ಬಂದ ಕಾಲಕ್ಕೆ ಮೀಸೆ ಹುಟ್ಟುವ ಕಾಲಕ್ಕೆ ಮೀಸೆ ಬರುತ್ತದೆ. ಆದರೆ ಅಪ್ಪನೇ ಮೀಸೆ ಹುಟ್ಟಿಸಿದೇ ? ಇದನ್ನು ಅರ್ಥಮಾಡಿಕೊಳ್ಳಬೇಕು ಮೀಸೆ ಹುಟ್ಟಿತು, ಅದಕೋಸ್ಕರ ನಾನು ಅಪ್ಪ, ನೀನು ನನಗೆ ವಿಧೇಯನಾಗಿರಬೇಕು ಎಂದು ಹೇಳಬಹುದು. ಮಕ್ಕಳು ತಂದೆಗೆ ವಿಧೇಯರಾಗಿರಬೇಕು, ಮಕ್ಕಳು ಎಗನೆಸ್ಟ್ ಆಗಿ ಇರಬೇಕು ಎಂದು ನಾನು ಹೇಳುವುದಿಲ್ಲ.

ಒಬ್ಬ ಸದಸ್ಯರು.—ಕೆಲವರಿಗೆ ಎಷ್ಟೇ ವಯಸ್ಸಾದರೂ ಮೀಸೆ ಬಂದಿರುವುದಿಲ್ಲ.

ಆದುದರಿಂದ ಇಲ್ಲಿ ಶಹಬಾಸಗಿರಿ ಕೊಡತಕ್ಕಂಥದ್ದು ಏನೂ ಇಲ್ಲ. ನಾವು ಹೊರಗಡೆ ಹೋದಾಗ ಪ್ರೈವೇಟ್ ಆಗಿ ಭಾಷಣ ಮಾಡುವಾಗ ''ಇದರಲ್ಲಿ ಏನಿದೆ ಮಹಾ ಬದನೆಕಾಯಿ'' ಎಂದು ಮಾತನಾಡುತ್ತೇವೆ. ಬದನೆಕಾಯಿಯ ಬಗ್ಗೆ ಇನ್ನು ಮೇಲೆ ಆ ರೀತಿಯಾಗಿ ನಾವು ಭಾಷಣ ಮಾಡುವ ಹಾಗಿಲ್ಲ ಏತಕ್ಕೆಂದರೆ ಬದನೆಕಾಯಿಯ ಬೆಲೆ ಕೂಡ ಏರಿ ಹೋಗಿ ಬಿಟ್ಟಿದೆ.

ಒಬ್ಬ ಸದಸ್ಯರು.—ಯಾರ ಬೆಲೆಯನ್ನಾದರೂ ಕಳೆಯಿರಿ ಆದರೆ ಬದನೆಕಾಯಿಯ ಬೆಲೆಯನ್ನು ಮಾತ್ರ ಕಳೆಯಬೇಡಿ.

ಶ್ರೀ ಎಸ್. ಬಂಗಾರಪ್ಪ.—ಇನ್ನು ಹೆಣ್ಣು ಮಕ್ಕಳು ಅಡಿಗೆಗೆ ರುಚಿ ಬರಲಿ ಎಂದು ಕೊತ್ತಂಬರಿ ಸೊಪ್ಪನ್ನು ಒಗ್ಗರಣೆಗೆ ಹಾಕುತ್ತಾರೆ. ೨೫ ಪೈಸೆಗೆ ಒಂದು ಕಟ್ಟು ಇದ್ದದ್ದು ಚುನಾವಣಾ ಕಾಲದಲ್ಲಿ ಅದು ೭೫ ಪೈಸೆ ೧ ರೂಪಾಯಿವರೆಗೂ ಹೊರಟು ಹೋಗಿದೆ, ಅದನ್ನೂ ಸಹ ನಿಮ್ಮಿಂದ ಇಳಿಸುವುದಕ್ಕೆ ಆಗಿಲ್ಲ. ಅದೇ ನೀತಿಯಾಗಿ ನಿಂಬೆ ಹಣ್ಣಿನ ಬೆಲೆ ೨೫ಪೈಸೆ, ೫೦ಪೈಸೆ. ೧ರೂಪಾಯಿಗೆ ಒಂದರಂತೆ ಬೆಲೆಯಾಗಿ ಬಿಟ್ಟಿದೆ. ಅಡಿಗೆ ಸಾಮಾನು ಯಾವುದನ್ನೂ ಸಹ ನಿಮ್ಮಿಂದ ಇಳಿಸುವುದಕ್ಕೆ ಆಗಿಲ್ಲ. ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರ ಮನೆಯಲ್ಲಿ ಹೆಣ್ಣು ಮಕ್ಕಳು ಇದ್ದಿದ್ದರೆ ಇದರ ಬೆಲೆ ದುಬಾರಿ ಆಗಿರುವುದನ್ನು ಹೇಳುತ್ತಿದ್ದರು. ಆದರೆ ಅವರಿಗೆ ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ. ರಘುಪತಿ.—ಶ್ರೀ ಲಕ್ಷ್ಮೀಸಾಗರ್‌ರವರ ಮನೆಯಲ್ಲಿ ಯಾರೂ ಇಲ್ಲ...

ಶ್ರೀ ಎಸ್. ಬಂಗಾರಪ್ಪ.—ನೀವು ಒಬ್ಬರು, ಇಲ್ಲಿ ಇದ್ದಿರೋ ನಾನು ಮರೆತು ಬಿಟ್ಟಿದ್ದೆ ದಯವಿಟ್ಟು ಕ್ಷಮಿಸಬೇಕು.

ವೈಸ್ ಚೇರ್ಮನ್.—ಬೆಲೆ ಏರಿಕೆ ಆದರೆ ಅದರ ಪರಿಣಾಮ ನಮ್ಮಂಥವರ ಮೇಲೆ ಸಾಮಾನ್ಯವಾಗಿ ಆಗುವುದು.

ಶ್ರೀ ಎಸ್. ಬಂಗಾರಪ್ಪ.— ನಿಮಗೆ ಅನೇಕ ಜನ ಮಾವಂದಿರುಗಳು. ನಮ್ಮ ಕಡೆ ಹೋಟಲ್‌ಗೆ ಮಾವಂದಿರುಗಳು ಎಂದು ಹೇಳುತ್ತಾರೆ. ಬೇರೆ ಅಪಾರ್ಥ ತಿಳಿದುಕೊಳ್ಳಬೇಡಿ, ಆದುದರಿಂದ ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮತ್ತೆ ರಾಜ್ಯ

ಸರ್ಕಾರದವರು ತಮ್ಮ ಆಹಾರ ನೀತಿ ಏನೆಂಬುದನ್ನು ಪ್ರಕಟ ಮಾಡಬೇಕು. ಮತ್ತೆ ಮಾನ್ಯ ಮಂತ್ರಿಗಳವರು ತಪ್ಪು ಹೇಳಿಕೆಯನ್ನು ಏನು ಜನತೆಗೆ ಕೊಟ್ಟಿದ್ದಾರೆ ಅದಕ್ಕಾಗಿ ಕ್ಷಮೆಯಾಚನೆ ಮಾಡ ಬೇಕೆಂದು ನಾನು ಒತ್ತಾಯ ಮಾಡಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳವರು ಸಹ ಕರ್ನಾಟಕ ಜನತೆಗೆ ತಪ್ಪು ಹೇಳಿಕೆಯನ್ನು ಕೊಟ್ಟಿರುವುದರಿಂದ ಅವರೂ ಸಹ ಕ್ಷಮೆಯಾಚಿಸಬೇಕೆಂದು ನಾನು ಹೇಳಬಯಸುತ್ತೇನೆ. ಇಲ್ಲದಿದ್ದರೆ ಅದರ ಪರಿಣಾಮವನ್ನು ಎದುರಿಸುವುದಕ್ಕೆ ಅವರು ಸಿದ್ಧ ರಾಗಿರಬೇಕು ಎನ್ನತಕ್ಕ ವಿಚಾರವನ್ನು ಸಹ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಶಿವಮೊಗ್ಗದ ರೈಸ್‌ಮಿಲ್ ಮಾಲೀಕರುಗಳು ನಮ್ಮ ಆಹಾರ ಮಂತ್ರಿ ಬಸವಣಪ್ಪನವರಿಗೆ ಡಿನ್ನರ್ ಪಾರ್ಟಿ ಕೊಟ್ಟಿದ್ದಾರೆ. ಹಿಂದೆ ಆ ರೈಸ್‌ಮಿಲ್ ಮಾಲೀಕರುಗಳು ಕೋಟಿಗಟ್ಟಲೆ ಹಣವನ್ನು ದುರ್ವ್ಯವಹಾರ ಮಾಡಿರುವ ಬಗ್ಗೆ ಹಿಂದಿನ ಸರ್ಕಾರದವರ ಗಮನಕ್ಕೂ ತಂದಿದ್ದೆವು, ಅದರ ಬಗ್ಗೆ ತಾವು ಏನು ತೀರ್ಮಾನವನ್ನು ಕೈಗೊಂಡಿದ್ದೀರಿ? ಅದರ ಬಗ್ಗೆ ಏನೂ ತೀರ್ಮಾನವನ್ನು ಕೈಗೊಳ್ಳದೇ ಅವರು ಕೊಟ್ಟ ಡಿನ್ನರ್ ಪಾರ್ಟಿಗೆ ಮಾನ್ಯ ಆಹಾರ ಮಂತ್ರಿಗಳವರು ಹೋಗಿದ್ದಾರೆ, ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದು ಅಲ್ಲಿಯ ಸ್ಥಳೀಯ ಪತ್ರಿಕೆಗಳಲ್ಲೂ ಬಂದಿದೆ, ಮತ್ತೆ ಇದನ್ನು ಅನೇಕ ಜನರೂ ಸಹ ಕಣ್ಣಾರೆ ಕಂಡಿದ್ದಾರೆ. ಇವತ್ತು ರೇಷನ್ ಇರಬಹುದು ಮತ್ತೊಂದು ಇರಬಹುದು ಅದನ್ನು ಕಂಟ್ರೋಲ್ ಮಾಡಲಿಕ್ಕೆ ಇವರಿಗೆ ಸಾಕಷ್ಟು ಅನುಭವವಿಲ್ಲ......

ವೈಸ್ ಚೇರ್ಮನ್.—ಆಯಿತು ತಮ್ಮ ಭಾಷಣವನ್ನು ಮುಗಿಸಿ, ತಾವು ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಬೆಲೆ ಏರಿಕೆಯ ಬಗ್ಗೆ ಮತ್ತು ಆಹಾರ ವಿತರಣೆಯ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಗಮನ ನೀಡಬೇಕೆಂದು ಹೇಳಿ ನಾನು ಈಗಾಗಲೇ ಸಾಕಷ್ಟು ವೇಳೆಯನ್ನು ತೆಗೆದುಕೊಂಡಿರುವುದರಿಂದ ತಾವು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ ಆಹಾರ ಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ರಾಜ್ಯದಲ್ಲಿ ಆಹಾರದ ವಿಷಯದಲ್ಲಿ ಸಾಕಷ್ಟು ಜನರು ಮಾತನಾಡಿದ್ದಾರೆ ಇದರಲ್ಲಿರತಕ್ಕ ಕೆಲವು ತೊಂದರೆಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ನಾನು ತರಬಯಸುತ್ತೇನೆ. ಇವತ್ತು ಮಿಲ್ ಪಾಯಿಂಟ್‌ನಲ್ಲಿ ಮಾತ್ರ ಲೆವಿಯನ್ನು ಕೊಡಬೇಕು ಎಂದು ಕಾನೂನು ಮಾಡಿದ್ದೀರಿ. ಆದರೆ ಇದರಲ್ಲಿ ಆಗತಕ್ಕ ತೊಂದರೆಯನ್ನು ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯ ಬಯಸು ತ್ತೇನೆ. ಅಕ್ಕಿಯನ್ನು ಮಿಲ್ ಪಾಯಿಂಟ್‌ನಲ್ಲಿ ಕೊಟ್ಟ ಮೇಲೆ ಮಿಕ್ಕದ್ದನ್ನು ಕಂಟ್ರೋಲ್ ಮಾಡು ವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇರುವುದರಿಂದ ಎಷ್ಟೋ ಅಕ್ಕಿಯನ್ನು ಮತ್ತು ಭತ್ತವನ್ನು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸುತ್ತಿದ್ದಾರೆ. ಇದರ ಬಗ್ಗೆ ಎಷ್ಟೋ ಸಲ ಲಾರಿಯನ್ನು ಜಫ್ತಿ ಮಾಡಿ ಕೋರ್ಟ್‌ನಲ್ಲಿ ಕೇಸ್ ಹಾಕಿದರೂ ಸಹ ಎಷ್ಟೋ ಸಂದರ್ಭದಲ್ಲಿ ಬಿಡುಗಡೆಯಾಗಿರತಕ್ಕ ಉದಾಹರಣೆಗಳು ಸರ್ಕಾರದವರ ಗಮನಕ್ಕೂ ಬಂದಿರಬಹುದು. ಇವತ್ತು ರೈತನಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಅವನ ಬೆಳೆಗೆ ಸರಿಯಾದ ಬೆಲೆಯನ್ನು ಸರ್ಕಾರದವರು ನಿಗದಿ ಮಾಡಿ ಅವನಿಂದ ಆಹಾರ ಧಾನ್ಯಗಳನ್ನು ತಮ್ಮ ಸ್ವಾಧೀನಕ್ಕೆ ವಶಪಡಿಸಿಕೊಳ್ಳಬೇಕೆಂದು ಸಲಹೆ ಮಾಡಬಯಸುತ್ತೇನೆ. ಏಕೆಂದರೆ ಕಳೆದ ೧೦–೧೫ ವರ್ಷಗಳಿಂದ ರೈತರು ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದರಿಂದ ಸಾಲಶೂಲ ಮಾಡಿಕೊಂಡು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಈಗ ಒಂದು ಬೆಳೆ ಬಂದಿರುವಾಗ ರಾಜ್ಯದಿಂದ ಭತ್ತ ಹೊರಗಡೆ ಹೋಗುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ಕಾನೂನು ರಚಿಸದೆ ಇದ್ದುದು ಮೂಲ ತಪ್ಪು ಎಂದು ಹೇಳುತ್ತೇನೆ. ಪರ್ಮಿಟ್ ಕೊಡುವಾಗ ನಿರ್ಧಿಷ್ಟವಾದ ಕಾನೂನುಗಳನ್ನು ಮಾಡಬೇಕು. ಈಗ ಭತ್ತವನ್ನು ಮಿಲ್ ಮಾಡಿಸುವಾಗ ಶೇಕಡ ೫೦ರಷ್ಟು ಅಕ್ಕಿ ಯನ್ನು ಲೆವಿ ರೂಪದಲ್ಲಿ ಸರ್ಕಾರಕ್ಕೆ ಕೊಡಬೇಕೆಂದು ಇದೆ. ಮಿಲ್‌ನಲ್ಲಿ ಲೆವಿ ಕೊಟ್ಟಮೇಲೆ ಹೊರಗಡೆ ಹೋಗುವುದಕ್ಕೆ ಯಾವ ಕಾನೂನು ಇಲ್ಲ. ಪರ್ಮಿಟ್ ಕೊಡತಕ್ಕ ಪದ್ಧತಿಯನ್ನು ಜಾರಿಗೆ ತರಬೇಕೆಂಬ ವಿಚಾರ ಇದ್ದರೆ ತಹಶೀಲ್ದಾರರ ಮಟ್ಟದಲ್ಲಿ ಪರ್ಮಿಟ್ ದೊರೆಯುವ ವ್ಯವಸ್ಥೆ ಆಗಬೇಕು. ಪರ್ಮಿಟ್‌ಗಳನ್ನು ಚೆಕ್ ಮಾಡಿಕೊಂಡು ಹೋಗುವ ವ್ಯವಸ್ಥೆಯೂ ಆಗಬೇಕು. ಅದನ್ನು ಮಾಡದೆ ಕೇವಲ ಪೋಲೀಸರಿಂದ ನಿಯಂತ್ರಣ ಮಾಡಬೇಕೆಂದು ಮಾಡಿದರೆ ಅದು ಫಲಪ್ರದ ವಾಗುವುದಿಲ್ಲ. ಇದುವರೆಗೆ ಇರುವ ಕಾನೂನಿನಲ್ಲಿ ಜಫ್ತಿ ಮಾಡಿದ್ದರ ಮೇಲೆ ಕಾನೂನು ಪ್ರಕಾರ

ಕ್ರಮ ಕೈಗೊಳ್ಳಲು ಆಗಿಲ್ಲವೆಂದು ಹೇಳಬೇಕಾಗಿದೆ, ಜೋಳ ಮತ್ತು ರಾಗಿ ಬೆಳೆಗಳು ಬಂದಾಗ (ಡಿಸೆಂಬರ್‌ನಿಂದ ಫೆಬ್ರುವರಿಯವರೆಗೆ ಬೆಲೆ ಕಡಿಮೆ ಇದ್ದಾಗ) ಮಾರುಕಟ್ಟೆ ಸೊಸೈಟಿಗಳ ಮೂಲಕ ಖರೀದಿ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಲೆವಿ ತೆಗೆದುಕೊಳ್ಳುವ ಪದ್ಧತಿಗೆ ಡಿಸೆಂಬರ್-ಜನವರಿಯಲ್ಲಿ ನಿಯಂತ್ರಣ ಹಾಕಬೇಕು. ಶೇಕಡ ೫೦ರಷ್ಟು ಲೆವಿ ಕೊಡತಕ್ಕ ಪದ್ಧತಿ ಮಾಡಿರುವುದು ಮೂಲಭೂತವಾದ ತಪ್ಪು ಎಂದು ಹೇಳುತ್ತೇನೆ. ಏಕೆಂದರೆ ನಮ್ಮ ರಾಜ್ಯದ ಒಟ್ಟು ಉತ್ಪತ್ತಿ ೨೩ ಲಕ್ಷ ಟನ್ ಇರುವಾಗ ೫೦ ಪರ್ಸೆಂಟ್ ಎಂದರೆ ೧೧ ಲಕ್ಷ ಟನ್ ಅನ್ನು ಲೆವಿ ರೂಪದಲ್ಲಿ ಕೊಡಬೇಕಾಗುತ್ತದೆ. ಅಂದಾಗ ಉಳಿಯತಕ್ಕದ್ದು ಅವರಿಗೆ ಸಾಲದಾಗುತ್ತದೆ. ಆದ್ದರಿಂದ ೧೦ ರಿಂದ ೨೦ ಪರ್ಸೆಂಟ್ ಮಾತ್ರ ವಸೂಲ್ಮಾಡಬೇಕೆಂದು ಹೇಳುತ್ತೇನೆ. ಹೀಗೆ ಮಾಡುವುದರಿಂದ ಬೆಲೆಗಳನ್ನು ನಿಯಂತ್ರಿಸಲು ಸಾಧ್ಯ. ಬೇರೆ ರಾಜ್ಯಗಳಲ್ಲಿ ಬೆಲೆಗಳು ಜಾಸ್ತಿ ಇರುವುದರಿಂದ ಆಹಾರ ಧಾನ್ಯ ಹೊರಗಡೆ ಹೋಗುತ್ತಿದೆ. ನಮ್ಮ ರಾಜ್ಯದಲ್ಲಿ ಕೂಡ ಮಾರ್ಕೆಟ್ ವ್ಯವಸ್ಥೆ ಮಾಡಿದರೆ ಭ್ರಷ್ಟಾಚಾರವನ್ನು ತಡೆಯಲು ಸಾಧ್ಯ.

ಇನ್ನು ಸೀಮೆಎಣ್ಣೆ ವಿಷಯವಾಗಿ ಹೇಳುವುದಾದರೆ, ಲಾರಿಯವರು ಕೂಡ ಡೀಸೆಲ್ಲಿಗೆ ಬದಲಾಗಿ ಸೀಮೆಎಣ್ಣೆಯನ್ನೇ ಬಳಸುವುದರಿಂದ ಸೀಮೆಎಣ್ಣೆಯ ಬೆಲೆ ಜಾಸ್ತಿ ಆಗಿದೆ. ಆದ್ದರಿಂದ, ಯಾರಾದರೂ ಲಾರಿಗಳಿಗೆ ಸೀಮೆಎಣ್ಣೆಯನ್ನು ಬಳಸಿದರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಇಂದು ಈ ಸಭೆಯ ಮುಂದಿರತಕ್ಕ ಪ್ರಮುಖ ಬೇಡಿಕೆಯಾದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬೇಡಿಕೆಗಳ ಬಗ್ಗೆ ಬೆಂಬಲ ಸೂಚಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬೆಂಬಲ ಸೂಚಿಸುತ್ತಾ ಬೆಲೆಯನ್ನು ಗಗನಕ್ಕೇರಿಸುತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಲೆ ಗಗನಕ್ಕೇರುತ್ತಿರುವುದು ನಿಜ. ಆದರೆ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವುದರಿಂದ ಆ ಮಾತು ಅನಿವಾರ್ಯ. ಬೆಲೆ ಗಗನಕ್ಕೇರುತ್ತಿದೆ. ಶ್ರೀಸಾಮಾನ್ಯ ಜೀವನ ಮಾಡುವುದು ಕಷ್ಟವಾಗಿದೆ. ಈ ವಿಚಿತ್ರ ಪರಿಸ್ಥಿತಿಗೆ ನಾವು ಬಂದಿದ್ದೇವೆ, ಸ್ವಾತಂತ್ರ್ಯ ಬಂದ ನಂತರ ಈ ರೀತಿ ಬೆಲೆ ಗಗನಕ್ಕೇರುತ್ತಿರುವುದು ಇದೇ ಮೊದಲ ಬಾರಿಗೆ, ಒಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ವಜ್ರ ವೈಢೂರ್ಯಗಳನ್ನು ಸಂತೆಯಲ್ಲಿಟ್ಟುಕೊಂಡು ಮಾರುತ್ತಿದ್ದರಂತೆ. ಆದರೆ ಇವತ್ತು ಅಂಗಡಿಗಳಲ್ಲಿ ಅಕ್ಕಿ, ರಾಗಿ ಸಿಗದೆ ಕುಡಿಯುವುದಕ್ಕೆ ನೀರಿಲ್ಲದೆ ಜನ ತತ್ತರಿಸುವಂಥ ವಿಚಿತ್ರ ಪರಿಸ್ಥಿತಿಗೆ ಬಂದಿದ್ದೇವೆ. ಇದರ ಬಗ್ಗೆ ಬಹಳ ಗಂಭೀರವಾಗಿ ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ. ಭ್ರಷ್ಟ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು ಜನತೆಗೆ ಭರವಸೆ ಕೊಟ್ಟು ಅದನ್ನು ಈಡೇರಿಸುವುದರಲ್ಲಿ ವಿಫಲರಾದ ಕಾರಣ ಎಲ್ಲಾ ರಂಗಗಳಲ್ಲೂ ಈ ಒಂದು ವಿಚಿತ್ರವನ್ನು ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ನನಗನ್ನಿಸಿದ ಮಟ್ಟಿಗೆ, ಇವತ್ತಿನ ದಿವಸ ಈ ಕಡೆ ಕುಳಿತಿರತಕ್ಕ ಜನ ವಿರೋಧ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ಈ ಕಡೆ ಖುರ್ಚಿ ಸಿಕ್ಕಿದರೆ ಮಾರ್ಪಾಡು ಮಾಡಬಹುದೆಂದು ಇದ್ದರು. ಈ ಕಡೆ ಖುರ್ಚಿ ಸಿಕ್ಕಿದ ನಂತರ ಹೇಗಾದರೂ ಖುರ್ಚಿಯಲ್ಲಿ ಅಂಟಿಕೊಂಡಿರಬೇಕೆಂದು ಪ್ರಯತ್ನಿಸುವ ಕಾರಣಕ್ಕೋಸ್ಕರ ಬೆಲೆ ಗಗನಕ್ಕೇರುತ್ತಿದೆ. ಜನರಿಂದ ಓಟು ಕೇಳುವ ಸಂದರ್ಭದಲ್ಲಿ ಏನು ಭರವಸೆ ಕೊಟ್ಟಿದ್ದೇವೆ ಅದನ್ನು ಈಡೇರಿಸುವ ಕಡೆ ಸಂಪೂರ್ಣ ಗಮನ ಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬ ಅನುಮಾನ ಬರುತ್ತಿದೆ. ಲೆವಿ ನೀತಿ ಯಾರನ್ನು ಉದ್ಧರಿಸುವುದಕ್ಕೆ? ಭತ್ತವನ್ನು ಲೆವಿ ಮೂಲಕ ಖರೀದಿಸುತ್ತಾರೆ. ಇವರು ಖರೀದಿಸುವ ಬೆಲೆ ಕ್ವಿಂಟಾಲಿಗೆ ೧೩೦ ರೂಪಾಯಿಗಳು. ಆದರೆ ಇವತ್ತು ಮಾರುಕಟ್ಟೆಯಲ್ಲಿ ೨೦೦ ರೂಪಾಯಿಗಳು ಇದೆ. ಲೆವಿಯನ್ನು ಸಂಗ್ರಹಿಸುವುದರಿಂದ ಬಡವರು ಉದ್ಧಾರವಾಗುತ್ತಿದ್ದಾರೆಯೆ? ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ನಂಜನಗೂಡಿನ ಟಿಎಪಿಸಿಎಂಎಸ್.ನಲ್ಲಿ ಹೋದ ವರ್ಷ ೧೦ ಸಾವಿರ ಕ್ವಿಂಟಾಲ್ ಭತ್ತವನ್ನು ಲೆವಿ ರೂಪದಲ್ಲಿ ಖರೀದಿ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿ ಇಟ್ಟಿದ್ದರು. ನನಗೆ ಬಂದಿರುವ ಮಾಹಿತಿ ಪ್ರಕಾರ ಅಲ್ಲಿರತಕ್ಕ ಅಧಿಕಾರಿಗಳು ಮತ್ತು ನೌಕರ ವರ್ಗದವರು ಅದನ್ನು ಪೂರ್ತಿಯಾಗಿ ನುಂಗಿದ್ದಾರೆ. ಅಲ್ಲಿ ಒಂದು ಕ್ವಿಂಟಾಲ್ ಭತ್ತ ಕೂಡ ಇಲ್ಲವೆಂದು ತಿಳಿದು ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಗೊತ್ತಿಲ್ಲ. ಇದರ ಬಗ್ಗೆ ಪೂರ್ಣ ಮಾಹಿತಿ ಒದಗಿಸಿಕೊಡಬೇಕೆಂದು ನಾನು ಕೇಳುತ್ತೇನೆ. ೧೭ನೇ ಆಗಸ್ಟ್ ೧೯೮೩ರಂದು ಹಾಡು ಹಗಲಲ್ಲೇ ಶಿಕಾರಿಪುರದ ಟಿಎಪಿಸಿಎಂಎಸ್. ನಿಂದ ೨೦ ಕ್ವಿಂಟಾಲ್ ಭತ್ತವನ್ನು ಕದ್ದು ಮಾರುತ್ತಿದ್ದ ಸಂದರ್ಭದಲ್ಲಿ ನಾಗರೀಕರು ದೂರು ಕೊಟ್ಟು ಹಿಡಿಸಿದರು. ಇವತ್ತಿನ ದಿವಸ ೧೦ ಕ್ವಿಂಟಾಲ್ ಭತ್ತವನ್ನು ನುಂಗಿದವರು ಜೈಲಿಗೆಹೋಗಿದ್ದಾರೆಯೆ? ಇಲ್ಲ ಭ್ರಷ್ಟ ಅಧಿಕಾರಿಗಳಿಗೆ ಮತ್ತು ಭ್ರಷ್ಟ ರಾಜಕಾರಣಿಗಳಿಗೆ ಗೊತ್ತಿಲ್ಲದೆ ಬೆಂಬಲ ಕೊಡುತ್ತಾ ಬಂದಿರುವ ಪರಿಣಾಮವಾಗಿ ಈ ವಿಚಿತ್ರ ಪರಿಸ್ಥಿತಿಗೆ ಬಂದಿದ್ದೇವೆ. ಇದರ ಬದಲಾವಣೆ ಮಾಡಬೇಕಾಗಿದೆ. ಲೆವಿ ಪದ್ಧತಿ ಬಗ್ಗೆ ಮಾತನಾಡುವುದಾದರೆ, ಸರ್ಕಾರ ಕೊಡತಕ್ಕ ಬೆಲೆ ಕ್ವಿಂಟಾಲ್ ಒಂದಕ್ಕೆ ೧೩೦ ರೂಪಾಯಿಗಳು, ಮಾರುಕಟ್ಟೆಯ ಬೆಲೆ ೨೦೦ ರೂಪಾಯಿಗಳು ಇರುತ್ತದೆ. ಅಂದಾಗ ವ್ಯಾಪಾರ ಮಾಡುವವನು ಮೋಸ ಮಾಡದೆ ಬೆಲೆ ಏರಿಸದೆ ವ್ಯಾಪಾರ ಮಾಡುತ್ತಾನೆಯೆ? ಪಟ್ಟಣದಲ್ಲಿ ವಾಸ ಮಾಡುವ ಜನರಿಗೆ ಲೆವಿ ಬೇಕು. ಹಾಗಾದರೆ ಇದರ ಬಗ್ಗೆ ಒಂದು ನಿಲುವು ತೆಗೆದುಕೊಳ್ಳಿ, ಸುಗ್ಗಿ ಸಮಯದಲ್ಲಿ ಎಷ್ಟು ಬೇಕೋ ಅಷ್ಟನ್ನು ಖರೀದಿ ಮಾಡಿ. ನಿಮಗೆ ಎಷ್ಟು ಬೇಕೋ ಅಷ್ಟನ್ನು ಖರೀದಿಸಿದ ನಂತರ ವ್ಯಾಪಾರಸ್ಥರಿಗೆ ಖರೀದಿಸಿ ಎಂದು ಹೇಳಿ. ಒಂದು ವೇಳೆ ನೀವು ಖರೀದಿಸುವ ಭತ್ತಕ್ಕೆ ಹಣದ ಕೊರತೆ ಬಂದರೆ ಸಬ್ಸಿಡಿ ರೂಪದಲ್ಲಿ ತುಂಬಿ. ಇದನ್ನು ರೈತರ ಮೇಲೆ ಏತಕ್ಕೆ ಹೊರಿಸುತ್ತೀರಿ? ಇದರಿಂದ ರೈತ ಸಾಯುತ್ತಾನೆ. ನೀವು ಲೆವಿ ಮೂಲಕ ಖರೀದಿ ಮಾಡಿದ ಭತ್ತ ಬಡವರಿಗೆ ತಲುಪುತ್ತಿದೆಯೆ? ಇಲ್ಲ. ಕಾರಣ, ನಗರದಲ್ಲಿ ಹೆಚ್ಚು ಅಕ್ಕಿಯನ್ನು ವಿತರಣೆ ಮಾಡುತ್ತಿದ್ದೀರಿ. ಅದೇ ರೀತಿ ಸಕ್ಕರೆ, ಸೀಮೆಎಣ್ಣೆ, ಗೋಧಿ, ರವೆ ಇತ್ಯಾದಿಗಳನ್ನು ವಿತರಣೆ ಮಾಡುತ್ತಿದ್ದೀರಿ. ಆದರೆ ಅವೆಲ್ಲ ಬಡವರಿಗೆ ತಲುಪುತ್ತಿವೆಯೆ? ಇಲ್ಲ. ಶಿವಮೊಗ್ಗದ ಒಂದು ತಾಲ್ಲೂಕಿಗೆ ಸಾವಿರ–ಎರಡು ಸಾವಿರ ಕ್ವಿಂಟಾಲ್ ಅಕ್ಕಿಯನ್ನು ವಿತರಣೆ ಮಾಡುತ್ತಾರೆ. ನನಗೆ ಗೊತ್ತಿರುವ ಹಾಗೆ ೧೮೦ ರೂಪಾಯಿಗಳ ದರದಲ್ಲಿ ಸೊಸೈಟಿಯವರು ಅಕ್ಕಿಯನ್ನು ಖರೀದಿಸಬೇಕಾಗಿದೆ. ಹೀಗೆ ಖರೀದಿಸುವಾಗ ಹಣವಿಲ್ಲದೆ ಅವರು ಬೇರೆ ಬೇರೆ ಅಡ್ಜಸ್ಟ್‌ಮೆಂಟ್ಸ್ ಮಾಡಬೇಕಾಗಿದೆ. ಹೀಗಾಗಿ ಸೊಸೈಟಿ ಪಾಪರ್ ಆಗಿದೆ. ಖಾಸಗಿಯವರು ಹಣ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅಡ್ಜಸ್ಟ್‌ಮೆಂಟ್ಸ್‌ಗೆ ಹಣವಿಲ್ಲದೆ ಇವತ್ತಿಗೂ ಸೊಸೈಟಿಯವರು ಅಕ್ಕಿಯನ್ನು ತೆಗೆದುಕೊಂಡು ಹೋಗುತ್ತಿಲ್ಲ. ಅಲ್ಲಿರತಕ್ಕ ಜನರಿಗೆ ಅಕ್ಕಿ ವಿತರಣೆ ಆಗುತ್ತಿಲ್ಲ. ನಗರದಲ್ಲಿರುವ ಬಡವರಿಗೆ ಅಕ್ಕಿ ತಲುಪುತ್ತಿಲ್ಲ. ಈ ರೀತಿಯ ವಿಚಿತ್ರ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ.

೪–೩೦ ಪಿ.ಎಂ.

ಹಳ್ಳಿಯಲ್ಲಿ ವಾಸ ಮಾಡುವ ರೈತನಿಗೆ ಸಿಮೆಂಟ್ ಸಿಗುತ್ತಿಲ್ಲ. ಆದರೆ ಪಟ್ಟಣದಲ್ಲಿ ಪ್ರತಿನಿತ್ಯ ಗಗನ ಚುಂಬಿ ಕಟ್ಟಡಗಳು ಏಳುತ್ತಲೇ ಇವೆ. ಬೀಳುತ್ತಲೇ ಇವೆ. ಶಿವಮೊಗ್ಗ ಜಿಲ್ಲೆಯ ವ್ಯಾಪಾರಸ್ಥರಿಂದ ಒಂದು ಪತ್ರ ಬಂದಿದೆ. ೨೭–೮–೮೩ರಲ್ಲಿ ಅವರು ೨೦೦ ಚೀಲ ಸಿಮೆಂಟ್ ತೆಗೆದುಕೊಂಡು ಹೋಗಿದ್ದಾರೆ. ಭದ್ರಾವತಿಯಿಂದ ತೆಗೆದುಕೊಂಡುಹೋದ ಸಿಮೆಂಟನ್ನು ಹೊರಗಡೆ ತೂಕ ಮಾಡಿದ್ದಾರೆ. ೩೫.೫ ಕೆ.ಜಿ.ಯಿಂದ ೪೮ ಕೆ.ಜಿ.ವರೆಗೆ ತೂಕ ಮಾಡಿದಾಗ ೮ ೧೦ ಕೆ.ಜಿ. ಸಿಮೆಂಟ್ ಕಡಿಮೆ ಬಂದಿದೆ. ೮–೧೦ ಕೆ.ಜಿ. ಸಿಮೆಂಟ್ ಕಡಿಮೆ ಬಂತಲ್ಲ, ಅದರಿಂದ ಭದ್ರಾವತಿ ಫ್ಯಾಕ್ಟರಿಗೆ ಏನಾದರೂ ಕೋಟ್ಯಾಂತರ ರೂಪಾಯಿಗಳ ಲಾಭ ಬಂದಿದೆಯೋ ? ಇಲ್ಲ. ಈ ರೀತಿ ತೂಕ ಕಡಿಮೆ ಬರುತ್ತಿದ್ದರೂ ಏತಕ್ಕೆ ಎಲ್ಲರೂ ಸುಮ್ಮನಿದ್ದಾರೆ ? ಅಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ. ಈ ರೀತಿಯ ವಿಚಿತ್ರ ಪರಿಸ್ಥಿತಿಯಲ್ಲಿರುವುದರಿಂದ ನಾವು ಯಾವುದೇ ಒಂದು ಬದಲಾವಣೆಯನ್ನೂ ತರುವುದಕ್ಕೆ ಆಗುತ್ತಿಲ್ಲ. ಇವತ್ತು ಈ ಬದಲಾವಣೆ ತರುವುದರ ಬಗ್ಗೆ ಗಮನ ಹರಿಸಬೇಕಾಗಿದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಭದ್ರಾವತಿ ಮತ್ತು ಅಮ್ಮಸಂದ್ರ ಕಾರ್ಖಾನೆಯಲ್ಲಿ ಸಿಮೆಂಟ್ ಡೆಲಿವರಿ ಆಗುತ್ತದೆ. ಹೊರಗಡೆ ಬಂದಮೇಲೆ ಕಡಿಮೆ ಇದೆ ಎಂದು ಹೇಳಿದರೆ ಅದು ನಮ್ಮ ಜವಾಬ್ದಾರಿಯಲ್ಲ ಎಂದು ಅವರು ಹೇಳುತ್ತಾರೆ.

ಚೇರ್ಮನ್.—ಸಿಮೆಂಟ್ ವಿಚಾರ ಇದರಲ್ಲಿ ಬರುವುದಿಲ್ಲ. ಅದು ಕೈಗಾರಿಕಾ ಮಂತ್ರಿಗಳಿಗೆ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಯಾವ ರೀತಿ ಅವ್ಯವಸ್ಥೆ ಇದೆ ಎನ್ನುವುದಕ್ಕೆ ಉದಾಹರಣೆ ಕೊಡುತ್ತಿದ್ದೇನೆ. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಎಂದಿದೆ. ಈ ಸಾರಿ ಸ್ಟ್ಯಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಎಂಬುವವರಿಗೆ ೧೦ ಲಕ್ಷ ರೂಪಾಯಿಗಳ ಸಹಾಯ ಧನವನ್ನು ನಿಗಮದಿಂದ ಕೊಟ್ಟಿದ್ದಾರೆ. ಅಷ್ಟು ಹಣವನ್ನು ಕೊಡುವಾಗ ಯಾವ ಕಾನೂನನ್ನು ಅನುಸರಿಸಿದ್ದೀರಿ ? ಯಾರನ್ನು ಕೇಳಿದಿರಿ ? ನಾನು ಹೇಳಿದರೆ ತಾವು ಆಶ್ಚರ್ಯಪಡಬಹುದು; ೨೮-೬-೮೩ರಲ್ಲಿ ಬೋರ್ಡ್ ಮೀಟಿಂಗ್‌ನಲ್ಲಿ ತೀರ್ಮಾನ ಆಯಿತು, ೨೯-೬-೮೩ರಲ್ಲಿ ೧೦ ಲಕ್ಷ ರೂಪಾಯಿಗಳು ಡಿಸ್ಟ್ರಿಬ್ಯೂಟ್ ಆಯಿತು.

ಚೇರ್ಮನ್.—ಏತಕ್ಕೋಸ್ಕರ ೧೦ ಲಕ್ಷ ರೂಪಾಯಿಗಳ ಸಹಾಯಧನ ಕೊಟ್ಟಿದ್ದಾರೆ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ಟ್ಯಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಎಂಬ ಸಂಸ್ಥೆಯವರಿಗೆ ಕೊಟ್ಟಿದ್ದಾರೆ.

ಚೇರ್ಮನ್.—ಇದು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೇಡಿಕೆಯಲ್ಲಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಬರುತ್ತದೆ. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟಿದೆ. ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಅವರು ಕೊಟ್ಟ ರೀತಿ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ. ಅಲ್ಲಿರುವ ನೌಕರರು ಅದಕ್ಕೆ ವಿರೋಧ ಮಾಡಿದ್ದಾರೆ. ದುಡಿಮೆ ಮಾಡುವ ನೌಕರರನ್ನು ಅವರು ಕೇಳಿದ್ದಾರೆಯೇ ? ೨೮ನೇ ತಾರೀಖು ತೀರ್ಮಾನವಾಗಿ ೨೯ರಲ್ಲಿ ಚೆಕ್ ಕೊಟ್ಟರಲ್ಲ ಇದರಲ್ಲಿ ಯಾರ ಪ್ರಭಾವವಿದೆ ? ಇದರ ಹಿನ್ನೆಲೆ ಏನು ? ಇದನ್ನು ನಾವು ತಿಳಿದು ಕೊಳ್ಳಬೇಕು. ಯಾವ ರೀತಿ ಸರ್ಕಾರ ಕಣ್ಣು ಮುಚ್ಚಿ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ನಾನು ಹೇಳುತ್ತಿದ್ದೇನೆ. ಸಿಮೆಂಟ್ ಕಾರ್ಖಾನೆಯಲ್ಲಿ ಸಿಮೆಂಟ್ ತೂಕ ಸರಿಯಾಗಿಲ್ಲ. ದುಡಿಮೆ ಮಾಡುವ ನೌಕರರಿಗೆ ಲಾಭ ಸಿಗುತ್ತಿಲ್ಲ. ಈ ರೀತಿ ವಿಚಿತ್ರ ಪದ್ಧತಿಯನ್ನು ನಾವು ಅನುಸರಿಸುತ್ತಿದ್ದೇವೆ. ನನಗೆ ಬಂದಿರುವ ಲೆಕ್ಕದ ಪ್ರಕಾರ ೨೨ ಸಾವಿರ ಟನ್ ಗೋಧಿ ಜುಲೈಯಲ್ಲಿ ಕೇಂದ್ರದಿಂದ ಬಂದಿದೆ. ಇವತ್ತು ಸೆಪ್ಟೆಂಬರ್‌ನಲ್ಲಿದ್ದೇವೆ. ಮೂರು ತಿಂಗಳಾದರೂ ಅಲ್ಲಿಂದ ಬಂದಿರತಕ್ಕ ಗೋಧಿಯನ್ನು ಲಿಫ್ಟ್ ಮಾಡಲಿಲ್ಲ. ಇದರಿಂದ ಸರ್ಕಾರಕ್ಕೆ ಬರತಕ್ಕ ೫ ಲಕ್ಷ ರೂಪಾಯಿಗಳ ತೆರಿಗೆ ಬಂದಿಲ್ಲ. ಅವರು ಕೊಟ್ಟ ಗೋಧಿಯನ್ನು ಉಪಯೋಗ ಮಾಡಿಕೊಳ್ಳಲಿಲ್ಲ ಎಂದ ಮೇಲೆ ಕೇಂದ್ರ ಸರ್ಕಾರವನ್ನು ಮತ್ತೆ ಕೇಳುವುದಕ್ಕೆ ನೈತಿಕ ಹಕ್ಕೇನಿದೆ ? ರೋಲರ್ ಮಿಲ್‌ನವರಿಗೆ ಕೊಟ್ಟಿದ್ದರೆ ಬೇಡ ಎಂದು ಹೇಳುತ್ತಿದ್ದರಾ ? ಅವರು ತೆಗೆದುಕೊಳ್ಳುತ್ತಿದ್ದರು. ಏತಕ್ಕೋಸ್ಕರ ಗೋಧಿಯನ್ನು ಲಿಫ್ಟ್ ಮಾಡಲಿಲ್ಲ ? ಅಲಾಟ್‌ಮೆಂಟ್ ಸಮಯದಲ್ಲಿ ಮಾಮೂಲಿ ಬರಲಿ ಎಂದು ಅಧಿಕಾರಿಗಳು ಕಾಯುತ್ತಿದ್ದರಾ ? ಗೋಧಿಯನ್ನು ಜನ ಉಪಯೋಗಿಸಿಕೊಳ್ಳುವುದಕ್ಕೆ ಸಿದ್ಧರಿರಲಿಲ್ಲವೆ ? ಈ ಪರಿಸ್ಥಿತಿ ಏತಕ್ಕಿದೆಯೆಂದರೆ ಎಲ್ಲಾ ಕಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಶ್ರೀ ದೊಡ್ಡಬೋರೇಗೌಡ.—ಇಲ್ಲ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗಾದರೆ ನೀವೇ ಹೇಳಿ ಕಾರಣ ?

ಶ್ರೀ ದೊಡ್ಡಬೋರೇಗೌಡ.—ಅದು ಲಂಚ ಅಲ್ಲ, ಸಂಭಾವನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸಂಭಾವನೆ ಎಂದು ಕರೆಯಬೇಕಂತೆ, ಆಯಿತು ತಿದ್ದುಪಡಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ನಾನು ಮಾನ್ಯ ಬಸವಣ್ಣಪ್ಪನವರ ಮೇಲಾಗಲೀ ಅಥವಾ ಇನ್ನೊಬ್ಬರ ಮೇಲಾಗಲೀ ಆಪಾದನೆ ಮಾಡುತ್ತಿಲ್ಲ.

ಶ್ರೀ ಹೆಚ್.ಡಿ. ಚೌಡಯ್ಯ.—ಸಂಭಾವನೆ ಜನತಾ ಸರ್ಕಾರದ ಕೊಡುಗೆ.

ಶ್ರೀ ದೊಡ್ಡಬೋರೇಗೌಡ.—ತಾವು ಭಾರಿ ಪ್ರಮಾಣದಲ್ಲಿ ಬೆಳವಣಿಗೆ ಮಾಡಿದ್ದೀರಿ. ಭಾರಿ ಕಷ್ಟದಿಂದ ಅದನ್ನು ನಿವಾರಣೆ ಮಾಡಬೇಕು. ಅದಕ್ಕೆ ನಿಮ್ಮೆಲ್ಲರ ಬೆಂಬಲ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಒಬ್ಬ ಕಳ್ಳನನ್ನು ಹಿಡಿಯುವುದಕ್ಕೆ ಇನ್ನೊಬ್ಬ ಕಳ್ಳನನ್ನು ನೇಮಿಸುತ್ತಿದ್ದಾರೆ. ಭ್ರಷ್ಟಾಚಾರ ಬ್ಲಡ್ ಕ್ಯಾನ್ಸರ್ ತರಹ ಆಗಿದ್ದು ಅದು ನಮ್ಮ ರಕ್ತದಲ್ಲಿ ಹರಿಯುತ್ತಿದೆಯೇನೋ ಎಂದೆನಿಸುತ್ತಿದೆ. ಈ ಪರಿಸ್ಥಿತಿಯನ್ನು ಸರಿಪಡಿಸದೇ ಇದ್ದರೆ ನಾವೇನೂ ಒಳ್ಳೆಯ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಬೊಕ್ಕಸದಿಂದ ೧೬೦೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ೩ ಲಕ್ಷ ನೌಕರರಿಗೆ ೫೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಮ್ಮ ಜನಸಂಖ್ಯೆ ೩,೭೧,೩೫,೦೦೦. ಆದರೆ ಕೇವಲ ಮೂರು ಲಕ್ಷ ಜನರಿಗೆ ಖರ್ಚು ಮಾಡುತ್ತಿರುವುದು ೫೯೦ ಕೋಟಿ. ಇಷ್ಟು ಖರ್ಚು ಮಾಡುತ್ತಿದ್ದರೂ ಸಹ ನೌಕರರು ಪ್ರಾಮಾಣಿಕವಾಗಿ ಕೆಲಸ ಮಾಡದಿದ್ದರೆ ರಾಜ್ಯದ ಪ್ರಗತಿ ಹೇಗೆ ಆಗುತ್ತದೆ ? ಅದಕ್ಕಾಗಿ ನಾನು ಕೆಲವು ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಮಾನ್ಯ ಬಸವಣ್ಣಪ್ಪನವರು ಶಿಕಾರಿಪುರಕ್ಕೆ ಬಂದಿದ್ದಾಗ ಕೆಲವು ಮಿಲ್‌ಗಳಲ್ಲಿ ರೈಡ್ ಮಾಡಿ ಕೆಲವು ಕಡೆ ಮಾಡಲಿಲ್ಲ ಎಂದು ಹೇಳಿದರು. ಇವತ್ತು ಬಸವಣ್ಣಪ್ಪನವರು ೫ ವರ್ಷಗಳ ಕಾಲ ಸಂಪೂರ್ಣವಾಗಿ ಮಂತ್ರಿಯಾಗಿರಬೇಕು ಎಂದು ಆಸೆ ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬ. ಇವತ್ತಿಗೂ ಅದರ ಬಗ್ಗೆ ನನಗೆ ಗೌರವ ಇದೆ. ಆದರೆ ಬಸವಣ್ಣಪ್ಪನವರು ಮತ್ತು ನನ್ನ ವಿಚಾರವಾಗಿ ಪತ್ರಿಕೆಯಲ್ಲಿ ಕೆಲವು ವಿಷಯಗಳು ಬಂದಿದ್ದರಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ಅವತ್ತು ನಡೆದದ್ದಾದರೂ ಏನು ? ನಾನು ಯಾವ ವ್ಯಾಪಾರಸ್ಥರ ಪರವಾಗಿಯೂ ಅವರ ಹತ್ತಿರ ಹೋಗಿರಲಿಲ್ಲ. ಕೆಲವು ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಲೆವಿ ಕೊಟ್ಟಿರುವ ಮಿಲ್‌ಗಳಲ್ಲೂ ಸಹ ರೈಡ್ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ರೈತನಿಗೆ ಭತ್ತ ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲ. ಮಿಲ ನಲ್ಲಿ ಡಿಕ್ಲರೇಷನ್ ಕೊಟ್ಟು ಇಟ್ಟುಕೊಂಡಿರುತ್ತಾರೆ. ಅಧಿಕಾರಿಗಳು ಬಂದಾಗ ಫುಡ್ ಅಸಿಸ್ಟೆಂಟ್‌ಗೆ ಎಲ್ಲಾ ಲೆಕ್ಕ ಸರಿಯಾಗಿದ್ದರೂ ಏತಕ್ಕೆ ಸೀಜ್ ಮಾಡುತ್ತೀರಿ ಎಂದು ಮಿಲ್‌ನಲ್ಲಿ ಕೇಳಿದರೂ ಲೆಕ್ಕ ತೋರಿಸಬೇಕು ಅದಕ್ಕೇ ಸೀಜ್ ಮಾಡುತ್ತೇವೆ ಎಂದು ಹೇಳಿದರು. ಈ ತರಹ ಘಟನೆಗಳು ನಡೆಯಬಾರದು ಎಂದು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವ ಪ್ರಯತ್ನ ಮಾಡಿದಾಗ ಈ ಪರಿಸ್ಥಿತಿ ಉಂಟಾಯಿತು. ಪಡಿತರ ಕಾರ್ಡ್‌ನಲ್ಲಿ ಕೊಡುವ ಅಕ್ಕಿ ಬೂಸ್ಟ್ ಬಂದಿರುವುದನ್ನು ನಾನು ಮಂತ್ರಿಗಳಿಗೆ ತೋರಿಸಿದೆ. ಪಕ್ಕದಲ್ಲಿ ಫುಡ್ ಅಸಿಸ್ಟೆಂಟ್ ಕೂಡ ಇದ್ದರು. ಆದರೆ ಯಾವುದೋ ಸಿಟ್ಟಿನ ಭರದಲ್ಲಿ ಮಾನ್ಯ ಬಸವಣ್ಣಪ್ಪನವರು ಮಾತನಾಡಿದರು. ಇವತ್ತಿನ ದಿವಸ ಕರ್ನಾಟಕ ರಾಜ್ಯದ ಜನತೆಗೆ ಸದನದ ಮೂಲಕ ಹೇಳುತ್ತೇನೆ. ಶಿಕಾರಿಪುರ ತಾಲ್ಲೂಕಿನಲ್ಲಿ ಶೇಕಡ ೨೦ರಷ್ಟು ಹರಿಜನ ಗಿರಿಜನರು ಮಾನ್ಯ ಬಸವಣ್ಣಪ್ಪನವರ ಸಮಾಜಕ್ಕೆ ಸೇರಿದವರಿದ್ದಾರೆ. ಅವರ ಆಶೀರ್ವಾದದಿಂದ ನಾನು ಗೆದ್ದಿರುವ ವ್ಯಕ್ತಿ. ಇವತ್ತಿನ ದಿವಸ ಅವರನ್ನು ದೂರಿದರೆ, ಅವರ ಬಗ್ಗೆ ಅಪಶಬ್ದವನ್ನು ಉಪಯೋಗ ಮಾಡಿದರೆ ನನ್ನಂಥ ನೀಚ ಮತ್ತೊಬ್ಬನಿಲ್ಲ. ಆದರೆ ಅಂಥ ಸಂದರ್ಭ ಬರಲಿಲ್ಲ. ಯಾವುದೋ ಉದ್ರೇಕದಲ್ಲಿ ವಾತಾವರಣ ಉಂಟಾಯಿತು. ಆ ವಾತಾವರಣವನ್ನು ಉಪಯೋಗ ಮಾಡಿಕೊಂಡ ಕೆಲವು ಸ್ವಾರ್ಥಿಗಳು ಅವರನ್ನು ಅಡ್ಡದಾರಿಗೆ ಎಳೆದರು. ಬೇರೆ ಇನ್ಯಾವುದೇ ಘಟನೆ ನಡೆಯಲಿಲ್ಲ. ಘಟನೆ ನಡೆದ ನಂತರ ಜಿಲ್ಲಾಧಿಕಾರಿಗಳನ್ನು ಅವರು ಭೇಟಿ ಮಾಡಿದರು. ಮೂರು ದಿವಸದಲ್ಲಿ ಲೆಕ್ಕ ನೋಡಿ ೧೦೦ಕ್ಕೆ ೯೦ ಭಾಗವನ್ನು ರೈತರಿಗೆ ಬಿಟ್ಟುಕೊಟ್ಟರು. ಆದರೆ ಇಂಥ ಅಹಿತಕರ ಘಟನೆಯನ್ನು ನಿರ್ಮಾಣ ಮಾಡಲು ಯಾರೋ ಸ್ವಾರ್ಥಿಗಳು ವಾತಾವರಣವನ್ನು ಉಪಯೋಗ ಮಾಡಿಕೊಂಡರು. ಈ ಸದನದ ಮೂಲಕ ಮಾನ್ಯ ಬಸವಣ್ಣಪ್ಪನವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮ್ಮನ್ನು ಉಪಯೋಗ ಮಾಡಿಕೊಂಡ ಪಟ್ಟಭದ್ರ ಹಿತಾಸಕ್ತಿಗಳು ಯಾರು ಯಾರಿದ್ದಾರೆ ಅವರು ಮತ್ತೆ ತಮ್ಮನ್ನು ಅಡ್ಡದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಬಹುದು. ಅವರು ವಿಧಾನಸೌಧದಲ್ಲಿ ಕಾಯುತ್ತಾ ಕುಳಿತಿದ್ದಾರೆ. ಅಥವಾ ಬೇರೆ ಕಡೆ ನಿಮ್ಮನ್ನು ಅಡ್ಡದಾರಿಗೆ ಎಳೆಯುವುದಕ್ಕೆ ಕಾಯುತ್ತಾ ಕುಳಿತಿದ್ದಾರೆ. ದೊಡ್ಡ ದೊಡ್ಡ ತೋಳಗಳು ಪ್ರಾಣಿಗಳ ರೂಪದಲ್ಲಿ ಮಕ್ಕಳನ್ನು ತಿನ್ನುತ್ತಿದ್ದರೆ ಇವರು ಮನುಷ್ಯರ ರೂಪದಲ್ಲಿ ಪಾಪಿಗಳಂತೆ ಜನರನ್ನು ಶೋಷಣೆ ಮಾಡಿಕೊಂಡು ತಮ್ಮನ್ನು ಮತ್ತು ಅಧಿಕಾರಿಗಳನ್ನು ಅಡ್ಡದಾರಿಗೆ ಎಳೆಯುತ್ತಿದ್ದಾರೆ. ಒಂದು ಕಡೆ ಒಬ್ಬ ತತ್ವಜ್ಞಾನಿ ಒಂದು ಮಾತು ಹೇಳುತ್ತಾನೆ. ಬಹುಶಃ ರಾಜಕಾರಣಿಗಳಿಗೂ ಅನ್ವಯವಾಗುವ ಸಂಗತಿ. ''ಎಲ್ಲರೂ ನಗುವಾಗ ನೀ ಅಳುತ ಬಂದೆ, ಎಲ್ಲರೂ ಅಳುವಾಗ ನೀ ನಗುತ ಹೋಗು'' ಎಂದು ಹೇಳಿದ್ದಾನೆ. ಮಗು ತಾಯಿಯ ಗರ್ಭದಿಂದ ಬರುವಾಗ ಕಿಟ್ ಎಂದು ಕಿರುಚಿಕೊಂಡು ಹೊರಬರುತ್ತದೆ. ಆದರೂ ಗಂಡುಮಗು ಹುಟ್ಟಿತು ಎಂದು ಸಿಹಿ ಹಂಚುತ್ತೇವೆ. ಆನಂದಪಡುತ್ತೇವೆ. ಆದರೆ ಈ ಲೋಕ ಬಿಟ್ಟು ವಾಪಸ್ ಹೋಗುವಾಗ ಇಂಥ ಮನುಷ್ಯ ಹೋಗಿಬಿಟ್ಟನಲ್ಲ ಎಂದು ಕಣ್ಣೀರು ಹಾಕಬೇಕು, ಆ ರೀತಿ ಸಾರ್ಥಕ ಜೀವನವನ್ನು ನಡೆಸಬೇಕು. ಒಂದು ಹೊತ್ತು ಗಂಜಿಗಾಗಿ ಪರಿತಪಿಸುತ್ತಿರುವಂಥ ಜನರಿಗೆ ಈ ರೀತಿ ಮಾಡಲು

ಆಗದೇ ಇರಬಹುದು. ಸಾಮಾನ್ಯ ಜನರಿಗೆ ಆಗದೇ ಇರಬಹುದು. ಆದರೆ ಯಾರು ದೇಶದಲ್ಲಿ ಬದಲಾವಣೆ ತರುತ್ತೇವೆ ಎಂದು ಮುಂದೆ ಬರುತ್ತಾರೆ, ಅವರು ಸ್ವಾತಂತ್ರ್ಯ ಬಂದ ೩೫ ವರ್ಷಗಳ ನಂತರವಾದರೂ ಕಣ್ಣೀರಿನಲ್ಲಿ ಕೈ ತೊಳೆಯುತಕ್ಕ ಜನರ ಸ್ಥಿತಿ ಸುಧಾರಣೆಯಾಗಬೇಕು ಎಂದು ಯಾರು ಹೇಳುತ್ತಾರೆ ಅಂಥವರು ಪ್ರಾಮಾಣಿಕ ಪ್ರಯತ್ನ ಮಾಡದೇ ಹೋದರೆ ನೂರಾರು ವರ್ಷ ಜನ ನಮ್ಮನ್ನು ಶಪಿಸುತ್ತಾರೆ. ಮುಂದೆ ಜನ ಓಟು ಕೊಡುವುದಿಲ್ಲ. ಮುಂದೆ ನಾವು ಚುನಾವಣೆಗಾಗಿ ಜನರ ಮುಂದೆ ಹೋದರೆ ಅವರು ಓಟು ಕೊಡುವುದಿಲ್ಲ. ಗಡಿಗೆ ತೆಗೆದುಕೊಂಡು ಬೆನ್ನು ಹತ್ತುವಂತಹ ಕಾಲ ಬಂದೀತು ಎಂದು ಹೇಳಿ ಇವತ್ತು ತಾವು ಜಾಗೃತರಾಗಬೇಕೆಂದು ಹೇಳುತ್ತೇನೆ. ಇವತ್ತು ಬೆಲೆಗಳು ಗಗನಕ್ಕೆ ಏರುತ್ತಿವೆ. ಈ ಸಂದರ್ಭದಲ್ಲಿ ಒಂದು ಬದಲಾವಣೆ ತರಬೇಕೆಂದು ತಮ್ಮನ್ನು ತಂದು ಜನ ಕೂಡಿಸಿದ್ದಾರೆ. ಅದರ ಬಗ್ಗೆ ಇವತ್ತು ನಾಳೆ ತೀರ್ಮಾನ ತೆಗೆದುಕೊಳ್ಳಿ. ಕಾನೂನಿನಲ್ಲಿ ಮಾರ್ಪಾಟು ಮಾಡಿ. ೧ ಕೇಜಿ ಅಕ್ಕಿಯನ್ನು ೩ ರೂಪಾಯಿಗಳಿಗಿಂತಾ ಹೆಚ್ಚು ಬೆಲೆಗೆ ಮಾರಬಾರದು, ೧ ಲೀಟರ್ ಎಣ್ಣೆಯನ್ನು ೧೫ ರೂಪಾಯಿಗಳಿಗಿಂತಾ ಹೆಚ್ಚು ಮಾರಬಾರದೆಂದು ನಿಗಧಿ ಮಾಡಿ. ಆಗ ಬೆಲೆ ಕಡಿಮೆಯಾಗುತ್ತದೆ. ಈ ರೀತಿಯ ಪ್ರಯತ್ನ ಆಗುತ್ತಿಲ್ಲ ಯಾರು ಎಷ್ಟು ಬೇಕಾದರೂ ತಿನ್ನಬಹುದು. ಕಮಿಷನ್ ಕೊಟ್ಟರೆ ಅದು ಭ್ರಷ್ಟಾಚಾರ ಅಲ್ಲ. ಒಂದು ಹೊತ್ತಿನ ಗಂಜಿಗೆ ೨ ರೂಪಾಯಿಗಳ ಪಿಕ್‌ಪಾಕೇಟ್ ಮಾಡಿದವನು ಕಳ್ಳನಾಗುತ್ತಾನೆ, ಅದೇ ನಂಜನಗೂಡಿನಲ್ಲಿ ೧೦,೦೦೦ ಕ್ವಿಂಟಾಲ್ ಲೆವಿ ಭತ್ತವನ್ನು ದುರುಪಯೋಗ ಮಾಡಿಕೊಂಡವನನ್ನು ಏನು ಮಾಡಿದ್ರು ? ಶಿಕಾರಿಪುರದಲ್ಲಿ ೨೦ ಕ್ವಿಂಟಾಲ್ ಭತ್ತವನ್ನು ಮಾರಿಕೊಂಡವರು ಜೈಲಿಗೆ ಹೋದರೇ ? ಇವತ್ತು ಭ್ರಷ್ಟಾಚಾರವನ್ನು ಕಂಡುಹಿಡಿಯಲು ಆಗುವುದಿಲ್ಲ. ಏಕೆ ? ಇವತ್ತು ಜನ ಬುದ್ಧಿವಂತರಾಗಿದ್ದಾರೆ. ಅದನ್ನು ಕಂಡುಹಿಡಿಯದ ರೀತಿಯಲ್ಲಿ, ಸಿಕ್ಕಿಹಾಕಿಕೊಳ್ಳದ ರೀತಿಯಲ್ಲಿ ಮಾಡುತ್ತಾರೆ. ಇದು ನಮ್ಮೆಲ್ಲರಿಗೂ ಗೊತ್ತು. ಆದರೂ ಭ್ರಷ್ಟಾಚಾರದ ಬಗ್ಗೆ ನಾವು ಮಾತನಾಡುತ್ತೇವೆ. ಈ ದಿನ ಜನತೆ ಒಂದು ಬದಲಾವಣೆಯನ್ನು ಅಪೇಕ್ಷೆ ಮಾಡುತ್ತಿದೆ. ತಾವು ಅಧಿಕಾರಕ್ಕೆ ಬಂದು ೮ ತಿಂಗಳಾದರೂ ಶ್ರೀಸಾಮಾನ್ಯನ ಜೀವನವನ್ನು ಉತ್ತಮ ಮಾಡದೇ ಆತ ಅಧೋಗತಿಗೆ ಹೋಗಿದ್ದಾನೆ. ೫ ರೂಪಾಯಿಗಳ ಕೂಲಿ ಮಾಡುವವನು ಒಂದು ಹೊತ್ತು ಜೀವನ ಮಾಡುವ ಸ್ಥಿತಿಯಲ್ಲಿ ಇಲ್ಲ. ತಾವು ನಿಜವಾಗಿಯೂ ಈ ಬಗ್ಗೆ ಯೋಚನೆ ಮಾಡಬೇಕು. ನೀವು ಪುರಸಭೆಗಳಲ್ಲಿ ಕಾರ್ಪೋರೇಷನ್‌ನಲ್ಲಿ ಗೆದ್ದಿರಬಹುದು. ಜನ ೮ ತಿಂಗಳಿಂದ ನಿಮ್ಮನ್ನು ಪರೀಕ್ಷೆ ಮಾಡುತ್ತಿದ್ದಾರೆ. ನೀವು ಹೀಗೆ ಮುಂದುವರಿದರೆ ತಮಗೆ ಗೌರವ ಬರುವುದಿಲ್ಲ. ಚುನಾವಣೆಯಲ್ಲಿ ಯಾರೇ ಗೆದ್ದಿರಬಹುದು. ತಾವು ಏನು ಚುನಾವಣೆ ಸಮಯದಲ್ಲಿ ಆಶ್ವಾಸನೆ ಕೊಟ್ಟು ಶ್ರೀಸಾಮಾನ್ಯ ಮನುಷ್ಯನಿಗೆ ಏನೇನು ವ್ಯವಸ್ಥೆ ಮಾಡುತ್ತೇವೆ ಎಂದು ಅಧಿಕಾರಕ್ಕೆ ಬಂದಿರೋ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಪಿ. ಗಂಗಾಧರಪ್ಪ.—(ತಿಪಟೂರು) ಮಾನ್ಯ ಅಧ್ಯಕ್ಷರೇ, ನಾನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಬೇಡಿಕೆಗಳನ್ನು ವಿರೋಧಿಸುತ್ತಾ ನಮ್ಮ ದೇಶದಲ್ಲಿ ಏನು ನೂರಕ್ಕೆ ೮೦ರಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ಇದ್ದಾರೆ ಅವರಿಗೆ ಈ ನಾಗರೀಕ ಸರಬರಾಜು ಸಿಗದೇ ಬರೀ ೨೦ರಷ್ಟು ಜನ ಪಟ್ಟಣಗಳಲ್ಲಿ ಏನು ಇದ್ದಾರೆ ಅವರಿಗೆ ಮಾತ್ರ ಈ ಸೌಲಭ್ಯ ಸಿಗುತ್ತದೆಯೆಂದು ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಬೆಳೆಯುತಕ್ಕ ಬೆಳೆ ಎಷ್ಟು ? ಅದರಲ್ಲಿ ನಮಗೆ ಬೇಕಾಗುವುದು ಎಷ್ಟು ? ಇದರಲ್ಲಿ ನಮ್ಮಲ್ಲಿ ಕೋ–ಆರ್ಡಿನೇಷನ್ ಇಲ್ಲ. ಇದರ ಬಗ್ಗೆ ಹೇಳಬೇಕೆಂದರೆ ಒಂದು ಸಲ ಸಕ್ಕರೆ ೧ ಕೇಜಿಗೆ ೮ ರಿಂದ ೧೨ ರೂಪಾಯಿಗಳವರೆಗೆ ಹೋಗಿದ್ದರಿಂದ ಅಕ್ಕಿ ಬೆಳೆಯುವ ಪ್ರದೇಶದ ಜನರೆಲ್ಲಾ ಕಬ್ಬನ್ನು ಬೆಳೆದರು. ಆಗ ಒಂದೇ ಸಲ ಸಕ್ಕರೆ ಬೆಲೆ ಕೇಜಿಗೆ ೩ ರೂಪಾಯಿಗಳು, ಬೆಲ್ಲ ಕೇಜಿಗೆ ೧ ರೂಪಾಯಿ ಆಯಿತು. ಆಗ ಕಬ್ಬು ಬೆಳೆದವರು ಅದನ್ನು ಕೊಯಿಲು ಮಾಡಿದರೂ ಅದರ ಕಾಸು ಗಿಟ್ಟುವುದಿಲ್ಲವೆಂದು ಹೇಳಿ ಬೆಳೆಗೆ ಬೆಂಕಿ ಇಟ್ಟರು. ನಮ್ಮಲ್ಲಿ ಉತ್ಪಾದನೆ ಮತ್ತು ಬಳಕೆಯಲ್ಲಿ ಒಂದು ಹೊಂದಾಣಿಕೆ ಇಲ್ಲದಿರುವುದರಿಂದ ಈ ಪರಿಸ್ಥಿತಿ ಬಂದು ಎಂದು ನಾನು ಹೇಳುತ್ತೇನೆ. ನಾನು ಒಮ್ಮೆ ಸ್ಥಳೀಯ ಬ್ಯಾಂಕಿನ ಮೇನೇಜರ್ ಜೊತೆ ಮಾತನಾಡುವ ಸಮಯದಲ್ಲಿ ಅವರು ನಮ್ಮ ದೇಶದಲ್ಲಿ ಸಕ್ಕರೆ ಅಗಾಧ ಸ್ಟಾಕ್ ಇದೆ ಅದನ್ನು ರಿಲೀಸ್ ಮಾಡಿದರೆ ಸಕ್ಕರೆ ಮಾರ್ಕೆಟ್ ಬಿದ್ದು ಹೋಗಿ ಮಿಲ್‌ಗಳು ಬಂದ್ ಆಗಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಹೇಳಿದರು. ಈ ಬಗ್ಗೆ ಒಂದು ನಿಯಂ

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ರಣ ಇದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ನಾನು ಹೇಳುತ್ತೇನೆ. ಮತ್ತು ಅಮೇರಿಕಾದಲ್ಲಿ ಫಾರಂ ರೆವಲ್ಯೂಷನ್ ಆದಾಗ ಅಲ್ಲಿ ಏನು ೧೦೦ರಲ್ಲಿ ೮೦ ಜನ ಬೆಳೆಯುತ್ತಿದ್ದರು ಅದರಲ್ಲಿ ೮ ಪರ್ಸೆಂಟ್ ಜನರನ್ನು ಬಿಟ್ಟು ಮತ್ತೆ ೨.೨ ಪರ್ಸೆಂಟ್ ಜನರು ಬೆಳೆ ಬೆಳೆಯಲು ಏನು ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿ ಕೊಟ್ಟ ಸಲುವಾಗಿ ಅವರಿಗೆ ಬೇಕಾದಷ್ಟು ಬೆಳೆದು ಹೊರ ರಾಜ್ಯಗಳಿಗೂ ರಫ್ತು ಮಾಡುವಂತೆ ಆಯಿತು ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು ಅದೇ ರೀತಿ ನಮ್ಮಲ್ಲೂ ಆಗಬೇಕಾಗಿದೆ. ನಮ್ಮಲ್ಲಿ ಸರಿಯಾದ ಸಿಸ್ಟಂ ಇಲ್ಲ. ನಮ್ಮಲ್ಲೇ ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ಮನೆ ಸಮೀಪದಲ್ಲಿ ಅಂಗಡಿ ಇದೆ ನಮ್ಮ ಮನೆಯವರು ಅಲ್ಲಿಗೆ ಹೋಗಿ ಸಾಮಾನು ತನ್ನಿ ಎಂದು ಹೇಳಿರುತ್ತಾರೆ. ಆದರೆ ನಾವು ಅದನ್ನು ಮರೆತು ಹೋಗಿರುತ್ತೇವೆ. ರಾತ್ರಿ ಒಂಬತ್ತೂವರೆಯಲ್ಲಿ ಯಾರೋ ನೆಂಟರು ಬಂದಾಗ ಅವರಿಗೆ ಹಾಲು ಕೊಡಿ ಎಂದಾಗ ಸಕ್ಕರೆ ಇಲ್ಲದ ಹಾಲು ತಂದುಕೊಡುತ್ತಾರೆ. ಏಕೆ ಸಕ್ಕರೆ ಇಲ್ಲವೇ ಎಂದರೆ, ೮ ದಿವಸದಿಂದ ಹೇಳುತ್ತಿದ್ದೇನೆ ತಾವು ತಂದುಕೊಟ್ಟಿಲ್ಲ ಎನ್ನುತ್ತಾರೆ. ಆಗ ನಾವು ಕಣ್ಣು ಬಿಟ್ಟು ನೋಡಿಕೊಳ್ಳುತ್ತೇವೆ. ಇದೇ ರೀತಿ ನಮ್ಮ ಸರ್ಕಾರದಲ್ಲೂ ಆಗಿದೆ ಎಲ್ಲೆಲ್ಲಿ ವ್ಯವಸ್ಥೆಯಲ್ಲಿ ಕೊರತೆ ಬರುತ್ತದೆ ಆಗ ಕಣ್ಣು ಬಿಟ್ಟು ನೋಡಿಕೊಳ್ಳುತ್ತೇವೆ. ಎಲ್ಲಿ ಕೇರಳಕ್ಕೆ ಹೋಯಿತೇ, ಆಂಧ್ರಕ್ಕೆ ಹೋಯಿತೇ ಎಂದು ಆಗ ನೋಡಿಕೊಳ್ಳುವುದು. ಆದ್ದರಿಂದ ಮುಂಚಿತವಾಗಿಯೇ ನಮಗೆ ಎಷ್ಟು ಬೇಕು, ಎಷ್ಟು, ಉತ್ಪಾದನೆಯಾಗುತ್ತಿದೆ ಎಷ್ಟು ಕೊರತೆ ಇದೆ ಎಂಬುದನ್ನು ಮೊದಲೇ ನೋಡಿಕೊಳ್ಳದೇ ಬೆಲೆ ಮೇಲಕ್ಕೆ ಹೋದಾಗ ನಾವು ಯೋಚನೆ ಮಾಡತಕ್ಕ ಪರಿಸ್ಥಿತಿ ಬರುತ್ತಿದೆ ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ನಾನು ತರಬಯಸುತ್ತೇವೆ. ಈಗ ಗ್ರಾಮಾಂತರ ಪ್ರದೇಶದಲ್ಲಿ ಸೊಸೈಟಿಗಳ ಮುಖಾಂತರ ಅಕ್ಕಿ, ರಾಗಿ, ಸೀಮೆ ಎಣ್ಣೆ, ಸಕ್ಕರೆ ವಿತರಣೆ ಆಗತಕ್ಕ ಸಂದರ್ಭ ಇದೆ. ಪೇಟೆಗಳ ಕಡೆ ಈ ವಿತರಣೆ ಬಗ್ಗೆ ಅಧಿಕಾರಿಗಳು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಏಕೆಂದರೆ ಇಲ್ಲಿ ಅಧಿಕಾರಿಗಳು, ಶಾಸಕರು ಇರುತ್ತಾರೆ. ಅದೇ ಗ್ರಾಮಾಂತರ ಪ್ರದೇಶದಲ್ಲಿ ನಡೆಯುವ ವಿಚಾರವನ್ನು ಗಮನಿಸಬೇಕು. ಕೆಲವು ಸೊಸೈಟಿಗಳಲ್ಲಿ ಅಲ್ಲಿನ ಮ್ಯಾನೇಜರ್‌ಗೂ ಪ್ರೆಸಿಡೆಂಟ್‌ಗೂ ಜಗಳವಾಗಿ ಒಂದು–ಎರಡು ವರ್ಷಗಳಿಂದ ಬಾಗಿಲು ಹಾಕಿರುತ್ತಾರೆ. ಕೆಲವು ಕಡೆ ಮಿಸ್ ಅಪ್ರೋಪ್ರಿಯೇಷನ್ ಆಗಿ, ಸೆಕ್ರೆಟರಿ, ಸೇಲ್ಸ್ ಮನ್ ಮಿಸ್ ಅಪ್ರೋಪ್ರಿಯೇಷನ್ ಮಾಡಿ ವರ್ಷಾನುಗಟ್ಟಲೆ ಬಾಗಿಲು ಹಾಕಿರುತ್ತವೆ. ಈ ಬಗ್ಗೆ ಸೊಸೈಟಿಗಳ ರಿಜಿಸ್ಟ್ರಾರ್‌ರವರಿಗೆ ಹೇಳಿದರೆ ಪೋಲೀಸರಿಗೆ ಕ್ರಮ ತೆಗೆದುಕೊಳ್ಳಲು ಹೇಳಿದ್ದೇವೆ ಅವರು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತಾರೆ. ಇಂತಹ ಕಡೆ ಆದಷ್ಟು ಬೇಗ ಸ್ಟಾಪ್ ಗ್ಯಾಪ್ ಅರೇಂಜ್‌ಮೆಂಟ್ಸ್ ಆಗಬೇಕಾಗಿದೆ. ಗ್ರಾಮಾಂತರ ಪ್ರದೇಶದ ಜನರು ಒಂದು ಹಳ್ಳಿಯಿಂದ ಸೀಮೆ ಎಣ್ಣೆ ತರಲು ಇನ್ನೊಂದು ಹಳ್ಳಿಗೆ ಆರೇಳು ಮೈಲಿ ನಡೆದುಕೊಂಡು ಬರಬೇಕಾಗಿರುತ್ತದೆ. ಅಲ್ಲಿ ಬಸ್ ವ್ಯವಸ್ಥೆ ಇರುವುದಿಲ್ಲ. ೧ ಬಾಟಲ್ ಸೀಮೆಣ್ಣೆಗೆ ೫ ಮೈಲಿ ನಡೆದು ಬರುವ ಬದಲು ಅವರು ಜೈನ ಮತ ತತ್ವವನ್ನು ಅನುಸರಿಸಿದರೆ ಚೆನ್ನ. ಕಾರಣ ಜೈನರು ಕತ್ತಲೆಯಾಗುವುದರೊಳಗೆ ಉಂಡು ಅನಂತರ ಎಷ್ಟು ಹೊತ್ತಿಗೆ ಮಲಗುತ್ತಾರೋ ಗೊತ್ತಿಲ್ಲ. ಇವರೂ ಕತ್ತಲೆಯೊಳಗೆ ಉಂಡು ನಿದ್ರೆ ಮಾಡಿದರೆ ಸೀಮೆಣ್ಣೆ ತರುವ ತೊಂದರೆ ತಪ್ಪುತ್ತದೆ. ನಮ್ಮ ತಾಲ್ಲೂಕಿಗೆ ೧ ಸಾವಿರ ಚೀಲ ಅಕ್ಕಿ ಬೇಕಾಗಿದ್ದರೆ ಬರೀ ೧೦೦ ಚೀಲ ಬಂದಿದೆ. ಅಧಿಕಾರಿಗಳನ್ನು ಕೇಳಿದರೆ ತರಿಸಿ ಕೊಡುತ್ತೇವೆಂದು ಹೇಳುತ್ತಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಬರೆದು ಕೇಳಿದರೆ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಲಾಂಜ್‌ನಲ್ಲಿ ಕೇಳಿದಾಗ ಅವರು ಗಮನಕ್ಕೇ ಹಾಕಿಕೊಳ್ಳಲಿಲ್ಲ. ಈ ರೀತಿ ಮಾಡದೇ ಅವರು ಜನರ ಕಷ್ಟ ಸುಖಗಳನ್ನು ಕೇಳಬೇಕಾಗುತ್ತದೆ. ಇವತ್ತು ಹಳ್ಳಿಗಳ ಕಡೆ ೩–೪ ವರ್ಷದಿಂದ ಮಳೆ ಬಾರದೇ ಕಷ್ಟಪಡುತ್ತಿದ್ದರೂ ಅವರಿಗೆ ಪಡಿತರ ಪದ್ಧತಿಯ ಮೂಲಕ ಆಹಾರ ಧಾನ್ಯವನ್ನು ಕಳುಹಿಸದೇ ಬರೀ ಪಟ್ಟಣಗಳ ಕಡೆ ಗಮನ ಅವರ ಕಷ್ಟ ಸುಖಗಳನ್ನು ನೋಡುವುದು ಹೋಗಬೇಕು. ಹಳ್ಳಿಗಳವರಿಗೇನು ಅವರಿಗೆ ಅದು ತಲತಲಾಂತರದಿಂದ ಬಂದಿರತಕ್ಕ ತೊಂದರೆ ಎಂದು ಏನೋ ಮನೋಭಾವ ತೋರಿಸುವುದು ಬಹಳ ತಪ್ಪು ಎಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮೀಣ ಜನರ ಅನುಕೂಲಕ್ಕಾಗಿ ಅಗತ್ಯ ವಸ್ತುಗಳು ಸಿಗುವಂತಹ ವ್ಯವಸ್ಥೆ ಮಾಡಬೇಕಾಗಿದೆ, ಇವತ್ತು ಗಗನಚುಂಬಿ ಕಟ್ಟಡಗಳಿಗೆ ಸಿಮೆಂಟ್ ಸಿಗುತ್ತದೆ, ಆದರೆ ಹಳ್ಳಿಗಳಲ್ಲಿ ಬರಗಾಲ ಬಂದಂಥ ಸಮಯದಲ್ಲಿ ದನಕರುಗಳು ನೀರು ಕುಡಿಯಲಿಕ್ಕೆ ಕೆಲವು ಜನ ತೊಟ್ಟಿಗಳನ್ನು ಕಟ್ಟಿಸಿಕೊಡುತ್ತಾರೆ, ಅದಕ್ಕೆ ಸಿಮೆಂಟು ಸಿಗುವುದಿಲ್ಲ. ತೊಟ್ಟಿ ಕಟ್ಟಿಸಲಿಕ್ಕೆ ನಾಲ್ಕು ಚೀಲ ಸಿಮೆಂಟ್ ಕೊಡಿ ಎಂದರೆ ಕೊಡುವುದಿಲ್ಲ. ಈ ವಿಚಾರವನ್ನು ನಾನು ಡಿ.ಡಿ.ಸಿ. ಸಭೆಯಲ್ಲೂ ಕೂಡ ಹೇಳಿದ್ದೇನೆ. ಗ್ರಾಮೀಣ ಜನತೆಯ ಕಷ್ಟ ಸುಖಗಳು ಏನು ಎಂಬುದನ್ನು ತಾವು ಕೇಳಬೇಕೆಂದು ಹೇಳುತ್ತೇನೆ. ಇವತ್ತು ಹಳ್ಳಿಗಳಲ್ಲಿ ಯಾವುದೇ ಪದಾರ್ಥಗಳು ಸಿಗುತ್ತಿಲ್ಲ, ಸೀಮೆಎಣ್ಣೆ ಮೊದಲೇ ಸಿಗುತ್ತಲೇ ಇಲ್ಲ. ಸರ್ಕಾರದವರು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಾದ ವಸ್ತುಗಳನ್ನು ಸರಬರಾಜು ಮಾಡು

ವುದಕ್ಕೆ ಗಮನಕೊಡಬೇಕೆಂದು ಹೇಳುತ್ತೇನೆ. ಮಿಲ್ ಮಾಲೀಕರು ಲೆವಿ ಕೊಟ್ಟರೆ, ಯಾವುದೇ ರಾಜ್ಯಕ್ಕೆ ಬೇಕಾದರೂ ಅಕ್ಕಿಯನ್ನು ತೆಗೆದುಕೊಂಡು ಹೋಗಬೇಕೆಂದು ಕಾನೂನು ಇದೆ. ಇದರ ಬಗ್ಗೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿಲ್ಲವೆಂದು ಕಾಣುತ್ತದೆ. 'ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು' ಎನ್ನುವಂಥ ಪರಿಸ್ಥಿತಿಗೆನಾವು ಬಂದಿದ್ದೇವೆ. ಈ ವಿಚಾರದಲ್ಲಿಯೂ ಸರ್ಕಾರದವರು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ತೆಂಗಿನ ಮರಗಳಿಗೆ ರೋಗಗಳು ಬಂದು, ೫೦ ಭಾಗದಷ್ಟು ಮರಗಳು ಹಾಳಾಗಿಹೋಗಿವೆ. ತೆಂಗಿನ ಬೆಳೆ ಕಡಿಮೆಯಾಗಿರುವುದರಿಂದ ಇವತ್ತು ಕೊಬ್ಬರಿ ಬೆಲೆ ವಿಪರೀತವಾಗಿ ಏರಿದೆ. ಇದರಿಂದ ಬೆಳೆಗಾರರಿಗೆ ಮಾತ್ರ ಅನುಕೂಲವಾಗಿಲ್ಲ. ಪಟ್ಟಣದಲ್ಲಿರತಕ್ಕ ದೊಡ್ಡ ದೊಡ್ಡ ವ್ಯಾಪಾರಸ್ಥರುಗಳು ಇದರ ಅನುಕೂಲವನ್ನು ಪಡೆದುಕೊಳ್ಳುತ್ತಾರೆ. ಇವತ್ತು ರಾಜ್ಯದಲ್ಲಿ ಎಷ್ಟು ಪ್ರದೇಶದಲ್ಲಿ ತೆಂಗು ಬೆಳೆಯುತ್ತದೆ? ಯಾವ ಯಾವ ರಾಜ್ಯದಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ತೆಂಗು ಬೆಳೆಯುತ್ತದೆ ಎನ್ನುವ ವಿಚಾರವನ್ನು ತರಿಸಿ, ಹೊರದೇಶದಿಂದ ಸಿಮೆಂಟು ತರಿಸುತ್ತೀರಿ, ಇದನ್ನು ತರಿಸುವುದಕ್ಕೆ ಏತಕ್ಕೆ ಆಗುವುದಿಲ್ಲ. ಮಾನ್ಯ ಆಹಾರ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಯಾರ ಕಡೆಗೋ ಕೈ ತೋರಿಸಿಕೊಂಡು ಜವಾಬು ಹೇಳುವುದು ಸರಿಯಾದುದಲ್ಲ. ಪ್ರತಿನಿತ್ಯ ಮನುಷ್ಯನಿಗೆ ಬೇಕಾಗತಕ್ಕ ವಸ್ತುಗಳ ವಿತರಣೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಗೋಧಿ ಸರಬರಾಜು ಮಾಡಿದರೆ, ಅದಕ್ಕೆ ಒಂದು ಕೆ.ಜಿ. ಎಣ್ಣೆ ಬೇಕಾಗುತ್ತದೆ, ನಮ್ಮ ಕಡೆ ಜನ ಗೋಧಿ ತಿಂದರೆ ಆಗುವುದಿಲ್ಲ, ನಮಗೆ ಜೀರ್ಣವಾಗುವುದಿಲ್ಲವೆಂದು ಹೇಳುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ರಾಗಿ ಮತ್ತು ಅಕ್ಕಿಯನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಇಲ್ಲಿಂದ ಅಕ್ಕಿಯನ್ನು ತಂದು, ಸೊಸೈಟಿಗಳ ಮೂಲಕ ತೆಗೆದು ಕೊಳ್ಳುವಂತೆ ಮಾಡಿದ್ದಾರೆ, ಮನುಷ್ಯರು ತಿನ್ನುವಂಥ ಅಕ್ಕಿ ಸರ್ಕಾರದವರು ಕೊಡುತ್ತಿಲ್ಲ. ಕಸವನ್ನು ರಸ ಮಾಡಬೇಕೇ ಹೊರತು, ರಸವನ್ನು ಕಸ ಮಾಡಬಾರದು. ನಮ್ಮ ಅಧಿಕಾರಿಗಳು ರಸ ಕಸ ಮಾಡು ವುದರಲ್ಲಿ ಪಟಿಂಗರು ಎಂದು ಹೇಳಿದರೆ ತಪ್ಪಾಗಲಾರದು. ರೈತರಿಂದ ಕೊಂಡ ಆಹಾರ ದಾಸ್ತಾನನ್ನು ಜೋಪಾನವಾಗಿಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಈ ಬೇಡಿಕೆಗೆ ವಿರೋಧ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸಮರ್ಥಿಸುತ್ತಾ, ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡು ತ್ತೇನೆ. ಒಂದುಕಡೆ ರೈತರು, ಮತ್ತೊಂದು ಕಡೆ ಗ್ರಾಹಕರು ಮಗದೊಂದುಕಡೆ ವರ್ತಕರು - ಈ ರಾಜ್ಯ ದಲ್ಲಿದ್ದಾರೆ. ರಾಜ್ಯದಲ್ಲಿರುವ ಆಹಾರ ಪದಾರ್ಥಗಳನ್ನು ಒಂದೆಡೆ ಶೇಖರಿಸಿಟ್ಟುಕೊಂಡು ಯೋಗ್ಯ ಬೆಲೆಗೆ ಒದಗಿಸತಕ್ಕಂಥದ್ದು ಆಹಾರ ಇಲಾಖೆಯ ಮೂಲ ಕರ್ತವ್ಯ. ಈ ದಿಸೆಯಲ್ಲಿ ನಮ್ಮ ಆಹಾರದ ಇಲಾಖೆ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ರಾಜ್ಯದಲ್ಲಿ ರುವಂಥ ನಗರವಾಸಿಗಳಿಗೆ ಅಕ್ಕಿ, ರಾಗಿ ಹಾಗೂ ಜೋಳ ಇನ್ನಿತರ ಪದಾರ್ಥಗಳನ್ನು ಯೋಗ್ಯ ಹಾಗೂ ಕಡಿಮೆಬೆಲೆಗೆ ಕೊಡುವಂಥ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ, ಆದರೆ, ಈ ವಿಚಾರದಲ್ಲಿ ರೈತರಿಂದ ಕಡಿಮೆ ಬೆಲೆಗೆ ತೆಗೆದುಕೊಂಡು, ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡುಬರುತ್ತಿದೆ ಆಹಾರ ಪದಾರ್ಥಗಳ ದರ ಏರುವುದನ್ನು ತಡೆಗಟ್ಟಬೇಕು. ಹೆಚ್ಚಿನ ಲಾಭವನ್ನು ವರ್ತಕರು ಏನು ಪಡೆಯುತ್ತಿದ್ದಾರೆ ಅದನ್ನು ಕೂಡ ನಿಲ್ಲಿಸಬೇಕು. ಇದರ ಕಡೆಗೆ ಸರ್ಕಾರ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ಸುಮಾರು ೧೪,೮೧೨ ಏಜನ್ಸಿಗಳ ಮೂಲಕ ಆಹಾರ ಪದಾರ್ಥಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಇದರಲ್ಲಿ ಖಾಸಗೀ ಜನರೂ, ಸಹಕಾರಿ ಸಂಘ ಗಳು, ಇನ್ನಿತರ ಸಂಘ ಸಂಸ್ಥೆಗಳು ಇವೆ. ಆದಷ್ಟು ಸಹಕಾರ ಸಂಘಗಳ ಮೂಲಕವೇ ಆಹಾರ ಸರಬ ರಾಜು ಮಾಡುವುದಕ್ಕೆ ಏರ್ಪಾಡು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯ್ತಿಗಳ ಮೂಲಕ, ಸಹಕಾರ ಸಂಘಗಳ ಮೂಲಕ ಆಹಾರ ವಿತರಣೆ ಮಾಡಬೇಕೆಂಬ ಆಜ್ಞೆ ಹೊರಡಿಸಲಾಗಿದೆಯೆಂದು ಹೇಳಿದ್ದೇನೆ. ಯುವಕ ಮಂಡಲಿಗಳಿಗೂ, ಇನ್ನಿತರ ಸ್ಥಳೀಯ ಸಂಸ್ಥೆಗಳ ಮುಖಾಂತರವೂ ಆಹಾರ ವಿತರಣೆ ಕಾರ್ಯ ಮಾಡಿಸುವುದು ಯೋಗ್ಯ ವೆಂದು ನಾನು ಹೇಳುತ್ತೇನೆ.

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದ ಸೂಚಿಸುತ್ತದೆ.

೫-ಪಿ.ಎಂ.

ಅನೇಕ ಸಾರಿ ಅಧಿಕಾರಿಗಳು ಸಹಕಾರ ಸಂಘಕ್ಕೆ ಮತ್ತು ಪಂಚಾಯಿತಿಗಳಿಗೆ ಕೊಡುವುದು ಬಿಟ್ಟು ಕೆಲವು ವರ್ಗದವರಿಗೆ ಹಣ ಪಡೆದುಕೊಂಡು ಏಜೆನ್ಸಿ ಕೊಡುವಂಥ ದುಷ್ಟ ಹವ್ಯಾಸ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿದೆ ಅದು ಹೋಗಬೇಕು. ಐ.ಎ.ಎಸ್, ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಸಹಕಾರ ಸಂಘಗಳಿಗೆ, ಪಂಚಾಯಿತಿಗಳಿಗೆ ಕೊಡುವಂಥ ಏಜೆನ್ಸಿಯನ್ನು ರಹಿತಪಡಿಸಿ, ರಾಜಕಾರಣಿಗಳಿಗೆ ಸೋತು ಅಧಿಕಾರಕ್ಕೆ ವಿರೋಧವಾಗಿ ಕೊಟ್ಟಿದ್ದು ರಾಜ್ಯದಲ್ಲಿ ಬೇಕಾದಷ್ಟು ಇದೆ. ಈ ತರಹ ಕೆಲಸವನ್ನು ಜಿಲ್ಲಾಧಿಕಾರಿಗಳು, ತಾಲ್ಲೂಕು ಅಧಿಕಾರಿಗಳು ಮಾಡದ ಹಾಗೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಸರ್ಕಾರದ ಆದೇಶದ ಪ್ರಕಾರ ನೀತಿ ನಿಯಮಗಳಿಗನುಗುಣವಾಗಿ ಸಹಕಾರ ಸಂಘದ ಮೂಲಕ ಇಡೀ ರಾಜ್ಯದಲ್ಲಿ ವಿತರಣೆ ಮಾಡುವಂಥ ವ್ಯವಸ್ಥೆ ಮಾಡುವಲ್ಲಿ ಮಾನ್ಯ ಮಂತ್ರಿಗಳು ಹೆಚ್ಚು ದಕ್ಷತೆ ವಹಿಸಿ ಕೆಲಸ ಮಾಡಬೇಕು. ಇನ್ನು ಸೀಮೆ ಎಣ್ಣೆ ವಿತರಣೆ ಹಳ್ಳಿಗಳಲ್ಲಿ ಚೆನ್ನಾಗಿ ನಡೆಯುತ್ತಿಲ್ಲ ಅದು ಎಲ್ಲಾ ಕಡೆ ಸರಿಯಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ರೇಷನ್ ಕಾರ್ಡುಗಳು ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲೂ ಇಲ್ಲ, ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ನಗರದಲ್ಲಿದಂತೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಕೇವಲ ೩೭ ರೋಲರ್ ಫ್ಲೋರ್ ಮಿಲ್‌ಗಳಿವೆ, ಇವು ಬಹಳ ಕಡಿಮೆಯಾಯಿತು. ಪ್ರತಿಯೊಂದು ಜಿಲ್ಲೆಯಲ್ಲೂ ಫ್ಲೋರ್‌ಮಿಲ್ ಸ್ಥಾಪನೆಯಾಗುವಂತೆ ಮಾನ್ಯ ಮಂತ್ರಿಗಳು ದಕ್ಷತೆ ವಹಿಸಿ ಕೆಲಸ ಮಾಡಬೇಕು. ಹಾಗೆ ಆಯಾ ಜಿಲ್ಲೆಗಳಲ್ಲೇ ತಯಾರಾದಂಥ ಮೈದಾ, ರವೆ, ಅಲ್ಲಲ್ಲಿಯೇ ಸಿಕ್ಕುವಂಥ ವ್ಯವಸ್ಥೆ ಮಾಡಬೇಕು. ಬೆಂಗಳೂರಿನಲ್ಲಿ ತಯಾರು ಮಾಡಿ ಅದನ್ನು ತಾವು ರಾಜ್ಯದ ಮೂಲೆ ಮೂಲೆಗಳಿಗೆ ಕಳಿಸಿದರೆ ಅದು ತಿನ್ನಲಿಕ್ಕೆ ಆಗದಂತೆ ಆಗುತ್ತದೆ. ಆ ರೀತಿಯಲ್ಲಿ ತಾವು ಮಾಡಬಾರದು.

ಇನ್ನು ಎಕ್ಸರ್‌ಸೈಜ್ ಪುಸ್ತಕಗಳು ಈ ಖಾತೆಯ ಮೂಲಕ ವಿತರಣೆ ಆಗುತ್ತವೆ. ಆ ಪುಸ್ತಕಗಳು ಹಳ್ಳಿಯಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸಿಕ್ಕದೆ ತೊಂದರೆ ಇದೆ, ಎಕ್ಸರ್‌ಸೈಜ್ ಪುಸ್ತಕ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೂ ಸಿಕ್ಕುವಂಥ ವ್ಯವಸ್ಥೆ ಮಾಡಬೇಕು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್ ಇದೆ, ಅದು ನಮ್ಮ ಆಹಾರ ಮಂತ್ರಿಗಳಿಗೆ ಸಂಬಂಧ ಪಟ್ಟಿದ್ದು ೧೯೭೭-೭೮ನೇ ಸಾಲಿನ ರಿಪೋರ್ಟ್ ಈ ದಿವಸ ಕೊಡುತ್ತಿದ್ದಾರೆ. ನಿಜಕ್ಕೂ ಇದರಿಂದ ನಾಚಿಕೆ ಬರಬೇಕು ಮುಂದಿನ ಐದು ವರ್ಷದ್ದು ಏನಾಯಿತು, ಎಷ್ಟು ಲಾಸ್ ಆಯಿತು, ಅದರಲ್ಲಿ ನೌಕರರು ಎಷ್ಟು ಮಂದಿ ಇದ್ದಾರೆ, ಇದರಲ್ಲಿ ಎಷ್ಟು ಷಾರ್ಟೇಜ್ ಇದೆ ಇದೆಲ್ಲಾ ನಮಗೆ ಹೇಗೆ ಗೊತ್ತಾಗಬೇಕು? ಪ್ರತಿ ವರ್ಷ ವರ್ಷದ ಕೊನೆ ಆದ ತಕ್ಷಣ ಕಂಪನಿ ಲಾ ಪ್ರಕಾರ ಆರು ತಿಂಗಳಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆಯಬೇಕೆಂದು ಇದೆ. ಅದನ್ನು ಅವರು ಮಾಡಿ ಈ ಸದನದಲ್ಲಿ ರಿಪೋರ್ಟ್ ಇಡಬೇಕು. ಈಗಿನ ಮಂತ್ರಿಗಳಾದರೂ ಆ ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ. ಈಪೊತ್ತು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಸರಿಯಾಗಿ ನಡೆಯುತ್ತಿಲ್ಲ ನಮಗೆ ಕೊಟ್ಟ ಲೆಕ್ಕದ ಪ್ರಕಾರ ೧೯೭೮ನೇ ಇಸವಿ ಜೂನ್ ತಿಂಗಳಿಗೆ ೩೩,೩೪,೯೭೩ ಲಕ್ಷ ರೂಪಾಯಿಗಳು ಲುಕ್ಸಾನ್ ಆಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲ ಬಂಡವಾಳಕ್ಕಿಂತಲೂ ಹೆಚ್ಚು ಲುಕ್ಸಾನ ಆಗಿದೆ. ಸರ್ಕಾರದವರಿಗೆ ಇದರ ಅರಿವು ಇರಬೇಕು. ಇದರಲ್ಲಿ ೩ ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಇದರ ವ್ಯವಸ್ಥೆ ಸರಿಯಾಗಿ ನಡೆಯದಿದ್ದರೆ ನಾಚಿಕೆ ಬರುವಂತದ್ದು ಆಗುತ್ತದೆ. ಈಗ ಇಲ್ಲಿ ೩ ಕೋಟಿ ರೂಪಾಯಿಗಳ ಷಾರ್ಟೇಜ್ ಕಾರ್ಪೊರೇಷನ್‌ನಲ್ಲಿರತಕ್ಕದ್ದು ಕಂಡು ಬಂದಿದೆ. ಇನ್ನು ಶಿವಮೊಗ್ಗ ಜಿಲ್ಲೆಯಲ್ಲೇ ೫,೯೦೦ ಟನ್‌ನಷ್ಟು ಬತ್ತ ಷಾರ್ಟೇಜ್ ಇದೆ. ಮಲೆನಾಡ್ ಟ್ರೇಡರ್ಸ್, ಸಿದ್ಧೇಶ್ವರ, ರಜನಿ, ಶಂಕರ್ ರೈಸ್‌ಮಿಲ್ ಈ ನಾಲ್ಕು ಮಿಲ್ಲುಗಳಿಂದ ೫,೯೦೦ ಟನ್‌ನಷ್ಟು ಷಾರ್ಟೇಜ್ ಬರತಕ್ಕದ್ದು ಇದೆ. ಅಲ್ಲಿ ವಸೂಲಾಗತಕ್ಕದ್ದು ಇದೆ. ಮಾನ್ಯ ಮಂತ್ರಿಗಳು ಅದೇ ಜಿಲ್ಲೆಯವರು, ಆದ್ದರಿಂದ, ಅದನ್ನು ರಾಜಿ ಮೂಲಕ ಆಗಲೀ ಅಥವಾ ಕಾನೂನು ಮೂಲಕವಾಗಲಿ ಬಗೆಹರಿಸುವಂತೆ ಮಾಡಬೇಕು. ಪ್ಯಾಡಿ, ರೈಸ್, ರಾಗಿ ಜವಾರ್, ವೀಟ್, ಈ ರೀತಿ ಸುಮಾರು ೧,೯೬,೭೦೨ ಕ್ವಿಂಟಾಲ್ ಷಾರ್ಟೇಜ್ ಈ ಕಾರ್ಪೊರೇಷನ್‌ನಲ್ಲಿ ಇದೆ. ಈ ರೀತಿ ಆಗದಂತೆ ನೋಡಿಕೊಳ್ಳಬೇಕು ಐ.ಎ.ಎಸ್. ಆಫೀಸರ್ ಎಂದರೆ ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವೀಸ್ ಬಹಳ ಅಚ್ಚು ಕಟ್ಟಾದ ಸರ್ವೀಸ್. ಇಂತಹ ಕಡೆ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದು ಸರಿಯಾಗಿ ನಡೆಸದಿದ್ದರೆ ಇದರ ಉಪಯೋಗ ಏನು ಇಂಥ ಕಾರ್ಪೊರೇಷನ್‌ನ್ನು ಮುಚ್ಚಿದರೆ ಒಳ್ಳೆಯದು. ರಾಜ್ಯ ಸಹಕಾರಿ ಮಾರಾಟ ಸಂಘ ಇದೆ, ಫೆಡರೇಷನ್ ಇದೆ. ೧೭೫ ತಾಲ್ಲೂಕುಗಳಲ್ಲಿ ೧೭೫ ಮಾರ್ಕೆಟಿಂಗ್ ಸೊಸೈಟಿ ಇವೆ. ತಾಲ್ಲೂಕು ಮಟ್ಟದಲ್ಲಿ ಮಾರ್ಕೆಟಿಂಗ್ ಸೊಸೈಟಿ ಬತ್ತವನ್ನು ಪ್ರಕ್ಯೂರ್

ಮಾಡಬಹುದು. ರಾಜ್ಯಮಟ್ಟದಲ್ಲಿ ಫುಡ್ ಸೆಕ್ರೆಟರಿಯವರು ಏನು ಇರುತ್ತಾರೆ, ಅವರು ರಾಜ್ಯ ಮಾರಾಟ ಸಂಘದಲ್ಲಿ ಏನು ಇದೆ ಅದನ್ನು ನೋಡಿಕೊಂಡು, ಇಡೀ ರಾಜ್ಯದಲ್ಲಿ ವ್ಯವಸ್ಥಿತ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಹಂಚಲಿಕ್ಕೆ ಸಾಧ್ಯವಿದೆ. ಕಾರ್ಪೊರೇಷನ್ ಮಾಡಿ ೧೦೮ ಕೋಟಿ ಲಾಸ್ ಮಾಡಿ, ಮಾರ್ಕೆಟಿಂಗ್ ಸೊಸೈಟಿ ಹಾಳು ಮಾಡಿ, ಹಳ್ಳಿ ಸೊಸೈಟಿಗಳನ್ನು ಹಾಳು ಮಾಡಿದರೆ ಅರ್ಥ ಏನು ? ರಾಜ್ಯದಲ್ಲಿ ಮಾರ್ಕೆಟಿಂಗ್ ಸೊಸೈಟಿಗಳಿಗೆ ಉತ್ತೇಜನ ಕೊಟ್ಟಿದ್ದೀರಿ, ಷೇರು ಹಣ ಕೊಟ್ಟಿದ್ದೀರಿ. ಸಾಲ ಕೊಟ್ಟಿದ್ದೀರಿ ಧನ ಸಹಾಯ ಕೊಟ್ಟಿದ್ದೀರಿ. ಅಲ್ಲಿ ರಿಜಿಸ್ಟ್ರಾರ್ ಡೆಪ್ಯುಟಿ ರಿಜಿಸ್ಟ್ರಾರ್ ಇದ್ದಾರೆ. ಈ ಕಾರ್ಪೊರೇಷನ್ ಮಾಡಿ ಬೆಂಗಳೂರಿನಲ್ಲಿ ಸೇಲ್ ಡಿಪೋ ತೆಗೆದಿದ್ದೀರಿ. ಅಲ್ಲೆಲ್ಲಾ ನೌಕರರನ್ನು ಇಟ್ಟುಕೊಂಡಿದ್ದೀರಿ. ಅಲ್ಲಿ ಷಾರ್ಟೇಜ್ ಬೇಕಾದಷ್ಟು ಇದೆ, ಇಷ್ಟು ಬೇಜವಾಬ್ದಾರಿ ಯಿಂದ ಇಂತಹ ಕಾರ್ಪೊರೇಷನ್ ಎತಕ್ಕೆ ನಡೆಸುತ್ತೀರಿ ? ತಾವು ಸುವ್ಯವಸ್ಥಿತ ರೀತಿಯಲ್ಲಿ ಮಾಡಿದರೆ ಎಲ್ಲಾ ಕಡೆ ಸರಿಯಾದ ರೀತಿಯಲ್ಲಿ ಹಂಚಲಿಕ್ಕೆ ಅವಕಾಶ ಇದೆ. ಕಾರ್ಪೊರೇಷನ್ ಆಗುವುದಕ್ಕೆ ಮುಂಚೆ ನಾನು ರಾಜ್ಯದ ಮಾರ್ಕೆಟಿಂಗ್ ಫೆಡರೇಷನ್ನಿನ ಅಧ್ಯಕ್ಷನಾಗಿದ್ದಾಗ, ಎಂ.ವಿ. ಕೃಷ್ಣಪ್ಪನವರು ಮಂತ್ರಿಗಳಾಗಿದ್ದರು, ಹೆಗ್ಗಡೆಯವರು ಇದ್ದರು. ಆಗ ಹೈದರಾಬಾದ್‌ನಿಂದ ಪ್ರಕ್ಯೂರ್ ಮಾಡಬೇಕೆಂದು ಡೈರೆಕ್ಷನ್ ಕೊಟ್ಟಾಗ, ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಇನ್ನು ಕೆಲವು ಅಧಿಕಾರಿಗಳು ಹೈದರಾಬಾದ್‌ಗೆ ಹೋಗಿ ರಾಜ್ಯ ಮಾರಾಟ ಫೆಡರೇಷನ್‌ನಿಂದ ಅಕ್ಕಿ ಖರೀದಿ ಮಾಡಿಕೊಂಡು ಬಂದು ಎಲ್ಲಾ ಕಡೆ ಕೊಡುವುದು ನಡೆಯಿತು. ಈಗ ಇದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್, ಜಿಲ್ಲಾಧಿಕಾರಿ, ಅಲ್ಲಿ ಒಬ್ಬ ಗೆಜೆಟೆಡ್ ಅಧಿಕಾರಿ ಇಲ್ಲಿ ಒಬ್ಬ ಗೆಜೆಟೆಡ್ ಅಧಿಕಾರಿ ಎಂದು ಎತಕ್ಕೆ ಮಾಡುತ್ತೀರಿ. ಇದರ ಬಗ್ಗೆ ತಾವು ಎಕ್ಸಾಮಿನ್ ಮಾಡಬೇಕಾಗಿದೆ. ತಾವು ಕಾರ್ಪೊರೇಷನ್ ಮಾಡಿ, ರಾಜ್ಯದ ಹಣವನ್ನು ಅದರಲ್ಲಿ ತೊಡಗಿಸಿ, ಅದರ ಮೂಲಕ ರೈತರಿಗೆ ಒಳ್ಳೆಯ ಒಂದು ಸದವಕಾಶ ಒದಗಿಸಿ ಕೊಡಬೇಕೆ ಹೊರತು, ಹಣ ಲಾಸ್ ಮಾಡುವಂಥದ್ದು ಸರಿಯಲ್ಲ. ಪ್ರತಿ ಯೊಂದು ತಾಲ್ಲೂಕಿಗೂ. ಷೇರು ಧನ ಕೊಟ್ಟಿದ್ದೀರಿ ಆಹಾರಧಾನ್ಯ ಉತ್ತಮ ರೀತಿಯಲ್ಲಿ ಗ್ರಾಹಕರಿಗೆ ಯೋಗ್ಯ ಬೆಲೆಯಲ್ಲಿ ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಅದಕ್ಕೋಸ್ಕರವೆ ಆಹಾರ ಖಾತೆ ಒಕ್ಕಲುತನ ಖಾತೆ ಇವೆಲ್ಲಾ ಇವೆ, ಆದರೆ ಇವು ಯಾವುವು ಸರಿಯಾಗಿ ಮಾಡುವುದಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕಾರ್ಪೊರೇಷನ್ ನಾಳೆಯಿಂದ ಆದರೂ ಚೆನ್ನಾಗಿ ನಡೆಸಲಿಕ್ಕೆ ಪ್ರಯತ್ನ ಮಾಡಿ. ಇದು ನಿಮ್ಮಿಂದ ಆಗದೇ ಇದ್ದರೆ ಇವನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಿ ತಮ್ಮ ಒಳ್ಳೆಯ ತನವನ್ನು ಪ್ರದರ್ಶನ ಮಾಡಿ. ೧೯೭೭–೮೦ ರಿಂದ ಇಲ್ಲಿಯವರೆಗೆ ೫ ವರ್ಷಗಳ ಕಾಲ ಸ್ಟ್ಯಾಚ್ಯುಟರಿ ಆಡಿಟ್ ಮಾಡಿಸಿಲ್ಲ ಎಂದರೆ ನಾವು ಎಲ್ಲಿ ಪಾವಗಡದ ತೋಳ ಇದೆ, ಎಲ್ಲಿ ಶಿಕಾರಿಪುರದ ತೋಳ ಇದೆ. ಎನ್ನುವುದನ್ನು ಯಾವ ರೀತಿ ನೋಡಬೇಕು ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಗಮನಿಸ ಬೇಕೆಂದು ಹೇಳುತ್ತೇನೆ, ಈಗ ನಾನು ಇದುವರೆಗೂ ಕೊಟ್ಟಿರತಕ್ಕ ಸಲಹೆಗಳನ್ನು ಮಾನ್ಯ ಆಹಾರ ಸಚಿವರು ಗಮನಿಸಿ. ಆಹಾರ ಖಾತೆಯನ್ನು ಸುಭದ್ರ ರೀತಿಯಲ್ಲಿ ಸಾಗಿಸಲಿ ಎಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ. ಆಹಾರ ಖಾತೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈಗಾಗಲೇ ನನ್ನ ಮಿತ್ರರನೇಕರು ಈ ಖಾತೆಯ ಮುಖ್ಯತ್ವವನ್ನು ಒತ್ತಿ ಹೇಳಿದ್ದಾರೆ. ಅದರ ಬಗ್ಗೆ ಅವರು ಏನು ವರದಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಆಹಾರ ಮತ್ತು ನಾಗರೀಕ ಪೂರೈಕೆಯ ಖಾತೆಯ ಉದ್ದೇಶ ಏನು ಎಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಉದ್ದೇಶಗಳ ಬಗ್ಗೆ ನಾವು ಉಲ್ಲೇಖನವನ್ನು ಮಾಡಬೇಕಾಗಿಲ್ಲ. ಆಹಾರ ಧಾನ್ಯಗಳನ್ನು ನಾವು ವಶಪಡಿಸಿಕೊಳ್ಳುವುದು ಮೊದಲನೆಯದು, ಎರಡನೆಯದು ಎಂದರೆ ಅದನ್ನು ವಿತರಣೆ ಮಾಡುವುದು ಮತ್ತು ಮೂರನೆಯದು ಎಂದರೆ ಏನೇನು ವಿಧಿನಿಯಮಗಳಿವೆ ಅದನ್ನು ಜಾರಿಗೆ ತರುವುದು. ನಾನು ಇದರ ಅರ್ಥವನ್ನು ತಿಳಿದುಕೊಂಡಿರುವುದು ಎಂದರೆ, ಮೊದಲನೆಯದನ್ನು ಅದಷ್ಟು ಮಟ್ಟಿಗೆ ಅತ್ಯವಶ್ಯಕ ಸಾಮಾಗ್ರಿಗಳನ್ನು ಕಡಿಮೆ ಬೆಲೆಯಲ್ಲಿ ಜನರಿಗೆ ವಿತರಣೆ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು. ಆದ್ದರಿಂದಲೇ ಈ ಶಾಖೆ ಇರುವುದು, ಹಾಗಾದರೆ ಇದನ್ನು ಮಾಡಬೇಕಾದರೆ ಮೊದಲನೆಯದಾಗಿ, ರೈತರಿಂದ ಧಾನ್ಯವನ್ನು ಸಂಗ್ರಹ ಮಾಡಬೇಕು, ಅನಂತರ ವಿತರಣೆ ಮಾಡಬೇಕು. ಅಷ್ಟು ಮಾತ್ರವಲ್ಲ, ಸಂಗ್ರಹ ಮಾಡುವ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ವೆಂದು ಸೂಚಿಸುತ್ತದೆ.

ಸಂದರ್ಭದಲ್ಲಿ ಬರತಕ್ಕ ತೊಂದರೆಗಳು ಅಥವಾ ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಬರತಕ್ಕ ತೊಂದರೆಗಳು ಏನಿವೆ ಅವನ್ನು ತಪ್ಪಿಸಿ ನಮ್ಮ ಕಾನೂನು ಬಲವನ್ನು ಉಪಯೋಗಿಸಿ ಬ್ಲಾಕ್ ಮಾರ್ಕೆಟ್ ಮಾಡುವವರನ್ನು ಹಿಡಿದು, ಸದೆಬಡಿದು ಜನರಿಗೆ ಕಡಿಮೆ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದು ತಮ್ಮ ಜವಾಬ್ದಾರಿ. ಇಂಥ ಭಾರೀ ಜವಾಬ್ದಾರಿಯನ್ನು ಮಾನ್ಯ ಬಸವಣ್ಣಪ್ಪನವರು ಹೊತ್ತಿದ್ದಾರೆ. ಅವರು ಸಣ್ಣಗಿರುವುದರಿಂದ ಇಷ್ಟು ದೊಡ್ಡ ಜವಾಬ್ದಾರಿಯನ್ನು ಏತಕ್ಕೆ ಹೊತ್ತು ಕೊಂಡರೋ ಎಂದು ನನಗನಿಸುತ್ತದೆ. ಆದರೂ ಅವರು ಹೊತ್ತುಕೊಂಡಿರುವುದಕ್ಕೆ ಸಂತೋಷ. ಆದರೆ ಈಗ ಈ ಸರ್ಕಾರ ಬಂದಮೇಲೆ ಏನಾಗಿದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಮಾನ್ಯ ಬಂಗಾರಪ್ಪ ನವರು ಕೂಲಂಕಷವಾಗಿ ಹೇಳಿದ್ದಾರೆ. ಮತ್ತೊಮ್ಮೆ ನಾನು ಅದನ್ನೇ ಹೇಳುವುದಕ್ಕೆ ಹೋಗು ವುದಿಲ್ಲ.

ಈಗ ಮೊದಲನೆಯದಾಗಿ, ವಿತರಣೆಯನ್ನು ತೆಗೆದುಕೊಳ್ಳೋಣ. ಸರ್ಕಾರದವರು ತಮ್ಮ ವರದಿಯಲ್ಲೇ ಕಡಿಮೆ ಬೆಲೆಗೆ ಅವಶ್ಯಕ ಸಾಮಗ್ರಿಗಳನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರ ಪ್ರಕಾರ ನಡೆದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಸಾಧ್ಯವಾಗಿದೆಯೋ ಎಂಬ ಪ್ರಶ್ನೆ ಯನ್ನು ಹಾಕಿದರೆ ಅದು ಆಗಿಲ್ಲವೆಂಬ ಅಭಿಪ್ರಾಯವನ್ನು ತಾವೇ ಸೂಚಿಸಿದ್ದೀರಿ. ತಾವು ಅನೇಕ ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಅದನ್ನು ನಾನೂ ಕೂಡ ನೋಡಿದ್ದೇನೆ. ನೀವು ಏನು ಸಂಗ್ರಹ ಮಾಡಿದ್ದೀರಿ ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಆದರೆ ಹೇಳಿಕೆಯಲ್ಲಿ ಏನು ಹೇಳಿದ್ದೀರೆಂದರೆ "ನಾವು ಜನತಾ ಪಕ್ಷದವರು ಅಧಿಕಾರಕ್ಕೆ ಬಂದಮೇಲೆ ಖಂಡಿತವಾಗಿಯೂ ಈ ಬೆಲೆಗಳನ್ನು ಕಡಿಮೆ ಮಾಡುವ ಜವಾಬ್ದಾರಿ ನಮ್ಮದು, ನಾವು ಇದನ್ನು ಮಾಡಿಯೇ ಮಾಡುತ್ತೇವೆ ಮತ್ತು ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತೇವೆ" ಎನ್ನುವ ವಿಚಾರವನ್ನು ತಾವು ಬಹಳ ಧೀರೋದ್ಧಾರವಾಗಿ ಹೇಳಿದ್ದೀರಿ. ಇದಕ್ಕೆ ಅವಶ್ಯಕವಾದ ಕಾನೂನನ್ನು ಮಾಡ ಬೇಕಾದರೂ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇಲ್ಲಿ ಬೆಲೆಗಳು ಕಡಿಮೆಯಾಗುವುದಕ್ಕೆ ಬದಲು ಜಾಸ್ತಿಯಾಗುತ್ತಾ ಹೋಗುತ್ತಿವೆ ಈಗಂತೂ ಬೆಲೆಗಳು ಗಗನಕ್ಕೇರಿವೆ. ಕೆಲವರು ಹೇಳಿದರು ಇದು ಕೆಳಕ್ಕೆ ಬರುತ್ತಿದೆ ಎಂದು. ಆದರೆ ನಿಜಸ್ಥಿತಿಯನ್ನು ನೋಡಿದರೆ ಕೆಳಗೆ ಬರುವ ಸೂಚನೆಯೇ ನನಗೆ ಕಾಣುತ್ತಿಲ್ಲ. ತಮಗೆ ಗೊತ್ತಿರುವಂತೆ ಸೋವಿಯತ್ ಯೂನಿಯನ್‌ನಲ್ಲಿ ಅಮೆರಿಕದಲ್ಲಿ ಬಾಹ್ಯಾಕಾಶಕ್ಕೆ ಮನುಷ್ಯನನ್ನು ಕಳುಹಿಸಿ ಅನಂತರ ಸ್ಪುಟ್ನಿಕನ್ನು ಕಳುಹಿಸಿದರು. ಅದು ಬಾಹ್ಯಾಕಾಶವನ್ನೆಲ್ಲಾ ಸುತ್ತಿಕೊಂಡು ಮತ್ತೆ ಕೆಳಕ್ಕೆ ಬರುತ್ತದೆ. ಆದರೆ ನಿಮ್ಮ ಬೆಲೆಗಳು ಬಾಹ್ಯಾಕಾಶಕ್ಕೂ ಮೇಲೆ ಹಾರಿ ಹೋಗಿವೆ. ಕೆಳಕ್ಕೆ ಬರುವ ಪ್ರಶ್ನೆಯೇ ಇಲ್ಲವೆಂದು ನಾನು ಹೇಳ ಬೇಕಾಗಿದೆ. ಬೆಲೆಗಳು ಯಾವರೀತಿ ಜಾಸ್ತಿಯಾಗಿವೆ ಎಂಬುದನ್ನು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಇದು ಅಖಿಲ ಭಾರತದ ಚಿತ್ರ, ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ತಾವು ತಮ್ಮ ಅಭಿಪ್ರಾಯವನ್ನು ಹೇಳಬಹುದು. ಇವತ್ತು ನಗರಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆಂದೂ ಇಲ್ಲದಷ್ಟು ಬೆಲೆಗಳು ಜಾಸ್ತಿಯಾಗಿವೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಇದರಲ್ಲಿ ಒಂದೇ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾರ್ಚಿ ೧೯೮೩ರಲ್ಲಿ ಬೆಲೆಗಳು ಎಷ್ಟು ಜಾಸ್ತಿಯಾಗಿವೆ ಎನ್ನುವ ಬಗ್ಗೆ ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್ ತೆಗೆದುಕೊಂಡರೆ ಆಲೂಗೆಡ್ಡೆ ಮಾರ್ಚಿ ೮೩ರಲ್ಲಿ ೧೩೪.೪ ಇದ್ದರೆ ಜೂನ್‌ನಲ್ಲಿ ೨೦೪.೫ಕ್ಕೆ ಏರಿದೆ, ಈರುಳ್ಳಿ ೨೭೫.೨ ಮಾರ್ಚಿಯಲ್ಲಿ ಇದ್ದುದು ೩೨೪ಕ್ಕೆ ಏರಿದೆ. ವನಸ್ಪತಿ ಮಾರ್ಚಿಯಲ್ಲಿ ೨೫೪.೮ ಇದ್ದುದು ಜೂನ್‌ನಲ್ಲಿ ೨೫೮.೧ಕ್ಕೆ ಏರಿದೆ. ಕಡ್ಲೆಕಾಯಿ ಎಣ್ಣೆ ಮಾರ್ಚಿಯಲ್ಲಿ ೨೮೩..೨ ಇದ್ದುದು ಜೂನ್‌ನಲ್ಲಿ ೩೦೪ಕ್ಕೆ ಏರಿದೆ. ಹೀಗೆ ಎಲ್ಲಾ ಬೆಲೆಗಳೂ ಜಾಸ್ತಿಯಾಗುತ್ತಿವೆ. ನಗರಗಳಲ್ಲಿರತಕ್ಕ ಮಧ್ಯಮವರ್ಗದ ಜನರು, ಕಾರ್ಮಿಕರು ಮುಂತಾದ ಜನರು ಯಾರು ಇವುಗಳನ್ನು ಕೊಂಡುಕೊಳ್ಳುತ್ತಿದ್ದಾರೆ ಅವರ ಸೂಚ್ಯಂಕವನ್ನು ತೆಗೆದು ಕೊಂಡರೆ ಇನ್ನೂ ಹೆಚ್ಚಾಗಿದೆ. ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್‌ಗೂ ಬಳಕೆದಾರರ ಪ್ರೈಸ್ ಇಂಡೆಕ್ಸ್‌ಗೂ ಹೋಲಿಕೆಯನ್ನು ಮಾಡಿದರೆ ಗೊತ್ತಾಗುತ್ತದೆ. ಬಳಕೆದಾರರ ಪ್ರೈಸ್ ಇಂಡೆಕ್ಸ್ ತಮಗೇ ಗೊತ್ತಿದೆ. ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್ ೩೦೦ ಇದ್ದರೆ ಕನ್‌ಸ್ಯೂಮರ್ಸ್ ಪ್ರೈಸ್ ಇಂಡೆಕ್ಸ್ ೫೦೦ ಇರುತ್ತದೆ. ಇವತ್ತು ಆಲ್ ಇಂಡಿಯ ಪ್ರೈಸ್ ಇಂಡೆಕ್ಸ್ ತೆಗೆದುಕೊಂಡರೆ ೪೬೨ ಮಾರ್ಚಿ ''೨ರಲ್ಲಿ ಇದ್ದುದು ಮೇ ೮೩ಕ್ಕೆ ೫೨೧ ಆಗಿದೆ. ಎಂದರೆ ೧೨.೮ ಪರ್ಸೆಂಟ್ ಒಂದು ವರ್ಷ ದಲ್ಲಿ ಜಾಸ್ತಿಯಾಗಿದೆ. ಇದೇ ಚಿತ್ರವನ್ನೂ ಬೆಂಗಳೂರು ನಗರದಲ್ಲಿ ತೆಗೆದುಕೊಂಡರೆ ಇನ್ನೂ ಜಾಸ್ತಿ ಯಾಗಿದೆ. ಇಲ್ಲಿ ೫೪೩ ಅಂದರೆ ೧೫ ಪರ್ಸೆಂಟ್ ಜಾಸ್ತಿಯಾಗಿದೆ. ಸುಮಾರು ೧೫–೨೦ ಪರ್ಸೆಂಟ್ ಜಾಸ್ತಿಯಾಗಿದೆ ಎಂಬುದನ್ನು ಸರ್ಕಾರದ ಅಂಕಿಅಂಶಗಳಿಂದಲೇ ತಿಳಿದುಕೊಳ್ಳಬಹುದು. ಇದು ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ಇಂಡಿಯಾ ದೇಶದಲ್ಲೇ ಅತ್ಯಂತ ದುಬಾರಿ ಜೀವನ ಎಂದರೆ ನಮ್ಮ ಬೆಂಗಳೂರು ನಗರ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದು ತಮಗೂ ಗೊತ್ತಿರ

ಬಹುದು. ಅಂದಮೇಲೆ ಇದನ್ನು ತಡೆಗಟ್ಟುವ ಜವಾಬ್ದಾರಿ ತಮಗೆ ಇದೆ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ನಾನು ವೈಯಕ್ತಿಕವಾಗಿ ಟೀಕೆ ಮಾಡುತ್ತಿದ್ದೇನೆಂದು ಯಾರೂ ತಪ್ಪು ತಿಳಿದು ಕೊಳ್ಳಬಾರದು. ಈ ಸರ್ಕಾರ ಈ ದಿಸೆಯಲ್ಲಿ ಸಂಪೂರ್ಣವಾಗಿ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏತಕ್ಕೆ ವಿಫಲವಾಗಿದೆ ಎಂದರೆ ಈ ಬೆಲೆಗಳು ಏರಿದ್ದೇ ಕಾರಣ ವೆಂದು ಹೇಳಬಹುದು. ನಾವು ರೈತರಿಂದ ಸಂಗ್ರಹ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ತಾವು ಹೇಳಬಹುದು. ನಮ್ಮ ಕರ್ನಾಟಕ ರಾಜ್ಯಕ್ಕೆ ೨೫ ಸಾವಿರ ಟನ್‌ನಷ್ಟು ಆಹಾರಧಾನ್ಯದ ಬೇಡಿಕೆ ಇದೆ. ಇಂಥ ಕಡೆ ನಾವು ಕೇಂದ್ರ ಸರ್ಕಾರವನ್ನು ೪೦ ಸಾವಿರ ಟನ್ ಕೇಳಿದೆವು, ಆದರೆ ಅವರು ಕೇವಲ ೧೫ ಸಾವಿರ ಟನ್ ಮಾತ್ರ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಎಂದರೆ ಬೆಲೆಗಳು ಏರುವುದಕ್ಕೆ ಇಂದಿರಾಗಾಂಧಿ ಸರ್ಕಾರವೇ ಕಾರಣ. ಕೇಂದ್ರ ಸರ್ಕಾರ ಕೊಡಲಿಲ್ಲ, ಆದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ತಾವು ಹೇಳಬಹುದು. ಈ ವಾದ ಸರಿಯಲ್ಲವೆಂದು ನನಗನಿಸು ತ್ತದೆ. ಏಕೆಂದರೆ, ಮೊದಲನೆಯದಾಗಿ ನೀವು ರಾಜ್ಯದಲ್ಲಿ ಏನು ಸಂಗ್ರಹ ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ ಎಂಬುದು ಈ ವರದಿಯಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ರೈತರಿಂದ ಏನು ಸಂಗ್ರಹ ಮಾಡುತ್ತೇವೆಂದು ತಾವು ಹೇಳಿದ್ದೀರಿ ಅದರ ಬಗ್ಗೆ ಸ್ಟೇಟ್‌ಮೆಂಟ್ ೧ರಲ್ಲಿ ನೋಡಿದರೆ ಗೊತ್ತಾಗುತ್ತದೆ. ತಾವು ಸಂಗ್ರಹ ಮಾಡಿರುವುದು ೫೦ ಪರ್ಸೆಂಟ್‌ಗಿಂತ ಕಡಿಮೆ. ಅದೇರೀತಿ ಕೆ.ಎಸ್.ಸಿ.ಎಫ್.ಸಿ.ಯಿಂದ ಕೂಡ ೫೦ ಪರ್ಸೆಂಟ್ ಲೆವಿಯನ್ನು ರೈತರಿಂದ ಪಡೆಯದಿದ್ದರೂ ನೀವು ಏತಕ್ಕೆ ಬೇರೆಯವರ ಕಡೆ ಕೈ ತೋರಿಸುತ್ತೀರಿ? ನಮ್ಮ ರಾಜ್ಯದಲ್ಲಿ ಕೊರತೆ ಇರುವುದರಿಂದ ನಾವು ಕೇಂದ್ರದಿಂದ ತರಬೇಕಾಗುತ್ತದೆಂದು ಹೇಳಬಹುದು. ನಾನು ಇದರ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನೀವು ನಿಮ್ಮ ಕರ್ತವ್ಯವನ್ನು ಮಾಡಿಕೊಳ್ಳದೆ ವಿಫಲರಾಗಿ ಕೇಂದ್ರದ ಕಡೆ ಕೈ ತೋರಿಸುವುದು ಸರಿಯಲ್ಲ. ಈ ರಾಜ್ಯದಲ್ಲಿ ಸಂಗ್ರಹಣೆ ವಿಚಾರದಲ್ಲಿ ಕೇವಲ ಅಸಮರ್ಪಕತೆ ಮಾತ್ರವಲ್ಲ, ತಪ್ಪುದಾರಿಯನ್ನೂ ಕೂಡ ಹಿಡಿದಿದ್ದೀರಿ ಎಂದು ನನ್ನ ಅಭಿಪ್ರಾಯ. ಅಷ್ಟೇ ಅಲ್ಲ ಪ್ರೊಕ್ಯೂರ್‌ಮೆಂಟ್ ಬಗ್ಗೆಯೂ ಬಹಳ ಅಗತ್ಯವಾಗಿ ಆಗಬೇಕಾಗಿದೆ. ಈಗ ಬ್ಲಾಕ್ ಮಾರ್ಕೆಟ್, ಸ್ಮಗಲಿಂಗ್ ಆಫ್ ಫುಡ್ ಗ್ರೇನ್ಸ್ ಆಗುತ್ತಿದೆ. ಇದರಲ್ಲಿ ಏನು ಆಗಿದೆ ಎನ್ನು ವುದನ್ನು ಬಹಳ ಚೆನ್ನಾಗಿ ಈ ಲೇಖನದಲ್ಲಿ ಹೇಳಿದ್ದಾರೆ. ಇದರಲ್ಲಿರುವ ಎರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಅದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ. ಮಾನ್ಯ ಮಂತ್ರಿಗಳು ಶಿವಮೊಗ್ಗ ದಲ್ಲಿ ಹೋಗಿ ಮಾತನಾಡಿ ಸ್ಮಗಲಿಂಗ್ ಆಫ್ ಫುಡ್ ಗ್ರೇನ್ಸ್ ಇದನ್ನು ತಡೆಗಟ್ಟಬೇಕು, ರೈಸ್ ಮಿಲ್ ಗಳಲ್ಲಿ ದಾಸ್ತಾನು ಮಾಡಿರತಕ್ಕಂಥದ್ದನ್ನು ಸೀಸ್ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಅಲ್ಲಿ ಹೇಳಿದ್ದಾರೆ. ದೊಡ್ಡ ದೊಡ್ಡ ಮಾತನ್ನು ಹೇಳಿದರು, ಆದರೆ ನಿಮ್ಮ ಕೈಗೆ ಸಿಕ್ಕಿದ್ದು ಬಹಳ ಕಡಿಮೆ. ಕೈ ಹಾಕಿದ್ದೀರಿ, ನನಗೆ ಗೊತ್ತಿಲ್ಲ, ಇಲ್ಲಿ ಬಂದವರು ಕೆಲವರು ಹೇಳಿದರು ಬೇಕಾದವರನ್ನು ಬಿಟ್ಟರು, ಬೇಡವಾದವರನ್ನು ಇಟ್ಟುಕೊಂಡರು ಎನ್ನುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಹಾಗೇನಾದರೂ ಇದ್ದರೆ ತಾವು ಇದಕ್ಕೆ ಉತ್ತರವನ್ನು ಕೊಡಬೇಕು. ಈ ಸಮಸ್ಯೆಯ ಬಗ್ಗೆ ಖಂಡಿತವಾಗಿಯೂ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಈ ಅನುಮಾನ ಬರಲಿಕ್ಕೆ ಕಾರಣ ವೇನೆಂದರೆ ನಿಮ್ಮ ಪ್ರೊಕ್ಯೂರ್‌ಮೆಂಟ್ ಸರಿಯಾಗಿ ಆಗಿಲ್ಲದಿರುವುದು.

> "According to a report, the traders of shimoga are still smuggling rice or paddy purchased in and around Hanagal to Kerals, The ploy that they employ to continue this illicit trade is that the purchase is shown as being made in Maharastra, by getting fake bills, reportedly printed at Belgaum in Marathi and the route shown is to Kerala *via* Karnataka. As such the levy or order is not operative in this case. This seemed to be the most recent method......

ಈ ರೀತಿ ಮಾಡುತ್ತಾ ಇದ್ದಾರೆ, ಇದನ್ನು ತಡೆಗಟ್ಟುವುದಕ್ಕೆ ತಾವು ಏನು ಮಾಡಿದ್ದೀರಿ.

> 'Some of the other methods employed are, rice purchased in this district is shown to have been purchased in Chitradurga district and routed to Kerala *via* Shimoga district .....

ಶಿವಮೊಗ್ಗದಲ್ಲಿ ತೆಗೆದುಕೊಂಡು ಕೇರಳಕ್ಕೆ ಕಳುಹಿಸಿಕೊಡುತ್ತಿದ್ದಾರೆ ಕರ್ನಾಟಕದ ಮೂಲಕ ಎಂದು ಈ ರೀತಿ ಪತ್ರಿಕೆಯಲ್ಲಿ ವರದಿಯಾಗಿದೆ. ನಿಮ್ಮ ವಿಜಿಲೆನ್ಸ್ ಸ್ಕ್ವಾಡ್‌ನವರು ಈ ಬಗ್ಗೆ ಏನು ಹೇಳುತ್ತಾರೆ? ೨೫೦ ಜನ ವರ್ತಕರಲ್ಲಿ. ಸುಮಾರು ೫೦ ಜನ ಸ್ಮಗಲರ್ಸ್ ಮಾಡಿದ್ದುದು ಸುಮಾರು ೧೧ ಕೋಟಿ ರೂಪಾಯಿಗಳಷ್ಟು ಅಕ್ಕಿ ಕಣ್ಣಾನೂರಿಗೆ ಹೋಗುತ್ತಾ ಇದೆ ಎಂದು ಹೇಳಿದರೆ, ಈ ಹನ್ನೊಂದು ಕೋಟಿ ರೂಪಾಯಿಗಳಷ್ಟು ಅಕ್ಕಿ ಹೇಗೆ ಹೋಯಿತು. ಮತ್ತು ಈ ೫೦ ಜನ ಯಾರು ಟ್ರೇಡರ್ಸ್. ೨೫೦ ಜನರಲ್ಲಿ ಈ ೫೦ ಜನರು ಯಾರೆಂಬುದು ನಿಮಗೆ ಗೊತ್ತಿಲ್ಲವೆ. ಗೊತ್ತಿದ್ದರೂ ಅವರ ಮೇಲೆ ಏನು ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ. ಅವರು ಆಹಾರಧಾನ್ಯಗಳನ್ನು ಕಳುಹಿಸಿಕೊಟ್ಟಿದ್ದಾರೆಂದು ಹೇಳಿ ಉಗ್ರಕ್ರಮ ತೆಗೆದುಕೊಂಡಿಲ್ಲ ಎನ್ನುವ ವಾಖ್ಯಗಳು ಪತ್ರಿಕೆಗಳಲ್ಲಿ ನೋಡಿದ ಮೇಲೆ. ಈ ಸರ್ಕಾರ ಬಂದಮೇಲೆ ಯಾವ ರೀತಿಯ ಕಾರ್ಯವನ್ನು ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಪತ್ರಿಕೆಗಳಲ್ಲಿ ಇದಕ್ಕೆಲ್ಲ ಹಿಂದಿನ ಸರ್ಕಾರವೇ ಕಾರಣವೆಂದು ಹೇಳಿದ್ದಾರೆ. ಮತ್ತೆ ಹಿಂದಿನ ಸರ್ಕಾರದ ಮಂತ್ರಿಗಳ ಹೆಸರನ್ನೂ ಕೂಡ ಮಾಣಿಕ್ಯರಾವ್ ಪಾಟೀಲ್ ಎಂದು ಹೇಳಿದ್ದಾರೆ. ಹಿಂದಿನ ಸರ್ಕಾರ ಮಾಡಿದ್ದರೆ ತಪ್ಪು. ಈ ಸರ್ಕಾರದ ಮಾಡಿದ್ದರೂ ತಪ್ಪು ತಪ್ಪೆ ಎಂದು ಹೇಳೋಣ. ಈ ಸರ್ಕಾರ ಬಂದ ಮೇಲೆ ಅದನ್ನು ತಡೆಗಟ್ಟುವುದಕ್ಕೆ ಏನು ಮಾಡಿದ್ದಾರೆ ಎಂದು ಕೇಳಿದರೆ, ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೋರೇಷನ್‌ನವರು ಈ ವಿಷಯದಲ್ಲಿ ಅಗೋಚರವಾಗಿ ನಡೆದುಕೊಂಡಿದ್ದಾರೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಲ್ಲಿ ಒಂದು ಮುಖ್ಯವಾದ ಅಂಶ ಈ ಪ್ರೊಕ್ಯೂರ್‌ಮೆಂಟ್ ಯಾವಾಗ ಸರಿಯಾಗಿ ಆಗುವುದಿಲ್ಲವೋ, ಪ್ರೊಕ್ಯೂರ್ ಮಾಡಿದ್ದುದು ಯಾವಾಗ ಸ್ಮಗಲಿಂಗ್ ಆಗುತ್ತದೋ. ಮತ್ತು ಬರಬೇಕಾದ್ದು ಬರಲಿಲ್ಲವೋ ಆಗ ಖಂಡಿತವಾಗಿಯೂ ಬೆಲೆಗಳು ಜಾಸ್ತಿಯಾಗುತ್ತವೆ. ಯಾವುದೇ ರೈತರಿಗೆ ಆಗಲೀ ಬೆಳೆದಂಥ ಆಹಾರ ಧಾನ್ಯಗಳನ್ನು ನ್ಯಾಯವಾದಂಥ ಬೆಲೆ ಕೊಡಬೇಕು. ಅದನ್ನು ಒಪ್ಪಿಕೊಳ್ಳೋಣ. ಆದರೆ ನಮ್ಮ ಅಭಿಪ್ರಾಯದಲ್ಲಿ ರೈತನಿಗೆ ನ್ಯಾಯವಾದ ಬೆಲೆಯನ್ನು ಸರ್ಕಾರದವರು ಕೊಡುವುದಕ್ಕೆ ತಯಾರಾಗಿದ್ದಾರೆಯೇ? ಮಾನ್ಯ ಯಡಿಯೂರಪ್ಪನವರು ಹೇಳಿದರು. ಸರ್ಕಾರದವರು ಕೊಯಿಲಾಗುವ ಸಮಯಕ್ಕೆ ಹೋಗಿ ನ್ಯಾಯ ಬೆಲೆಯನ್ನು ರೈತರಿಗೆ ಕೊಟ್ಟರೆ ಅವರು ಬೇರೆಯವರಿಗೆ ಏತಕ್ಕೆ ಕೊಡುತ್ತಾರೆ ಎಂದು ಹೇಳಿದರು. ಅವನು ಬೆಳೆದ ಬೆಳೆಯನ್ನು ನಿಮ್ಮ ಗೋಡೌನ್‌ಗೆ ತಂದು ಇಡುತ್ತಾನೆ. ಈ ಮಧ್ಯಸ್ತರು ತಿನ್ನುವುದಕ್ಕೆ ಅವಕಾಶವಾಗುವುದಿಲ್ಲ. ನೀವು ಕಡಿಮೆ ಬೆಲೆಗೆ ಮಾರಾಟ ಮಾಡಬಹುದು. ಸಮಾಜದಲ್ಲಿ ಎಲ್ಲಿಯತನಕ ಈ ದಳ್ಳಾಳಿಗಳು ಇರುತ್ತಾರೋ ಅಲ್ಲಿಯವರೆಗೆ ಈ ಪರಿಸ್ಥಿತಿ ಇದ್ದೇ ಇರುತ್ತದೆ. ಕಡಿಮೆ ಬೆಲೆಗೆ ಮಾರುವುದಕ್ಕೆ ಈ ಬಂಡವಾಳ ಷಾಹಿ ವ್ಯವಸ್ಥೆಯಿಂದ ಬಿಡಿಸಿಕೊಳ್ಳಬೇಕೆಂದರೆ ಅದು ಅಷ್ಟು ಸುಲಭವಲ್ಲ. ಇದನ್ನು ತಡೆಗಟ್ಟುವುದಕ್ಕೂ ಸಾಧ್ಯವಾಗುವುದಿಲ್ಲ. ಮಧ್ಯವರ್ತಿಗಳನ್ನು ಸಾಯಿಸುವುದಕ್ಕೂ ಆಗುವುದಿಲ್ಲ. ಇವರು ಒಂದು ರೀತಿಯ ಫೆಸಿಸ್ಟ್ರೈಡ್ಸ್ ಇದ್ದ ಹಾಗೆ. ಈ ಮಧ್ಯವರ್ತಿಗಳನ್ನು ತೊಡೆದು ಹಾಕಬೇಕೆಂದರೆ ನೀವೆ ನ್ಯಾಯಬೆಲೆಯನ್ನು ಕೊಟ್ಟು ರೈತರಿಂದ ಕೊಂಡುಕೊಳ್ಳಬೇಕು. ನಂತರ ಅದನ್ನು ಜನರಿಗೆ ಮಾರಾಟ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಎನ್ನುವ ವಿಷಯ ಸ್ಪಷ್ಟವಾಗಿ ಸರ್ಕಾರದ ಅಭಿಪ್ರಾಯದಲ್ಲಿ ಇಲ್ಲ. ನಾವು ರಾಗಿ, ಜೋಳ, ಭತ್ತ ಇದಕ್ಕೆ ಲೆವಿ ಹಾಕುತ್ತೇವೆ ಪ್ರೊಕ್ಯೂರ್ ಮಾಡುತ್ತೇವೆ, ಅದನ್ನು ಜನರಿಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುತ್ತೇವೆಂದು ಹೇಳಿ. ಬೆಲೆಯನ್ನು ಕಡಿಮೆ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲವೆಂದು ಹೇಳಿದರೆ, ಇವರ ಧೋರಣೆ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ತಾವು ಉತ್ತರ ಕೊಡಬೇಕಾದರೆ ಈ ಸಮಸ್ಯೆ ಏನು ಇದೆ, ಇದಕ್ಕೆ ತಮ್ಮ ಧೋರಣೆ ಏನು ಅದನ್ನು ಹೇಳಬೇಕು. ಪಟ್ಟಭದ್ರ ಹಿತಾಸಕ್ತಿಗಳು ಇದರಲ್ಲಿ ರಾಜಕಾರಣವನ್ನು ಅನುಸರಿಸುತ್ತಾರೆ ಅಂಥದ್ದನ್ನು ಬಿಡಿಸಲು. ಅವರ ಮೇಲೆ ಕೈ ಇಡುವಂಥ ಧೈರ್ಯ, ಛಾತಿ, ಎದೆಗಾರಿಕೆ ತಮಗೆ ಬೇಕು. ಅದನ್ನು ಮಾಡದೆ ಇದ್ದರೆ ಬೆಲೆಗಳು ಯಾವುದೇ ರೀತಿಯಲ್ಲಿ ಕಡಿಮೆಯಾಗುವುದಿಲ್ಲ. ಜನತಾ ಸರ್ಕಾರ ಬಂದಮೇಲೆ ಈ ರೀತಿ ಬೆಲೆಗಳು ಜಾಸ್ತಿಯಾಯಿತೆಂದು ಜನರು ತಮಗೆ ಶಾಪ ಹಾಕುತ್ತಾರೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನೊಂದು ಮಾತನ್ನು ಹೇಳಬೇಕೆಂದರೆ ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ ರೈತರ ಮುಖಂಡರು ವಿರೋಧ ಪಕ್ಷದ ನಾಯಕರು ಇರಲಿಲ್ಲ ನಾನು ಇದ್ದೆ. ಅಲ್ಲಿ ಈ ಸಮಸ್ಯೆ ಅಲ್ಲಿ ಬಂತು. ಎಲ್ಲರೂ ಮಾತನಾಡಿದರು. ಅದಕ್ಕೆ ಉತ್ತರ ಬಂದುದು ಏನೆಂದರೆ ಅಭಿಪ್ರಾಯವೇನೋ ಒಳ್ಳೆಯದು. ಆದರೆ ವಾಸ್ತವಿಕವಾಗಿ ಅದನ್ನು ಜಾರಿಗೆ ತರಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಏತಕ್ಕೆ ತರಲಿಕ್ಕೆ ಆಗುವುದಿಲ್ಲ, ಇದಕ್ಕೆ ಏನು ಕಾರಣ ಎನ್ನುವುದು ಅರ್ಥವಾಗುವುದಿಲ್ಲ. ಹಣದ ಕೊರತೆಯೇ. ಹಣದ ಕೊರತೆ ಇದ್ದರೆ ಯಾವರೀತಿ

ಯಾಗಿಯಾದರೂ ಹಣವನ್ನು ತುಂಬುವುದಾಗುತ್ತದೆ. ಮೂರುವರೆ ಕೋಟಿ ಜನರಿಗೆ ಅನುಕೂಲ ವಾಗುವುದಾದರೆ ಖಂಡಿತವಾಗಿಯೂ ಹಣವನ್ನು ಒದಗಿಸತಕ್ಕಂಥ ಜವಾಬ್ದಾರಿ ಜನತೆಯ ಮೇಲೆ ಇರುತ್ತದೆ. ಹಣದ ಕೊರತೆಯನು ತುಂಬ ಬೇಕಾದರೆ ಪೊಲಿಟಿಕಲ್ ವಿಲ್ ಬೇಕು. ಪೊಲಿಟಿಕಲ್ ವಿಲ್' ಇದ್ದರೆ ಮಾತ್ರ ಇದು ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ನಗರ ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಕಡೆಯಲ್ಲಿಯೂ ನ್ಯಾಯಬೆಲೆ ಅಂಗಡಿಗಳನ್ನು ತೆಗೆಯುತ್ತೇವೆಂದು ಹೇಳಿ ಬರೀ ೩೧ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಇನ್‌ಫಾರಮಲ್ ರೇಷನಿಂಗ್ ಡಿಪೋಗಳನ್ನು ತೆಗೆದಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ರೇಷನಿಂಗ್ ಡಿಪೋಗಳನ್ನು ತಾವು ತೆಗೆಯ ಬೇಕು. ಮತ್ತು ಅಲ್ಲಿಗೆ ಬೇಕಾದಂಥ ಸಾಮಗ್ರಿಗಳನ್ನು ಸರಿಯಾಗಿ ಒದಗಿಸಬೇಕು. ಫುಡ್ ಡಿಸ್ಟ್ರಿಬ್ಯೂಷನ್‌ಗೆ ವೈಡ್ ನೆಟ್‌ವರ್ಕ್ ಇರಬೇಕು. ಕೇರಳದಲ್ಲಿ ಇದು ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಹಿಂದೆ ಅಚ್ಯುತಮೆನನ್ ಸರ್ಕಾರ ಇತ್ತು, ನಾಯನಾರ್ ಬಂದರು ಎಂದು ಕಾಣುತ್ತದೆ. ಅವರೆಲ್ಲರೂ ಬಂದಾಗ ಬಹಳ ಚೆನ್ನಾಗಿ ಫುಡ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಇತ್ತು. ತಮಗೆ ಗೊತ್ತಿರಬಹುದು ಕೇರಳದಲ್ಲಿ ಮಾಯೋಲಿ ಸ್ಟೋರ್ಸ್ ಎಂದು ಮಾಡಿದ್ದರು. ಈವತ್ತು ಅಲ್ಲಿ ಕಡಿಮೆ ಬೆಲೆಯಲ್ಲಿ ನ್ಯಾಯ ಬೆಲೆಯಲ್ಲಿ ಸಾಮಗ್ರಿಗಳನ್ನು ಒದಗಿಸುತ್ತಿದ್ದಾರೆ, ಸೋಪು ಎಣ್ಣೆ ಎಲ್ಲಾ ಪದಾರ್ಥಗಳೂ ಕೂಡ ಅಲ್ಲಿ ಸಿಗುತ್ತವೆ. ಅಲ್ಲಿ ಈ ರೀತಿ ಒಂದು ಅನುಕೂಲವನ್ನು ಮಾಡಲಿಕ್ಕೆ ಸಾಧ್ಯವಾದುದು ಕರ್ನಾಟಕದಲ್ಲಿ ಏತಕ್ಕೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ? ಇದಕ್ಕೆ ಮುಖ್ಯವಾಗಿ ಪೊಲಿಟಿಕಲ್ ವಿಲ್ ಬೇಕು. ನಾನು ಕೇಳುತ್ತೇನೆ ೨.೫೦೦ ಜನಕ್ಕೆ ಒಂದು ಫೇರ್ ಪ್ರೈಸ್ ಷಾಪ್ ಇದ್ದರೆ ಅದು ಅಕ್ಷಮ್ಯ ಅಪರಾಧವೆಂದು ಕೇಂದ್ರ ಸರ್ಕಾರದವರೇ ಹೇಳಿದ್ದಾರೆ. ಎರಡು ಸಾವಿರಕ್ಕೆ ಒಂದು ಇರಬೇಕೆಂದು ಹೇಳಿದ್ದಾರೆ. ಭಗವತ್ ಜಾ ಅಜಾದ್ ಅವರು ಏನು ಎರಡು ಸಾವಿರಕ್ಕೆ ಒಂದು ಫೇರ್ ಪ್ರೈಸ್ ಷಾಪ್ ಇರಬೇಕೆಂದು ಹೇಳಿದ್ದಾರೆ. ಅನೇಕ ರಾಜ್ಯಗಳಲ್ಲಿ ಇದನ್ನು ಮಾಡಿಲ್ಲವೆಂದು ಡೆಲ್ಲಿಯಲ್ಲಿ ನಡೆದಂಥ ಸಭೆಯಲ್ಲಿ ಹೇಳಿದ್ದಾರೆ. ಅವರು ಹೇಳಿದಮೇಲೆ ತಾವು ಏತಕ್ಕೆ ಇದನ್ನು ಮಾಡಲಿಲ್ಲ. ತಾವು ಈಗಲಾದರೂ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವನ್ನು ಹೇಳುವುದೇನೆಂದರೆ ಫೇರ್‌ಪ್ರೈಸ್ ಡಿಪೋ ಮಾಡಿದರೆ ಸಾಕಾಗುವುದಿಲ್ಲ. ಅದೂ ಸಹ ಬ್ಲಾಕ್ ಮಾರ್ಕೆಟ್ ನಡೆಯದ ಹಾಗೆ ನೋಡಿಕೊಳ್ಳಬೇಕು. ಅಲ್ಲಿ ಆ ರೀತಿಯಾಗಿ ನಡಿಯುವಂತೆ ನೋಡಿಕೊಳ್ಳಲು ಸರ್ಕಾರದವರು ವಾರ್ಡ್ಸ್‌ಗಳ ಆಧಾರದ ಮೇಲೆ ಸಮಿತಿಗಳನ್ನು ಮಾಡಬೇಕು. ಕಾಫಿ ಕುಡಿದು ಬರುವಂತಹ ಸಮಿತಿಗಳನ್ನು ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಸರ್ವ ಪಕ್ಷಗಳೂ ಸೇರಿ ಸಮಿತಿಯನ್ನು ಮಾಡಬೇಕು. ಬೆಂಗಳೂರು ನಗರದಲ್ಲಿ ಶಾಸಕ ಪಕ್ಷದವರನ್ನು ಕರೆದು ಮಾತನಾಡಿ ಎಂಟು ಕಡೆ ವಾರ್ಡ್ಸ್‌ಗಳನ್ನು ಮಾಡುತ್ತೇವೆಂದು ಹೇಳಿದರು. ಅದು ಏನಾಯಿತೋ ಗೊತ್ತಿಲ್ಲ. ನಮ್ಮ ಶಾಸಕ ಮಿತ್ರರು ಹೇಳಿದರು, ಬೇರೆ ಬೇರೆ ಕಡೆಯ ಜನರನ್ನು ಸೇರಿಸಿ ಒಳ್ಳೆಯ ರೀತಿಯಲ್ಲಿ ಅಧಿಕಾರಗಳನ್ನು ಕೊಟ್ಟು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸೂಪರ್‌ವಿಷನ್ ಮಾಡುವಂತೆ ಮಾಡಿದರೆ ಸ್ವಲ್ಪಮಟ್ಟಿಗೆ ಆಹಾರ ಧಾನ್ಯ ಬ್ಲಾಕ್ ಮಾರ್ಕೆಟ್ ಆಗತಕ್ಕಂಥದ್ದನ್ನು ತಡೆಗಟ್ಟಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

೫-೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಇಲ್ಲಿ ನಮಗೆ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್ ಲಿಮಿಟೆಡ್‌ಗೆ ಸಂಬಂಧಪಟ್ಟ ೧೯೭೭-೭೮ನೇ ಸಾಲಿನ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ. ೧೯೭೭-೭೮ನೇ ಸಾಲಿನ ವರದಿಯನ್ನು ೫ ವರ್ಷಗಳ ನಂತರ ನಮಗೆ ಕೊಡಲು ಕಾರಣವೇನು ? ಅವರು ೫ ವರ್ಷಗಳವರೆಗೆ ಕುಂಭಕರ್ಣನ ರೀತಿಯಲ್ಲಿ ನಿದ್ದೆ ಮಾಡುತ್ತಿದ್ದರೇನು ? ೧೯೮೧-೮೨ರ ವಾರ್ಷಿಕ ವರದಿಯನ್ನು ನಮಗೆ ಏತಕ್ಕೆ ಕೊಡಲಿಲ್ಲ ? ಈ ವಾರ್ಷಿಕ ವರದಿಯ ಬಗ್ಗೆ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಆದರೆ ಇಷ್ಟೊಂದು ನಿಧಾನ ಏತಕ್ಕೆ ಮಾಡುತ್ತಿದ್ದಾರೆ ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಮಾನ್ಯ ಮಂತ್ರಿಗಳು ತರಾಟೆಗೆ ತೆಗೆದುಕೊಳ್ಳಬೇಕು. ಈಗ ಕೊಟ್ಟಿರುವ ವಾರ್ಷಿಕ ವರದಿ ಬಗ್ಗೆ ಒಂದೇ ಒಂದು ವಿಷಯವನ್ನ ಮಾತ್ರ ಹೇಳಿದರೆ ಸಾಕು ಎಂದು ಕಾಣುತ್ತದೆ.

In the Fifth Annual Report 1977-78 of the Karnataka Food and Civil Supplies Corporation Ltd., *i. e.*, in the Auditors

report to the Members of the K. F. CCS Corporation Limited, they have said :

"The Company, while continuing the purchase and sale of certain items of essential commodities at the instance of the Government of Karnataka with the object of controlling their prices in the open market, regarding which we had opined that the object for which the Company is established do not empower the company to carry on the purchase and sale of essential commodities with the object of controlling their prices in the open market, has incurred losses in furtherance to the loss incurred during the previous year, on this account. The total loss as reported to us and for which the company has lodged a claim for reimbursement with the Government of Karnataka amounting to Rs. 33,34,973 upto the date of the said Balance Sheet has not been brought into account. However, as the books of account maintained by the Company do not admit us to ascertain the accuracy or inaccuracy of the same, we have been unable to satisfy ourselves s to its accuracy."

ಇಲ್ಲಿ ಬೇಕಾದಷ್ಟು ನುಂಗಿ ಹಾಕಿದ್ದಾರೆ, ಬೇಕಾದಷ್ಟು ನಷ್ಟವಾಗಿದೆ ಎಂದು ಆಡಿಟರ್ ಅವರು ಬಹಳ ದುಃಖದಿಂದ ಮತ್ತು ಬಹಳ ಪಶ್ಚಾತ್ತಾಪದಿಂದ ಹೇಳಿಕೊಂಡಿದ್ದಾರೆ. ಇಂತಹ ಒಂದು ಆಡಿಟ್ ರಿಪೋರ್ಟ್ ನೋಡಿದಾಗ ಈ ಕಾರ್ಪೊರೇಷನ್ ಇದ್ದೂ ಏನೂ ಪ್ರಯೋಜನವಿಲ್ಲವೆಂದು ಹೇಳಬಹುದು ನಾವು ಇಂತಹ ಒಂದು ಕಾರ್ಪೊರೇಷನನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ ? ಇಲ್ಲಿ ಕೆಲವು ಹೆಗ್ಗಣಗಳಿವೆ ಆದ್ದರಿಂದ ಈ ರೀತಿ ಆಗಿದೆ. ಇದನ್ನು ಸರಿಯಾಗಿ ನಡೆಸುವಂತಿದ್ದರೆ ನಡೆಸಿ, ಇಲ್ಲದಿದ್ದರೆ ಮುಚ್ಚಿಸಿ ಬಿಡಿ. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಮಾಡುವಂತಹ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಆದರೆ ಈ ಸದಸ್ಯರನ್ನು ಸರಿಯಾಗಿ ಮಾಡದಿರಲು ಕಾರಣವೇನು ? ಮುಖ್ಯವಾಗಿ ಇದರ ಬಗ್ಗೆ ತಮಗೆ ಸ್ಪಷ್ಟವಾದ ತಿಳಿವಳಿಕೆ ಇರಬೇಕೆಂದು ಹೇಳುತ್ತೇನೆ.

ಇನ್ನು ಆಹಾರಧಾನ್ಯಗಳನ್ನು ಸಾರ್ವಜನಿಕರಿಗೆ ಯಾವರೀತಿ ಹಂಚಲಾಗುತ್ತಿದೆ ಎಂಬುದನ್ನು ಇದರಲ್ಲಿ ಹೇಳಿದ್ದಾರೆ. ಮಂಗಳೂರು ಸಿಟಿಯಲ್ಲಿ ಒಬ್ಬರಿಗೆ ತಿಂಗಳಿಗೆ ೮ ಕೆ.ಜಿ. ಪ್ರಕಾರ, ಕೆ.ಜಿ.ಎಫ್ ನಲ್ಲಿ ಒಬ್ಬರಿಗೆ ತಿಂಗಳಿಗೆ ೬ ಕೆ.ಜಿ. ಪ್ರಕಾರ, ಬೆಂಗಳೂರು ಸಿಟಿಯಲ್ಲಿ ಒಬ್ಬರಿಗೆ ತಿಂಗಳಿಗೆ ಮೂರೂವರೆ ಕೆ. ಜಿ. ಗಳ ಪ್ರಕಾರ ಹಾಗೂ ಇನ್ನಿತರ ಕಡೆಗಳಲ್ಲಿ ಒಬ್ಬರಿಗೆ ತಿಂಗಳಿಗೆ ೫ ಕೆ. ಜಿ. ಯಿಂದ ೧೫ ಕೆ. ಜಿ. ವರೆಗೆ ಅಕ್ಕಿಯನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಇದೇರೀತಿ ಗೋಧಿ, ಸಕ್ಕರೆ, ರಾಗಿ ಮತ್ತು ಜೋಳವನ್ನು ಸಹ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಇದೆಲ್ಲಾ ಬೋಗಸ್. ಇದರಲ್ಲಿ ಹೇಳಿರುವ ಪ್ರಕಾರ ಎಲ್ಲಿಯೂ ಕೊಡುತ್ತಿಲ್ಲ. Why should bogus things be written in this report ? ಇದರಲ್ಲಿ ಹೇಳಿರುವುದರಲ್ಲಿ ಅರ್ಧ ಭಾಗವನ್ನೂ ಕೂಡ ಕೊಡುವುದಿಲ್ಲ. ನಮ್ಮ ಮನೆಗೆ ತಿಂಗಳಿಗೆ ೨೬ ಕೆ.ಜಿ. ಅಕ್ಕಿ ಕೊಡಬೇಕು. ಆದರೆ ೧೬ ಕೆ. ಜಿ. ಮಾತ್ರ ಕೊಡುತ್ತೇನೆಂದು ಅಂಗಡಿಯವನು ಹೇಳುತ್ತಾನಂತೆ. ಎಂ.ಎಲ್.ಎ. ಆಗಿ ನಾನೇ ಹೋದರೆ ೨೬ ಕೆ. ಜಿ. ಕೊಡಬಹುದೆಂದು ಕಾಣುತ್ತದೆ. ಆದರೆ ನಾನು ಹೋಗಿಲ್ಲ. ಇಲ್ಲಿಯೂ ಸಹ ಕೆಲವು ಕಳ್ಳರು ಸೇರಿಕೊಂಡಿದ್ದಾರೆ. ಇಂತಹ ಕಳ್ಳರಿಗೆ ಉತ್ತೇಜನ ಕೊಡಲಾಗುತ್ತಿದೆ ಎಂದು ಜನರು ಹೇಳುತ್ತಿದ್ದಾರೆ. ಇದಕ್ಕೆ ಉದಾಹರಣೆ ಎಂದರೆ, ಯಶವಂತಪುರದ ನಂಜುಂಡಶೆಟ್ಟರ ವಿಚಾರ ಎಲ್ಲರಿಗೂ ಗೊತ್ತು. ಇವರು ಎಷ್ಟು ಜನರನ್ನು ನುಂಗಿಹಾಕಿದ್ದಾರೋ ಗೊತ್ತಿಯ. ಇವರು ಬ್ಲಾಕ್-ಮಾರ್ಕೆಟ್‌ನಲ್ಲಿ ತೊಡಗಿದ್ದರೂ ಸಹ ಮತ್ತೆ ೩-೪ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ನಡೆಸಲು

ಇವರಿಗೆ ಅನುಮತಿ ಕೊಡಲಾಗುತ್ತಿದೆ ಎಂಬ ಅಪಾದನೆ ಕೂಡ ಕೇಳಿಬರುತ್ತಿದೆ. ಆದರೆ ಇದರ ವಿಚಾರ ನನಗೆ ಸರಿಯಾಗಿ ಗೊತ್ತಿಲ್ಲ. ತಾವೇನಾದರೂ ಶಿಫಾರಸ್ ಮಾಡಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಬೇಕು.

ಚೇರ್‌ಮನ್.—ಅವರ ಹೆಸರೇ ಬ್ಲಾಕ್–ಮಾರ್ಕೆಟ್ ಶೆಟ್ಟರು ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ರೋಲರ್ ಫ್ಲೋರ್ ಮಿಲ್ಸ್ ಬಗ್ಗೆ ಬಂದರೆ, ಒಟ್ಟು ೩೭ ಮಿಲ್‌ಗಳ ಪೈಕಿ ೧೫ ಮಿಲ್‌ಗಳು ಬೆಂಗಳೂರಿನಲ್ಲಿಯೇ ಇವೆ. ಇದರ ಜೊತೆಗೆ ಕ್ರಷಿಂಗ್ ಕೆಪ್ಯಾಸಿಟಿ ತೆಗೆದುಕೊಂಡರೂ ಸಹ ಶೇಕಡಾ ೫೦ ರಷ್ಟು ಕ್ರಷಿಂಗ್ ಬೆಂಗಳೂರಿನಲ್ಲಿಯೇ ಆಗುತ್ತಿದೆ. ಸೀತಾಲಕ್ಷ್ಮಿ ಹಾಲ್ ಫ್ಲೋರ್ ಮಿಲ್‌ನ ಕ್ರಷಿಂಗ್ ಕೆಪಾಸಿಟಿ ೫೦೦೦ ಟನ್‌ಗಳವರೆಗೆ ಇದೆ. ಬೆಂಗಳೂರಿನಲ್ಲಿಯೇ ಇಷ್ಟೊಂದು ರೋಲರ್ ಫ್ಲೋರ್ ಮಿಲ್‌ಗಳು ಏತಕ್ಕೆ ಇರಬೇಕು ? ಇದು ನನಗೆ ಅರ್ಥಗಾಗುವುದಿಲ್ಲ. ಈ ಬಗ್ಗೆ ಕೂಡ ತಾವು ಕೆಲವರಿಗೇ ಫೇವರ್ ಮಾಡುತ್ತಿದ್ದಿರಿ ಎಂಬ ಅಪಾದನೆ ಇದೆ. ಆದ್ದರಿಂದ ತಾವು ಇದಕ್ಕೆಲ್ಲಾ ಅವಕಾಶ ಕೊಡಬಾರದು. ಈ ಮಿಲ್‌ಗಳವರೂ ಕೂಡಾ ಸಿಕ್ಕಾಪಟ್ಟೆ ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೆಂದು ಜನರು ಹೇಳುತ್ತಿದ್ದಾರೆ. ಆದ್ದರಿಂದ ನಿಮ್ಮ ಒಂದು ಫರ್‌ಫಾರ್ಮೆನ್ಸ್ ಸರಿಯಾದ ರೀತಿಯಲ್ಲಿ ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ಮತ್ತು ಇದರಿಂದ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. George Bernard Shaw once said "A man who does not perform speaks; A Man who performs does not speak" ಆದ್ದರಿಂದ ತಾವೂ ಸಹ ಅವರು ಹೇಳಿರುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈ ಆಹಾರ ಇಲಾಖೆಯ ಬೇಡಿಕೆಗಳ ಮೇಲೆ ಕೆಲವು ವಿಚಾರಗಳನ್ನು ಹೇಳಬೇಕೆಂದು ನಾನು ಬಯಸಿದ್ದೇನೆ. ಈ ಆಹಾರ ಇಲಾಖೆಯು ತನ್ನ ಒಂದು ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡನೆ ಮಾಡಿದಾಗ ಯಾವ ಆಹಾರ ನೀತಿಯನ್ನು ಮಂಡನೆ ಮಾಡುತ್ತದೆ ಎಂಬುದನ್ನು ನಾವು ನಿರೀಕ್ಷೆ ಮಾಡುತ್ತೇವೆ. ಆದರೆ ಇಲ್ಲಿ ಆಹಾರವೂ ಇಲ್ಲ, ನೀತಿಯೂ ಇಲ್ಲ. ಈ ಎರಡೂ ಇಲ್ಲದ ಪರಿಸ್ಥಿತಿಗೆ ಈ ಸರ್ಕಾರ ನಮ್ಮನ್ನು ಒಯ್ದಿದೆ. ತಾರೀಖು ೨–೫–೧೯೮೩ ರಂದು ಸನ್ಮಾನ್ಯ ಆಹಾರ ಸಚಿವರು ಈ ಸರ್ಕಾರದ ಆಹಾರ ನೀತಿಯನ್ನು ಇನ್ನು ಕೆಲವೇ ವಾರದೊಳಗೆ ಘೋಷಣೆ ಮಾಡುತ್ತೇವೆ ಮತ್ತು ಇದಕ್ಕೆ ಬೇಕಾದಂಥ ತಯಾರಿಯನ್ನು ಇನ್ನು ಕೆಲವೇ ದಿವಸಗಳೊಳಗಾಗಿ ಮಾಡುತ್ತೇವೆಂದು ಒಂದು ಹೇಳಿಕೆ ಕೊಟ್ಟರು. ಈ ಒಂದು ಘೋಷಣೆ ಬಗ್ಗೆ ನಾವು ನಿರೀಕ್ಷೆ ಮಾಡುತ್ತಿದ್ದೆವು.

SRI M. S. KRISHNAN.—He said "there would be a radical change in the food policy of the present Government ; The present policy would not enable the Government to supply the essential commodities to the weaker sections."

(SRI B. G. BANAKAR in the Chair)

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಹಿಂದೆ ನಮ್ಮ ಸರ್ಕಾರವಿರುವಾಗ ಕೂಡ ಪ್ರತಿವರ್ಷವೂ ಸರ್ಕಾರದ ಆಹಾರ ನೀತಿಯನ್ನು ಕ್ಯಾಬಿನೆಟ್‌ನಲ್ಲಿ ಸ್ವೀಕಾರ ಮಾಡಿ ಅದನ್ನು ಪ್ರಕಟ ಮಾಡಿದ್ದು ಇದೆ. ಆಹಾರ ನೀತಿಯಲ್ಲಿ ಸಾರ್ವಜನಿಕ ವಿತರಣಾ ನೀತಿ ಏನಿದೆ ಬೇರೆಬೇರೆ ಆಹಾರ ಸಾಮಗ್ರಿಗಳ ವಿಚಾರದಲ್ಲಿ ಅಥವಾ ಪ್ರೊಕ್ಯೂರ್‌ಮೆಂಟ್ ಸಪೋರ್ಟ್ ಪ್ರೈಸ್ ವಿಚಾರದಲ್ಲಿ ಸರ್ಕಾರದ ನೀತಿ ಏನಿದೆ ಎಂದು ಕೇಳಿದ ಕೂಡಲೇ ಮಾನ್ಯ ಆಹಾರ ಸಚಿವರು ಇದು ಕೇಂದ್ರಕ್ಕೆ ಸಂಬಂಧಪಟ್ಟ ವಿಚಾರವೆಂದು ಹೇಳಬಹುದು. ಕೇಂದ್ರ ಸರ್ಕಾರದವರು ಯಾವ ಸಪೋರ್ಟ್ ಪ್ರೈಸ್‌ನ್ನು ಕೊಟ್ಟಿದ್ದಾರೆ? ರಾಜ್ಯ ಸರ್ಕಾರ ಕೂಡ ತನ್ನದೇ ಆದಂತಹ ಆಧಾರವನ್ನು ಇಟ್ಟುಕೊಂಡು ಪ್ರತಿವರ್ಷ ತನ್ನದೇ ಆದಂತಹ ಸಪೋರ್ಟ್ ಪ್ರೈಸ್‌ನ ನೀತಿಯನ್ನು ಘೋಷಣೆ ಮಾಡಿದ್ದು ಇದೆ. ಅದರ ಪ್ರಕಾರ ಮಾರ್ಕೆಟ್‌ನಲ್ಲಿ ದರ ಇಳಿದು

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಪೋರ್ಟ್ ಪ್ರೈಸ್‌ನಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡತಕ್ಕಂಥಾದ್ದು ಸಾಮಾನ್ಯವಾಗಿ ನಡೆದುಕೊಂಡು ಬಂದ ನೀತಿ. ಈಗ ಆಹಾರ ಇಲಾಖೆಯಲ್ಲಿ ತಮ್ಮದೇ ಆದ ಒಂದು ವ್ಯವಸ್ಥೆಯಲ್ಲಿ ಮಾಡುತ್ತಿದ್ದೀರಿ, ಪ್ರಮುಖವಾಗಿ ಮಾಡಬೇಕಾದ ಕಾರ್ಯವನ್ನು ತಾವು ನಿಭಾಯಿಸಿಲ್ಲ. ಆಹಾರ ಇಲಾಖೆ ನಡೆಯಬೇಕಾದ ಸೂಚಿತವಾದ ದಾರಿಯನ್ನು ತಾವು ನಿರ್ಧಾರ ಮಾಡಿಲ್ಲ. ನಿಮ್ಮಿಂದ ನಾವು ಏನನ್ನೂ ನಿರೀಕ್ಷೆ ಮಾಡಲಿಕ್ಕೆ ಸಾಧ್ಯವಿಲ್ಲ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕ್ರಾಂತಿಕಾರಕವಾದ ತಮ್ಮ ಆಹಾರ ನೀತಿಯನ್ನು ಪ್ರಕಟಣೆ ಮಾಡುತ್ತೇವೆಂದು ಘೋಷಣೆ ಕೂಡ ಕೊಟ್ಟಿದ್ದೀರಿ. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದ ಪ್ರಕಾರ ಬರ್ನಾಡ್ ಷಾ ರವರ ಮಾತು ಬಹಳ ಚೆನ್ನಾಗಿ ನಿಮಗೆ ಅನ್ವಯವಾಗುತ್ತದೆ. ಇದು ನಿಮ್ಮ ಸರ್ಕಾರದ ನೀತಿ ಚುನಾವಣೆಯಲ್ಲಿ ನೀವು ಈಗಾಗಲೇ ಹೇಳಿದ್ದೀರಿ. ಕಾರ್ಮಿಕರಿಗೆ ಉದ್ಯೋಗ ಕೊಡಲಿಕ್ಕೆ ಆಗದಿದ್ದರೂ ಕೆ.ಜಿ. ಅಕ್ಕಿಯನ್ನು 2 ರೂಪಾಯಿಗಳಿಗೆ ಕೊಡುತ್ತೇವೆ ಎಂದು ಹೇಳಿದ್ದೀರಿ, ಅದನ್ನು ಸಹ ಮರೆತಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಆಹಾರ ನೀತಿಯನ್ನು ಮೂಲಭೂತವಾಗಿ ಮಾರ್ಪಾಡು ಮಾಡುತ್ತೇವೆಂದು ಪ್ರಸ್ತಾಪ ಬಂದಿದೆ. ನಾನು ಅದನ್ನು ಇಲ್ಲಿ ಓದಲಿಕ್ಕೆ ಇಚ್ಛೆಪಡುವುದಿಲ್ಲ. ತಮ್ಮ ಹೇಳಿಕೆಯ ಪ್ರಕಾರ ಇದಕ್ಕೆ ಒಂದು ಕ್ಯಾಬಿನೆಟ್ ಸಮಿತಿಯನ್ನು ನೇಮಕ ಮಾಡಿ ಬೆಲೆ ಏರಿಕೆಯನ್ನು ಹತೋಟಿಯಲ್ಲಿಡುತ್ತೇವೆ ಎಂದು ಹೇಳಿದ್ದೀರಿ. ಮೂರು ಜನ ಕ್ಯಾಬಿನೆಟ್ ಸಚಿವರ ಸಬ್ ಕಮಿಟಿ ವರದಿ ಏನಾಯಿತು ? ಆ ಸಮಿತಿ ಇದೆಯೆ. ವರದಿ ಕೊಟ್ಟಿದ್ದರೆ ಎಷ್ಟರಮಟ್ಟಿಗೆ ಅದನ್ನು ಅನುಷ್ಠಾನ ಮಾಡಿದ್ದೀರಿ, ಅದನ್ನು ಸದನಕ್ಕೆ ಹೇಳಬೇಕಾದ ಜವಾಬ್ದಾರಿ ತಮಗೆ ಇದೆ. ತಾವು ಅದನ್ನು ಮಾಡಲಿಲ್ಲ, ಅದಕ್ಕೆ ಬದಲಾಗಿ ಸಾಕಷ್ಟು ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದೀರಿ. ಹೊರ ರಾಜ್ಯಗಳಿಗೆ ಅಕ್ಕಿ ಇತರೆ ವಸ್ತುಗಳನ್ನು ಸಾಗಿಸದ ಹಾಗೆ ಬ್ಯಾನ್ ಆರ್ಡರ್ ಕೊಡುತ್ತೇವೆಂದು ಹೇಳಿದ್ದೀರಿ. ರೈಸ್ ಮಿಲ್‌ಗಳನ್ನು ಹತೋಟಿಯಲ್ಲಿಡುತ್ತೇವೆಂದು ಹೇಳಿದ್ದೀರಿ. ಸುಮ್ಮನೆ ಏತಕ್ಕೆ ಇಂತಹ ಹೇಳಿಕೆಗಳನ್ನು ಕೊಡುತ್ತೀರಿ? ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ಪ್ರೈಸ್ ಇಂಡೆಕ್ಸ್ ನೋಡಿದ್ದರೆ ತಾವು ಈ ರೀತಿ ಹೇಳುತ್ತಾ ಇರಲಿಲ್ಲ. ಅದು ಯಾವರೀತಿ ಇದೆ ಎಂಬುದನ್ನು ತಮ್ಮ ಗಮನಕ್ಕೆ ನಾನು ತರಲಿಚ್ಛಿಸುತ್ತೇನೆ. ಪ್ರೈಸ್ ಇಂಡೆಕ್ಸ್ ಸ್ಟೇಟ್‌ಮೆಂಟ್ ಪ್ರಕಾರ ಈ ಕೆಳಗೆ ಕಂಡಂತೆ ಇದೆ.

Now, I will read the price index statement of different states.

Karnataka	:	March–April 1983	14 points
		April–May 1983	15 points
		May–June 1983	13 points
West Bengal	:	March–April 1983	6 points
		April–May 1983	8 points
		May–June 1983	5 points
Punjab	:	March–April 1983	8 points
		April–May 1983	5 points
		May–June 1983	8 points (minus)
Rajasthan	:	March–April 1983	Nil
		April–May 1983	8 points
		May–June 1983	1 point
Uttar Pradesh	:	March–April 1983	7 points
		April–May 1983	less than one point
		May–June 1983	11 points

Kerala	:	March–April 1983	13 points
		April–May 1983	26 points
		May–June 1983	No figures.
Maharastra	:	March–April 1983	7 points
		April–May 1983	16 points
		May–June 1983	14 points
Andhra Pradesh	:	March–April 1983	5 points
		April–May 1983	12 points
		May–June 1983	7 points

ಇಡೀ ರಾಷ್ಟ್ರದಲ್ಲಿರತಕ್ಕ ಬೆಲೆ ಸೂಚ್ಯಂಕದ ಪ್ರಕಾರ ಕರ್ನಾಟಕದ್ದನ್ನು ಇವತ್ತು ನೋಡಿದರೆ ನಿಜವಾಗಿಯೂ ನಾಚಿಕೆಪಟ್ಟುಕೊಳ್ಳಬೇಕು. ಇದು ಇಡೀ ರಾಷ್ಟ್ರದಲ್ಲಿಯೇ ಬೆಲೆ ಏರಿಕೆಯಲ್ಲಿ ಜಾಸ್ತಿಯಿದೆ.

We are above even when compared to the national average. Comparative figures of price index numbers of/State Government with that of Government of India figures.

ಅದನ್ನು ಕೂಡ ನಾನು ಬಹಳ ಸೂಕ್ಷ್ಮವಾಗಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

Month		State average	All–India average
January	1983	530	495
February	,,	529	500
March	,,	528	502
April	,,	536	508
May	,,	551	521
June	,,	559	533

ಆದ್ದರಿಂದ ತಾವು ಇಡೀ ರಾಷ್ಟ್ರಕ್ಕೆ, ಬೇರೆ ರಾಜ್ಯದಲ್ಲಿಯೂ ಕೂಡ ಆ ರೀತಿ ಬೆಲೆ ಇಲ್ಲ, ಅಷ್ಟು ಬೆಲೆ ಏರಿಕೆ ನಮ್ಮ ರಾಜ್ಯದಲ್ಲಿ ಆಗಿದೆ. ಆಲ್ ಇಂಡಿಯಾ ಪೆನೊಮಿನ ಇದು ನಮ್ಮ ರಾಜ್ಯಕ್ಕೆ ಸೀಮಿತವಾಗಿಲ್ಲ ಎಂದು ಹೇಳತಕ್ಕ ಯಾವ ಮಾತು ಇದೆ, ಆ ರೀತಿ ಹೇಳುವ ಧಾಟಿ ಏನಿದೆ ಇದು ಜವಾಬ್ದಾರಿತನದ ಒಂದು ಹೇಳಿಕೆಯಲ್ಲ. ಆ ನೆಪದಲ್ಲಿ ತಾವು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ, ಸರಿಯಾದ ಮಾಹಿತಿಗಳು ಇವೆ. 'ತೋಳ ಬಂತು ತೋಳ ಬಂತು' ಎಂದು ಏನು ಹೇಳುತ್ತೀರಲ್ಲಾ ಅದನ್ನು ಪಾವಗಡದಲ್ಲಿ ಹೇಳಿ. ರಾಜ್ಯದ ಜನತೆಗೆ ಇದರ ಬಗ್ಗೆ ತಾವು ಉತ್ತರ ಕೊಡಬೇಕಾದ ಅವಶ್ಯಕತೆ ಇದೆ. ನಮ್ಮ ರಾಜ್ಯದಲ್ಲಿ ಬೆಲೆ ನಿಯಂತ್ರಣ ಮಾಡತಕ್ಕ ಎಸೆನ್ಸಿಯಲ್ ಕಮಾಡಟೀಸ್ ಆಕ್ಟ್‌ನ್ನು ಜಾರಿಗೆ ಕೊಟ್ಟಾಗ ಆ ಕಾನೂನನ್ನು ನಿರ್ವಹಿಸುವ ಹೊಣೆಯನ್ನು ತಾವು ಕಳೆದುಕೊಂಡಿದ್ದೀರಿ. ಇವತ್ತು ಹೇಳುತ್ತೀರಿ ನಮಗೆ ಹೆಚ್ಚು ಅಧಿಕಾರ ಬೇಕು ಎಂದು. ಕೇಂದ್ರ ತಮಗೆ ಕೊಟ್ಟಂತಹ ಅಧಿಕಾರವನ್ನು ತಾವು ನಿರ್ವಹಣೆ ಮಾಡದೆ, ಅದರಲ್ಲೂ ಜನ ಸಾಮಾನ್ಯರು ತತ್ತರಿಸಿ ಹೋಗಿರತಕ್ಕಂತ ಸಂದರ್ಭದಲ್ಲಿ ಅವರಿಗೆ ಯಾವುದೇ ರೀತಿಯ ನೆರವು ಕೊಡದೆ, ನಿಮ್ಮಲ್ಲಿದ್ದ ಅಧಿಕಾರವನ್ನು ನಿಭಾಯಿಸದೆ ಕೇಂದ್ರದ ಮೇಲೆ ನೆಪ ಹೊಡ್ಡುತ್ತಿರುವುದು ನೀವು ಹೇಳತಕ್ಕಂತಹ ಧಾಟಿ ನಿಜವಾಗಿಯೂ ಪ್ರಾಮಾಣಿಕವಾಗಿ ಜನಸೇವೆಯನ್ನು ಮಾಡತಕ್ಕಂತಹ ಸರ್ಕಾರಕ್ಕೆ ಇದು ತಕ್ಕುದಲ್ಲ. ಇಂತಹ ವಿಚಾರವನ್ನು ಮಾಡತಕ್ಕದ್ದು ಏನು ತೋರಿಸುತ್ತದೆ ಎಂದರೆ ಜನತಾ ಸರ್ಕಾರ it is a non

performing Government ಎಂದು ತಮ್ಮ ಪ್ರಗತಿಯು ಗತಿ ಹಿಂದೆ ಹೋಗುತ್ತಿದೆ ಆಹಾರ ನೀತಿ ಮತ್ತು ಆಹಾರ ಇಲಾಖೆಯನು ನಿರ್ವಹಣೆ ಮಾಡತಕ್ಕದ್ದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ತಮ್ಮ ಈ ನೀತಿಯನ್ನು ಇಡೀ ರಾಷ್ಟ್ರಕ್ಕೆ ತೋರಿಸುತ್ತಾ ಇದ್ದೀರಿ ಇಡೀ ರಾಷ್ಟ್ರದಲ್ಲಿಯೇ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ರಾಜ್ಯದ ಆಹಾರ ಬೆಲೆಯನ್ನು ನಿಯಂತ್ರಣ ಮಾಡುವುದರಲ್ಲಿ ವಿಫಲ ವಾಗಿರುವುದರಲ್ಲಿ ಮೊದಲನೆಯ ಸ್ಥಾನವನ್ನು ಈ ರಾಜ್ಯ ಪಡೆಯುತ್ತಿದೆ. ಜನಸಾಮಾನ್ಯನಿಗೆ ಪ್ರಥಮ ವಾಗಿ ಬೇಕಾಗಿರತಕ್ಕದ್ದು ಅನ್ನ. ಆಹಾರ ಪದಾರ್ಥಗಳ ಬೆಲೆ ಹತೋಟಿಯನ್ನು ಇಟ್ಟಿಲ್ಲ ಜನಸಾಮಾನ್ಯ ಜೀವನ ಮಾಡಲಿಕ್ಕೆ ಆಗದ ಪಾಪದ ಕೆಲಸವನ್ನು ತಾವು ಮಾಡುತ್ತಿದ್ದೀರಿ ಎಂದು ಹೇಳಲಿಕ್ಕೆ ಇಚ್ಛೆಪಡು ತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಮಾತಿಗೂ ಕೂಡ ಇವತ್ತು ನಮಗೆ ಕೇಂದ್ರ ಪೂರೈಕೆ ಮಾಡುತ್ತಿಲ್ಲ ಮತ್ತು ಹಣ ಕೊಡುತ್ತಿಲ್ಲವೆಂದು ಹೇಳುತ್ತೀರಿ. ಇವತ್ತು ಅಕ್ಕಿಯ ವಿಚಾರವನ್ನು ತೆಗೆದು ಕೊಂಡರೂ ಕೂಡ ತಮಗೆ ಗೊತ್ತಿದೆ. ೧೫ ಸಾವಿರ ಟನ್ ಅಕ್ಕಿ ಇವತ್ತು ತಮಗೆ ಪೂರೈಕೆಯಾಗುತ್ತಿದೆ. ಹಿಂದೆ ೧೦ ಸಾವಿರ ಟನ್ ಅಕ್ಕಿ ಮಾತ್ರ ಪೂರೈಕೆಯಾಗುತ್ತಿತ್ತು ನಮ್ಮ ಸರ್ಕಾರವಿರುವಾಗಲೂ ಕೂಡ ಕೇಂದ್ರ ೧೦ ಸಾವಿರ ಟನ್ ಅಕ್ಕಿಯನ್ನು ಪೂರೈಕೆ ಮಾಡುತ್ತಿತ್ತು. ಆದರೆ ನಿಮಗೆ ೧೫ ಸಾವಿರ ಟನ್ ಅಕ್ಕಿ ಜನಪರಿಯಿಂದ ಪೂರೈಕೆ ಮಾಡುತ್ತಿದ್ದಾರೆ. ಅದನ್ನು ಸಾರ್ವಜನಿಕರಿಗೆ ವಿತರಣೆ ಮಾಡುತ್ತಿ ದ್ದೀರಾ? ಕೇಂದ್ರ ಸರ್ಕಾರ ಅಕ್ಕಿ ಪೂರೈಕೆ ಮಾಡುತ್ತಿಲ್ಲವೆಂದು ಹೇಳಿಕೊಂಡು ನಿಮ್ಮ ಕೇಸನ್ನು ನೀವೇ ಹಾಳುಮಾಡಿಕೊಳ್ಳುತ್ತಿದ್ದೀರಿ. ಅಕ್ಕಿ ಕಡಿಮೆ ಮಾಡಿ ಗೋಧಿಯನ್ನು ಜಾಸ್ತಿ ಕೊಡುತ್ತೇವೆಂದು ಹೇಳು ತ್ತೀರಿ. ಜಾಸ್ತಿ ಕೇಳತಕ್ಕ ವ್ಯವಹಾರದಲ್ಲಿ ಕೇಂದ್ರ ಸರ್ಕಾರಕ್ಕೆ ನಮ್ಮ ಅಹ್ವಾಲು ಹೋಗಿದೆ, ಗೋಧಿ ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ. ತಮ್ಮ ಈ ಒಂದು ದ್ವಂದ್ವದ ನೀತಿಯಿಂದ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆಯೆಂದು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಯಾವುದೇ ಒಂದು ಸಂದರ್ಭದಲ್ಲಿ ಕೂಡ ಕೇಂದ್ರ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಕ್ಕೆ ತೊಂದರೆಯಾಗಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಕೇಂದ್ರ ಸರ್ಕಾರವು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ ಸುಮಾರು ೭೫ ಸಾವಿರ ಟನ್ ಆಹಾರ ಸಾಮಾಗ್ರಿಗಳನ್ನು ದಾಸ್ತಾನು ಮಾಡಿದೆ. ಕಾರಣವೇನೆಂದರೆ ರಾಜ್ಯ ಸರ್ಕಾರಕ್ಕೆ ಯಾವು ದಾದರೊಂದು ಪರಿಸ್ಥಿತಿಯಲ್ಲಿ ತೊಂದರೆಯಾದಾಗ ಆಹಾರ ಸಾಮಾಗ್ರಿಯನ್ನು ಉಪಯೋಗಿಸಿ ಕೊಳ್ಳಬಹುದು ಎಂದು. ಇವತ್ತು ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರ ನಾನಾ ರೀತಿಯ ಸೌಕರ್ಯ ಗಳನ್ನು ಒದಗಿಸಿಕೊಡುತ್ತಿದೆ. ಅದರ ಬಗ್ಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳು ವುದಾದರೆ, ಏಪ್ರಿಲ್ ೧೯೮೧ರಿಂದ ಅಕ್ಟೋಬರ್ ೮೧ರ ವರೆಗೆ ಸುಮಾರು ೨೦೦೦ ಟನ್ನು ಮತ್ತು ನವಂಬರ್ ೮೧ರಿಂದ ಮಾರ್ಚಿ ೮೨ರ ವರೆಗೆ ಸುಮಾರು ೩೦೦೦ ಟನ್ ಎಂದರೆ, ಅಷ್ಟು ಮೆಟ್ರಿಕ್‌ಟನ್ ಆಹಾರ ಸಾಮಾಗ್ರಿಯನ್ನು ಒದಗಿಸಿ ಕೊಟ್ಟಿದೆ. ಮತ್ತೆ ಆಗಸ್ಟ್ ೮೨ರಿಂದ ಅಕ್ಟೋಬರ್ ೮೨ರವರೆಗೂ ೩೦೦೦ ಮೆಟ್ರಿಕ್ ಟನ್ ಮತ್ತೆ ನವೆಂಬರ್‌ನಿಂದ ಮಾರ್ಚಿಯುವರೆಗೆ ಸುಮಾರು ೫೦೦೯ ಮೆಟ್ರಿಕ್ ಟನ್ ಮತ್ತು ಏಪ್ರಿಲ್ ೮೩ರಿಂದ ಮಾರ್ಚಿ ೮೩ರ ವರೆಗೆ ೧೫ ಮೆಟ್ರಿಕ್ ಟನ್‌ಗಳನ್ನು ಕೇಂದ್ರ ಸರ್ಕಾರದಿಂದ ಕೊಟ್ಟಿದ್ದಾರೆ. ಆದರೂ ಕೂಡ ತಾವು ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ತಾವು ಕರ್ನಾಟಕದ ಜನತೆಗೆ ಪಾವಗಡದ ತೋಳದ ಕಥೆಯನ್ನು ಹೇಳಿದ ಹಾಗೆ ಕೇಂದ್ರ ಸರ್ಕಾರದ ಮೇಲೂ ತೋಳದ ಕಥೆಯನ್ನು ಹೇಳುವುದು ಬೇಡ. ನಿಮ್ಮ ಈ ತೋಳದ ಕಥೆಯನ್ನು ಜನ ನಂಬುವುದಿಲ್ಲ.

ಶ್ರೀ ಸಿ. ಬೈರೇಗೌಡ.—ತಾವು ಈಗ ಆ ಬಗ್ಗೆ ಮಾತನಾಡಬೇಡಿ. ತಮ್ಮ ಸರ್ಕಾರ ಇದ್ದಾಗ ಏನು ಕೆಲಸ ಮಾಡಿದ್ದೀರಿ ಎಂಬುದನ್ನು ನೋಡಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದಂತ ಶ್ರೀಮಾನ್ ಬೈರೇಗೌಡರು ಈ ರೀತಿ ಮಾತನಾಡುವುದು ಬೇಡ. ಬೇರೆಯವರು ಮಾತನಾಡಿದರೂ ಪರವಾಗಿಲ್ಲ. ಆದರೆ ತಾವು ಮಾತ್ರ ಆ ರೀತಿ ಮಾತನಾಡಬೇಡಿ. ತಾವು ಡಿಸೆಂಬರ್ ತನಕ ನಮ್ಮ ಪಕ್ಷದಲ್ಲಿದ್ದು ಕೊಂಡು ತಮಗೆ ಟಿಕೆಟ್ ದೊರೆಯಲಿಲ್ಲವೆಂದು ಹೇಳಿ ಕಡೆಯ ಗಳಿಗೆಯಲ್ಲಿ ತಾವು ಸ್ವತಂತ್ರವಾಗಿ ಗೆದ್ದು ಬಂದಿದ್ದೀರಿ. ಪರವಾಗಿಲ್ಲ ಆ ವಿಚಾರ ಈಗ ಬೇಡ. ತಾವು ಯಾವುದೋ ಒಂದು ಅಧ್ಯಕ್ಷರ ಗಿರಿಯನ್ನು ಗಿಟ್ಟಿಸಿ ಕೊಂಡಿದ್ದೀರಿ. ಆದ್ದರಿಂದ ಆ ರೀತಿ ಮಾತನಾಡಬೇಕಾಗುತ್ತದೆಯೆ.

ಶ್ರೀ ಸಿ. ಬೈರೇಗೌಡ.—ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೇನೆಂದು ತಮ್ಮಲ್ಲಿ ಯಾವುದಾದರೂ ದಾಖಲೆಗಳು ಇದ್ದರೆ ತೋರಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನು ಇದುವರೆಗೂ ಅವರಿಗೆ ಭೋಧನೆ ಮಾಡಿ ಬಂದಿದ್ದೇನೆ. ಆದರೂ ಕೂಡ ಅವರಿಗೆ ಅರ್ಥವಾಗಿಲ್ಲ.

ಶ್ರೀ ಸಿ. ಬೈರೇಗೌಡ.—ನಾನು ಮಾನ್ಯ ಬಂಗಾರಪ್ಪನವರ ಸಲಹೆಯನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಏನೇನೂ ಹೇಳಿ ಅವರ ಅಧ್ಯಕ್ಷರ ಗಿರಿಗೆ ಮುಟ್ಟು ಗೋಲು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅವರು ಯಾವ ಟೈಮ್‌ಗೆ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೆ ನಾನು ಆ ವಿಚಾರವನ್ನು ಅಲ್ಲಿಗೆ ಬಿಡುತ್ತೇನೆ. ಜನತಾ ಪಕ್ಷದ ಸರ್ಕಾರ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುತ್ತಾ ಬಂದಿದ್ದಾರೆ. ಆದರೆ ಕೇಂದ್ರ ಸರ್ಕಾರ ರಾಜ್ಯಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ಕಡಿಮೆ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಯಾವಾಗಲೂ ಕೊಡುವ ಕೋಟಾಗಿಂತ ಹೆಚ್ಚು ಹೆಚ್ಚು ಸಹಾಯವನ್ನು ಈ ಸಾರಿ ಕೇಂದ್ರ ಸರ್ಕಾರ ನಮ್ಮ ರಾಜ್ಯಸರ್ಕಾರಕ್ಕೆ ಮಾಡಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಆದರೆ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಇವರು ಸರಿಯಾಗಿ ವಿತರಣೆ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಗೋಧಿಯನ್ನು ಸರಬರಾಜು ಮಾಡುವಲ್ಲಿ ಕೂಡ ಕೇಂದ್ರ ಸರ್ಕಾರ ಯಾವುದೇ ರೀತಿಯಲ್ಲಿ ಹಿಂದೆ ಬಿದ್ದಿಲ್ಲ ಸುಮಾರು ೪೦ ಟನ್ ಗೋಧಿಯನ್ನು ೩೨ ರೋಲಿಂಗ್ ಮಿಲ್‌ಗಳಿಗೆ ಕೇಂದ್ರ ಸರ್ಕಾರ ಕೊಟ್ಟಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಮತ್ತೆ ಅಲೋಕೇಷನ್ ಮಾಡುವ ಬಗ್ಗೆ ನಾನು ಹೇಳುವುದಾದರೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಸಂದಾಯ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ. ಆದ್ದರಿಂದ ಸುಮಾರು ೭ ಸಾವಿರ ಟನ್ ಗೋಧಿ ನಷ್ಟವಾಗಿದೆ ಈ ನಷ್ಟ ಯಾರಿಂದ ಆಗಿದೆ? ಫ್ಲೋರ್‌ಮಿಲ್‌ಗಳಿಂದ ತಾವು ಲಿಸ್ಟ್ ಮಾಡಿ ಕ್ರಶ್‌ಮಾಡದೆ ಇದ್ದುದರಿಂದ ಸುಮಾರು ೬–೭ ಸಾವಿರ ಟನ್‌ಗಳಷ್ಟು ಗೋಧಿ ನಷ್ಟವಾಗಿದೆ. ಆ ರೀತಿ ಏತಕ್ಕೆ ಮಾಡಬೇಕಾಗಿತ್ತು. ನಾವು ಮಾಡುವ ತಪ್ಪನ್ನು ಕೂಡ ನಾವು ತಿಳಿದುಕೊಳ್ಳಬೇಕು. ಅದು ಬಿಟ್ಟು ಕೇಂದ್ರ ಸರ್ಕಾರವನ್ನೇ ಯಾವಾಗಲೂ ತಪ್ಪಿಗೆ ಸಿಕ್ಕಿಹಾಕಿಸುವುದು ಸರಿಯಾದುದ್ದಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ತಮ್ಮ ಸರ್ಕಾರದಲ್ಲಿ ಯಾವುದೇ ರೀತಿಯ ಹೆಚ್ಚಿನ ಉತ್ಪಾದನೆ ಆಗಿಲ್ಲ. ತಾವು ಒಟ್ಟಾರೆ ಮಾಡಿರತಕ್ಕಂಥ ಪ್ರಕ್ಯೂರ್‌ಮೆಂಟನ್ನು ಇಲ್ಲಿ ನೋಡುವುದಾದರೆ ೧೯೮೧ರಲ್ಲಿ ೧. ೨೬. ಮತ್ತೆ ೧೯೮೨ರಲ್ಲಿ ೪.೫೪೩ ಮೆಟ್ರಿಕ್ ಟನ್‌ಗಳು. ಮತ್ತು ಪ್ಯಾಡಿ ೧,೪೫,೩೭೦ ಮೆಟ್ರಿಕ್ ಟನ್ಸ್ ಅದೇ ರೀತಿಯಲ್ಲಿ ೧೯೮೧–೮೨ನೇ ಸಾಲಿನಲ್ಲಿ ತೆಗೆದುಕೊಂಡರೆ ೨.೦೨,೯೯೫ ಮೆಟ್ರಿಕ್ ಟನ್ಸ್ ಪ್ರಕ್ಯೂರ್ ಆಗಿದೆ. ಮತ್ತೆ ನಾವು ಪ್ರಕ್ಯೂರ್‌ಮೆಂಟ್ ಪಾಲಿಸಿಯ ಬಗ್ಗೆ ಹೇಳುವುದಾದರೆ ನವೆಂಬರ್ ೮೨ರಲ್ಲಿ ಎಂದರೆ ಮಾರ್ಚಿವರೆಗೆ ಟೋಟಲ್ ೩೭.೨೪೩ ಮೆಟ್ರಿಕ್ ಟನ್ಸ್, ಎಂದರೆ ೧–೪–೮೩ರಿಂದ ೨೨–೮–೮೩ರವರೆಗೆ ತಾವು ಪ್ರಕ್ಯೂರ್ ಮಾಡಿರತಕ್ಕಂಥದ್ದು ೩೫,೯೦೨ ಮೆಟ್ರಿಕ್ ಟನ್ ಮಾತ್ರ.

೬–ಪಿ.ಎಂ.

ಆದರೆ ಇಂತಹ ಕಠಿಣ ಪರಿಸ್ಥಿತಿಯಲ್ಲಿ ಹಿಂದಿನ ಸರ್ಕಾರ ಪ್ರೊಕ್ಯೂರ್‌ಮೆಂಟ್ ಮಾಡಿದೆ. ಈ ಬಗ್ಗೆ ಕೇಂದ್ರ ಸರ್ಕಾರ ತಮಗೆ ಸಾಕಷ್ಟು ದಾಸ್ತಾನು ಕೂಡ ಕೊಟ್ಟಿದ್ದಾರೆ. ಆದರೆ ಯಾವ ರೀತಿಯಲ್ಲಿ ಅದನ್ನು ಉಪಯೋಗ ಮಾಡಿದ್ದೀರಿ ಎಂದರೆ, ನಿಮ್ಮ ವಿತರಣೆಗೆ ಹೋಗತಕ್ಕಂಥ ಅಕ್ಕಿ, ಹಿಂದಿನ ಸರ್ಕಾರ ಪ್ರೊಕ್ಯೂರ್ ಮಾಡಿರುವ ಅಕ್ಕಿಯೇ ಹೊರತು, ತಮ್ಮ ಪ್ರೊಕ್ಯೂರ್‌ಮೆಂಟ್‌ನಿಂದ ಯಾವುದೇ ರೀತಿಯಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಆಗಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅಧ್ಯಕ್ಷರೇ, ಇವತ್ತು ತಮಗೆ ಗೊತ್ತಿರುವಂತೆ ನಾನು ಈ ವಿಷಯದಲ್ಲಿ ಆಪಾದನೆಯನ್ನು ಪತ್ರಿಕೆಗಳಲ್ಲಿ ಮಾಡಿದ್ದೇನೆ. ಇವತ್ತು ಕೂಡ ೭ ರಿಂದ ೮ ನೂರು ಟ್ರಕ್‌ಗಳು ಕರ್ನಾಟಕ ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗುತ್ತಿವೆ. ಬೆಂಗಳೂರಿನ ಮಂಡಿ ಪೇಟೆಯಿಂದ ಹೊಸೂರು ಗೇಟ್‌ನಿಂದ ಪ್ರತಿ ದಿವಸ ಕನಿಷ್ಟ ಪಕ್ಷ ನೂರು ಟ್ರಕ್ ಲೋಡು ಅಕ್ಕಿ ದಾಸ್ತಾನು ಆಗುತ್ತಿದೆ ಎಂದು ಹೇಳಿದರೆ, ಕಣ್ಣು ಬಿಟ್ಟು ನೋಡತಕ್ಕ ನಿಮ್ಮ ವಿಫಲವಾದ ದುರ್ದೆಶೆಯನ್ನು ನೋಡಿದರೆ ಈ ಸರ್ಕಾರ ಈ ರಾಜ್ಯದ ಜನತೆಯ ಭವಿಷ್ಯ ಖಂಡಿತವಾಗಿಯೂ ನಿಶ್ಚಿತವಾಗಿ ಉಳಿಯಲಿಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ನೀವು ಅವರ ಜೀವನವನ್ನು ಗುರುತರವಾದ ಪರಿಸ್ಥಿತಿಗೆ ಕೊಂಡೊಯ್ದಿದ್ದೀರಿ ಎಂದು ನಾನು ನೇರವಾಗಿ ಈ ಸರ್ಕಾರದ ಮೇಲೆ ಆಪಾದನೆ ಮಾಡಬೇಕಾಗಿದೆ. ಇವತ್ತು ಸುಳ್ಳು ಲೆಕ್ಕ ಹೇಳತಕ್ಕಂಥ ಗಿರಣಿಗಳು ಬದುಕುತ್ತಿವೆ. ಆದರೆ ಪ್ರಾಮಾಣಿಕರಾಗಿ ಸತ್ಯಸಂಧರಾಗಿ ದುಡಿಯತಕ್ಕಂಥ ಯಾವ ಗಿರಣಿ ಮಾಲೀಕರು ಇದ್ದಾರೆ, ವರ್ತಕರು ಇದ್ದಾರೆ,

ಅವರು ಇವತ್ತು ಸಂಪೂರ್ಣವಾಗಿ ತಮ್ಮ ವ್ಯಾಪಾರವನ್ನು ಬಿಟ್ಟು ಬಿಡಬೇಕಾದ ಪರಿಸ್ಥಿತಿಯನ್ನು ರಾಜ್ಯದಲ್ಲಿ ತಂದಿಟ್ಟಿದ್ದೀರಿ. ಇದರಿಂದಾಗಿ ಬಹುಶಃ ಒಂದು ಕೆಟ್ಟ ವ್ಯವಸ್ಥೆಯನ್ನು, ಪರಂಪರೆಯನ್ನು, ತಾವು ತರುತ್ತಿದ್ದೀರೆಂದು ನಾನು ನೇರವಾಗಿ ಆಪಾದನೆ ಮಾಡಬೇಕಾಗಿದೆ. ಒಂದೊಂದು ಟ್ರಕ್ ಲೋಡ್‌ನಲ್ಲಿ ಮೂರು ಸಾವಿರ–ನಾಲ್ಕು ಸಾವಿರ ರೂಪಾಯಿಗಳ ಭ್ರಷ್ಟಾಚಾರ ಮಾಡಲಿಕ್ಕೆ ಎಲ್ಲಾ ಹಂತದ ಅಧಿಕಾರಿಗಳು ಇವತ್ತು ಹೊಸದಾಗಿ ಹುಟ್ಟಿಕೊಂಡಿದ್ದಾರೆ. ಇವತ್ತಿನವರೆಗೆ ತಾವು ಒಬ್ಬರೇ ಒಬ್ಬ ತಹಸೀಲ್ದಾರರನ್ನು ಅಮಾನತ್ತಿನಲ್ಲಿಟ್ಟಿರಬಹುದು. ಆದರೆ ಪ್ರಮುಖವಾದಂತಹ ಈ ವ್ಯವಸ್ಥೆಯು ಜಾಲದಲ್ಲಿ ಲಕ್ಷಾಂತರ ರೂಪಾಯಿಗಳು ಭ್ರಷ್ಟಾಚಾರದಲ್ಲಿ ಸೋರಿ ಹೋಗುತ್ತಿರುವಾಗ ಯಾವುದೇ ಅಧಿಕಾರಿಯನ್ನು ಇವರು ಹಿಡಿತದಲ್ಲಿಟ್ಟುಕೊಂಡಿಲ್ಲ. ಈ ಜಾಲ ವ್ಯಾಪಕವಾಗಿ ಹರಡಿಕೊಂಡಿದೆ. ಇದರಿಂದ ಏನು ಕಾಣುತ್ತದೆ ಎಂದರೆ ಈ ಸರ್ಕಾರ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಕೊಡುತ್ತಿದೆ. ಅಪ್ರಾಮಾಣಿಕ ವರ್ತಕರ ಮತ್ತು ಅಕ್ರಮ ದಾಸ್ತಾನುಗಾರರ ಕೈಗೊಂಬೆಯಾಗಿ ಈ ಸರ್ಕಾರ ವರ್ತಿಸುತ್ತಿದೆ ಎಂದು ನೇರವಾಗಿ ನಾನು ಆಪಾದನೆ ಮಾಡುತ್ತಿದ್ದೇನೆ. ಇದು ನನ್ನ ಹೃದಯಾಂತರಾಳದಿಂದ ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯದ ಜನ ಸಾಮಾನ್ಯರೆಲ್ಲರ ಅಂತರಾಳದಿಂದ ಬಂದ ಪ್ರಚೋದನೆ ಕೂಡ ಆಗಿದೆ. ಇದು ಸರ್ಕಾರವನ್ನು ಸೂಜಿಯಂತೆ ಚುಚ್ಚುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

(ಆಡಳಿತ ಪಕ್ಷದ ಕೆಲವು ಸದಸ್ಯರು ನಗುತ್ತಿದ್ದರು)

Do not laugh. at these things. People will laugh and throw you. ಇದು ಬಹಳ ಪ್ರಾಮುಖ್ಯವಾದಂತಹ ಪ್ರಶ್ನೆ, ನಗತಕ್ಕಂಥ ಪ್ರಶ್ನೆ ಅಲ್ಲ. ಜನರು ರಾತ್ರಿ ಹಗಲು ಕಣ್ಣೀರಿನಿಂದ ಕೈ ತೊಳೆಯತಕ್ಕಂಥ ಪ್ರಶ್ನೆ. ಇದರಿಂದ ನಿಮಗೆ ನಾಚಿಕೆ ಆಗಬೇಕು.

ಡಾ।। ವಿ.ಎಸ್. ಆಚಾರ್ಯ.—ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ಕಡೆಯಿಂದ ಕೆಲವರು ನಗುವುದು ಕೇಳಿಬಂತು. ನಾವು ಕೆಲವು ಶಾಸಕರು ರಾತ್ರಿ ಎರಡು ಗಂಟೆ ಮೂರು ಗಂಟೆ ಹೊತ್ತಿನಲ್ಲಿ ಸೇಲ್ಸ್‌ಟ್ಯಾಕ್ಸ್ ಚೆಕ್‌ಪೋಸ್ಟ್, ರೈಸ್ ಚೆಕ್‌ಪೋಸ್ಟ್‌ಗಳನ್ನು ತನಿಖೆ ಮಾಡಿದಾಗ, ಏನು ವಾಸ್ತವ ಪರಿಸ್ಥಿತಿ ಕಂಡು ಬಂತು ಎಂದು ಹೇಳಿದರೆ ಬಹುಶಃ ನೀವು ನಗುತ್ತಿರಲಿಲ್ಲ, ಗಡಿಯಲ್ಲಿ ಇವತ್ತು ಏನಾಗುತ್ತಿದೆ? ಆಹಾರ ಸಚಿವರಿಗೆ ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದೇವೆ. ನಗತಕ್ಕಂಥ ಪ್ರತಿಕ್ರಿಯೆ ಅಷ್ಟು ಒಳ್ಳೆಯದಲ್ಲ ಎಂದು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವತ್ತು ನಕ್ಕರೆ ನಾಳೆ ಅಳಬೇಕಾದ ಪ್ರಸಂಗ ಬರುತ್ತದೆ. ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಉತ್ಪ್ರೇಕ್ಷೆ ಮಾತಲ್ಲ. ನಮಗೂ ಕೂಡ ಇಲ್ಲಿ ಮಾತನಾಡುವ ಅವಕಾಶ ಇದೆ.

ಡಾ।। ವಿ.ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ಕೇರಳದ ಗಡಿಯಲ್ಲಿ ಆರು ಕಡೆಗಳಲ್ಲಿ ನಮ್ಮದೇ ಆದಂತಹ ರಾಜ್ಯ ರಸ್ತೆಯಲ್ಲಿ ಗೇಟನ್ನು ಹಾಕಿ ಅಕ್ಕಿ ಸಾಗಾಣಿಕೆಗೆ ನಿರ್ಬಂಧ ಮಾಡಬೇಕೆಂದು ನಾವು ಮಾಡಿದರೆ, ಕರ್ನಾಟಕದ ರಾಯಚೂರು ಈ ಭಾಗದಿಂದ ಬಂದ ಲಾರಿಗಳು ಮಂಗಳೂರಿನ ಉಳ್ಳಾಲದ ತೊಕ್ಕೊಟ್ಟು ಗೇಟ್‌ವರೆಗೆ ಯಾವುದೇ ಸೇಲ್ಸ್ ಟ್ಯಾಕ್ಸ್ ಚೆಕ್‌ಪೋಸ್ಟ್ ಸೀಲ್ ಇಲ್ಲದೆ, ಫುಡ್ ಸೀಲ್, ಇಲ್ಲದೆ ಇಲ್ಲಿಯವರೆಗೆ ಬಂದಿರುವ ಬಗ್ಗೆ ಗ್ರೀನ್ ವೋಚರ್ ಅಕ್ನಾಲೆಡ್ಜ್‌ಮೆಂಟ್ ಅನ್ನು ನಾನು ಸಂಗ್ರಹ ಮಾಡಿಟ್ಟುಕೊಂಡಿದ್ದೇನೆ. ಸಭೆಯಲ್ಲಿ ಬೇಕಾದರೆ ಅದನ್ನು ಹಾಜರು ಮಾಡುತ್ತೇನೆ. ಇದು ಹೇಗೆ ಸಾಧ್ಯವಾಯಿತು? ಯಾವುದೇ ಒಂದು ಸೀಲ್ ಇಲ್ಲದೆ ಬರುವುದಕ್ಕೆ ಹೇಗೆ ಸಾಧ್ಯವಾಯಿತು? ಈ ವಿಷಯ ಗಂಭೀರವಾದದ್ದಾಗಿದೆ.

(ಸಭೆಯಲ್ಲಿ ಗೊಂದಲ, ನಾಲ್ಕೈದು ಮಂದಿ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಉಪಕ್ರಮಿಸಿದರು)

ಶ್ರೀ ಹನುಮಂತರಾವ್ ದೇಸಾಯಿ.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರ ಮಾತಿಗೆ ನಾನು ನಗಲಿಲ್ಲ. ಸೂಜಿಯನ್ನು ದಬ್ಬಳ ಎಂದು ಕರೆದವರಲ್ಲ, ಅದಕ್ಕೆ ನಗು ಬರುತ್ತದೆ, ಸೂಜಿಯನ್ನು ಸೂಜಿ ಎಂದರೆ ನಗು ಬರುವುದಿಲ್ಲ.

ಜೆ ಡಿ. ಸೋಮಪ್ಪ.—ಸೂಜಿಯಿಂದಲೇ ಚುಚ್ಚಿಕೊಳ್ಳಿ, ತೊಂದರೆ ಇಲ್ಲ. ಆದರೆ ದಬ್ಬಳ ದಿಂದ ಚುಚ್ಚಿಕೊಳ್ಳಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಬ್ಬಳದಿಂದ ಜನ ಸಾಮಾನ್ಯರನ್ನು ಚುಚ್ಚತಕ್ಕಂಥ ಕೆಲಸ ವನ್ನು ಯಾರೂ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಹನುಮಂತರಾವ್ ದೇಸಾಯಿಯವರಿಗೆ ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಕಳ್ಳತನ ಮಾಡತಕ್ಕಂಥವನು, ಅಥವಾ ಲಂಚ ಕೊಟ್ಟು ಲಾರಿಯನ್ನು ಸಾಗಿಸುವವನು ನಿಮ್ಮ ಕಡೆ ಇರಬಹುದು, ಅಥವಾ ಕೇರಳ ಗಡಿ ಕಡೆ ಇರಬಹುದು. ನಿಮ್ಮನ್ನು ಮುಂದೆ ಇಟ್ಟುಕೊಂಡು ಯಾರೂ ಲಂಚ ಕೊಡುವುದಿಲ್ಲ. ಲಂಚ ಕೊಡುವುದು ಎನ್ನುವುದು ಕೆಲವು ಕಡೆ ಕಡಿಮೆ ಇರಬಹುದು, ಕೆಲವು ಕಡೆ ಜಾಸ್ತಿ ಇರು ತ್ತದೆಯೇ ವಿನಹ it varies in degrees. ಇದರಿಂದ ಚುಚ್ಚುವುವುದು ಬಹಳ ಮುಖ್ಯ. ಸೂಜಿಯಿಂದ ಚುಚ್ಚಿಕೊಂಡರೆ ಏನು ? ದಬ್ಬಳದಿಂದ ಚುಚ್ಚಿಕೊಂಡರೆ ಏನು ? ಇಲ್ಲಿ ಚುಚ್ಚುವುದು ಬಹಳ ಮುಖ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಅನೇಕ ಕಡೆ ಉದಾ ಹರಣೆಗೆ ಕೋಲಾರದಂತಹ ಕಡೆಗಳಲ್ಲಿ, ಒಂದೊಂದು ತಾಲ್ಲೂಕಿನಲ್ಲಿ ಹಿಂದೆ ಎರಡು ಸಾವಿರ ಚೀಲ ಅಕ್ಕಿ ಬರುತ್ತಿದ್ದುದು ಈಗ ಮೂರು ನೂರು ಗೋಣಿ ಚೀಲ ಕೂಡ ಬರುತ್ತಿಲ್ಲ. ಹೀಗಾದರೆ ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆಯು ಕಡಿತವನ್ನು ಉಂಟು ಮಾಡಿ ದ್ದೀರಿ. ಸಾಕಷ್ಟು ತೊಂದರೆ ಕೂಡ ಇಲ್ಲಿ ಆಗಿದೆ. ಯಶವಂತಪುರದಲ್ಲಿ ಮಾರ್ಕೆಟ್ ಯಾರ್ಡ್ ಇದೆ. ಅಲ್ಲಿಯ ವರ್ತಕರು ಹೊಸ ತರಗುಪೆ ಟೆಯಲ್ಲೇ ವ್ಯಾಪಾರ ಮಾಡಲಿಕ್ಕೆ ಅವಕಾಶ ಕೊಡ ಬೇಕೆಂದು ಸುಪ್ರಿಂ ಕೋರ್ಟ್‌ವರೆಗೆ ಹೋದರು. ಸುಪ್ರೀಂಕೋರ್ಟ್‌ನವರು ಆಗುವುದಿಲ್ಲ, ಯಶವಂತ ಪುರ ಮಾರ್ಕೆಟ್ ಯಾರ್ಡ್ ವ್ಯವಸ್ಥೆಯನ್ನೇ ಹೊಂದಿಕೊಂಡು ಹೋಗಬೇಕೆಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಹೀಗಿದ್ದರೂ ೨೪ ಜನರಿಗೆ ಹೊಸ ತರಗು ಪೇಟೆಯಲ್ಲಿಯೇ ರಿಟೈಲ್ ವ್ಯಾಪಾರ ಮಾಡಲಿಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ಒಳವಾಡಿದೆ. ಇದರಿಂದ ಈ ಆಹಾರ ಇಲಾಖೆಯಲ್ಲಿ ಒಂದು ಬಗೆಯ ಜಾಲವನ್ನು ಮಾಡಿಟ್ಟುಕೊಂಡು ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟರೂ ಕೂಡ ಅದನ್ನು ಮೀರಿ ಆಹಾರ ಇಲಾಖೆ ಈ ರೀತಿಯಾಗಿ ವರ್ತನೆ ಮಾಡುತ್ತಿದ್ದರೆ, ಈ ಸರ್ಕಾರ ಖಂಡಿತವಾಗಿಯೂ ಈ ಜಾಲಕ್ಕೆ ಬೆಂಬಲ ಕೊಡುತ್ತಿದೆ ಎಂದು ನಾವು ನೇರವಾಗಿ ಆಪಾದನೆ ಮಾಡಬೇಕಾಗಿದೆ. ಈ ಲೈಸೆನ್ಸ್‌ನ್ನು ಕೊಟ್ಟಂತಹ ಅಧಿಕಾರಿಗಳ ಮೇಲೆ ಇವತ್ತು ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈ ಸರ್ಕಾರ ತನ್ನ ಆಹಾರ ವಿತರಣೆ ನೀತಿ ಯಿಂದಾಗಿ ಜನ ಸಾಮಾನ್ಯರನ್ನು ಕತ್ತಲಿನ ಕೂಪದಲ್ಲಿ ದಬ್ಬಿ ಬಿಟ್ಟಿದ್ದಾರೆ. ದಿನನಿತ್ಯ ಕೂಡ ಮಹಿಳೆಯರು ಕಣ್ಣೀರು ಹರಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿ ದರೆ, ಆಹಾರ ನೀತಿಯಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಸನ್ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ಸಾಕಷ್ಟು ರೀತಿ ಯಲ್ಲಿ ಪೇಟೆಯಲ್ಲಿ ಕಲಬೆರಕೆಯಾಗುತ್ತಿದೆ. ಈ ಸರ್ಕಾರ ಅಂತಹವರ ಬಗ್ಗೆ ಹೆಚ್ಚಿಗೆ ಕ್ರಮ ತೆಗೆದು ಕೊಳ್ಳುತ್ತದೆ ಎಂದು ಹೇಳಿದ್ದಾರೆ. ಆದರೆ ಇವತ್ತೂ ಕೂಡ ಅನೇಕ ಕಡೆ ಸಾಕಷ್ಟು ಸಂಖ್ಯೆಯಲ್ಲಿ ದೂರುಗಳನ್ನು ನಾವು ನೋಡುತ್ತಿದ್ದೇವೆ. ಆದರೆ ಸರ್ಕಾರ ಆ ಬಗ್ಗೆ ಏನೂ ಕ್ರಮ ತೆಗೆದು ಕೊಳ್ಳಲಿಲ್ಲ. ಇಷ್ಟನ್ನು ಹೇಳಿ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ನಂಜಪ್ಪ (ಗಂಡಸಿ).—ಸನ್ಮಾನ್ಯ ಸಭಾಧ್ಯಕ್ಷರೆ, ಆಹಾರ ಮತ್ತು ನಾಗರೀಕ ಪೂರೈಕೆ ಸಚಿ ವರು ಡಿಮ್ಯಾಂಡ್ ನಂ. ೨೦ನ್ನು ಏನು ಸದನದಲ್ಲಿ ಮಂಡಿಸಿದ್ದಾರೆ, ಆ ಬೇಡಿಕೆಯನ್ನು ನಾನು ಸಮರ್ಥನೆ ಮಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದುವರೆವಿಗೂ ಆಹಾರ ಮತ್ತು ನಾಗರೀಕ ಪೂರೈಕೆ ಬೇಡಿಕೆಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿದಂತಹ ಕೆಲವು ಹಿರಿಯ ಸದಸ್ಯರು ಗ್ರಾಹಕರ ಹಿತಾಶಕ್ತಿಯ ಬಗ್ಗೆ ಕೆಲವು ಮಹತ್ತರವಾದ ಸೂಚನೆಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ನಾಳೆ ವ್ಯವಸಾಯ ಇಲಾಖೆಯ ಬೇಡಿಕೆ ಬಂದಾಗ ರೈತರ ಬಗ್ಗೆ ಅನುಕಂಪವನ್ನು ಬಹುಶಃ ಇದೇ ಸದಸ್ಯರು ವ್ಯಕ್ತ ಪಡಿಸುತ್ತಾರೆಂದು

ನಾನು ಭಾವಿಸಿಕೊಂಡಿದ್ದೇನೆ. ರೈತರ ಬಗ್ಗೆ ಒಂದು ಲಿಪ್ ಸಿಂಪತಿ, ಅನುಕಂಪ ಅದೇ ರೀತಿ ಗ್ರಾಹಕರ ವಿಷಯ ಬಂದಾಗ ಅವರ ಬಗ್ಗೆ ಒಂದು ಲಿಪ್ ಸಿಂಪತಿ ಅನುಕಂಪ ಈ ಸದನದಲ್ಲಿ ನಡೆಯು ತ್ತಿರುವುದನ್ನು ನಾನು ಗಮನಿಸಿದ್ದೇನೆ. ಇದುವರೆಗೂ ಟೊಮ್ಯಾಟೋ, ಕೊತ್ತಂಬರಿ ಸೊಪ್ಪು, ಬದನೇ ಕಾಯಿ ಇದರ ಬೆಲೆ ಏರಿಕೆಯ ಬಗ್ಗೆ ಕೆಲವು ಹಿರಿಯ ಸದಸ್ಯರು ಹಿಂದೆ ಪ್ರಸ್ತಾಪ ಮಾಡಿ ರೈತರ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸಿದ್ದುಂಟು. ಆ ಬೆಲೆಗಳು ಗಗನಕ್ಕೆ ಏರಿವೆ ಎನ್ನುವ ವಿಷಯದ ಬಗ್ಗೆ ಹೇಳಿದರು. ಬಹುಶಃ ಇಂತಹ ಪದಾರ್ಥಗಳನ್ನು ಸರ್ಕಾರ ದಾಸ್ತಾನು ಮಾಡಿ ಸುಲಭ ಬೆಲೆಗೆ ವಿತರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ರೈತರು ಬೆಳೆದಂತಹ ಈ ಪದಾರ್ಥಗಳಿಗೆ ಎಂದರೆ ಟೊಮ್ಯಾಟೊಗೆ ಒಂದು ಕೇಜಿಗೆ ೩೦ ಪೈಸೆಯಾಗಿದೆ. ಇಂತಹ ಸಂದರ್ಭದಲ್ಲಿ ರೈತರ ಕಷ್ಟವನ್ನು ನೋಡಿದಾಗ ರೈತರ ಈ ಸಂಕಷ್ಟಕ್ಕೆ ಯಾರು ಬಂದು ಅವನನ್ನು ಈ ಸಂಕಷ್ಟದಿಂದ ಪಾರು ಮಾಡುತ್ತಾರೆಂಬುದನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ರೈತ ತಾನು ಬೆಳೆದಂತಹ ಪದಾರ್ಥಗಳಿಗೆ ಕೊಡಬೇಕಾಗಿರುವಂತಹ ನ್ಯಾಯ ವಾದ ಬೆಲೆಯ ವಿಷಯವನ್ನೂ ಕೂಡ ನಾವು ಈ ಸಂದರ್ಭದಲ್ಲಿ ಚಿಂತನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಹಿಂದಿನ ಸರ್ಕಾರ ರೂಪಿಸಿದ ಮಿಲ್ ಪಾಯಿಂಟ್ ಲೆವಿ ಪದ್ಧತಿ ಮತ್ತು ಅಕ್ಕಿಯ ವಿತರಣೆಯ ಬಗ್ಗೆ ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ಹೇಳಬೇಕಾದರೆ, ಇದನ್ನು ಒಂದು ಆಡಳಿತಾತ್ಮಕ ದೃಷ್ಟಿಯಿಂದ ನೋಡಿದರೆ ಇಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಮಿಲ್ ಪಾಯಿಂಟ್ ಲೆವಿಯನ್ನು ಈ ರಾಜ್ಯದಲ್ಲಿ ಜಾರಿಗೆ ತಂದು ಭ್ರಷ್ಟಾಚಾರವನ್ನು ಹೆಚ್ಚು ಮಾಡುವುದಕ್ಕೆ ಬಹುಶಃ ಹಿಂದೆ ಮಾಡಿದಂತಹ ಸರ್ಕಾರದ ನೀತಿಯೇ ಕಾರಣ ಎಂಬುದಾಗಿ ಸ್ಪಷ್ಟವಾಗಿ ಈ ಸದನದಲ್ಲಿ ನಾನು ತಿಳಿಸುವುದಕ್ಕೆ ಬಯಸುತ್ತೇನೆ. ರೈತನಿಂದ ಬರುವಂತಹ ಲೆವಿ ಬತ್ತವನ್ನು ವಸೂಲು ಮಾಡುವು ದಕ್ಕೆ ತಂದಂತಹ ಸುಧಾರಣೆ ಈ ನಿಯಮ ಪ್ಯಾಡಿ ಗ್ರೋಯಿನ್ ಏರಿಯಾದಲ್ಲಿತ್ತು. ಬೆಳೆದಂತಹ ಭತ್ತ ಹಾಗೂ ದಾಸ್ತಾನಿನ ಭತ್ತದಲ್ಲಿ ಇಂತಿಷ್ಟು ಪ್ರಮಾಣದಲ್ಲಿ ಲೆವಿಯನ್ನು ಕೊಡಬೇಕು ಎಂದು ಇತ್ತು. ಆದರೆ ರೈಸ್ ಮಿಲ್ ಮಾಲೀಕರು ಭತ್ತವನ್ನೂ ಬೆಳೆಯುವುದಿಲ್ಲ ಮತ್ತು ಸ್ಟಾಕನ್ನೂ ಇಟ್ಟಿರುವುದಿಲ್ಲ. ಅವನಿಂದ ಲೆವಿಯನ್ನು ವಸೂಲಿ ಮಾಡುವಂತಹ ಒಂದು ಗುರಿ ಏನಿದೆ ಅದು ಲೋಪದೋಷದಿಂದ ಕೂಡಿರತಕ್ಕಂತಹ ಗುರಿಯಾಗಿದೆ. ಈ ಲೆವಿ ನೀತಿಯಿಂದಾಗಿ ಅಕ್ಕಿ ಮತ್ತು ಭತ್ತ ನಮ್ಮ ರಾಜ್ಯದಲ್ಲಿ ಸಾಕಷ್ಟು ದಾಸ್ತಾನು ಇಡದೆ, ಸರ್ಕಾರ ಈ ಒಂದು ಸಂಕಷ್ಟದಲ್ಲಿ ಸಿಲುಕಿದೆ ಎಂದು ಹೇಳಿದರೆ ತಪ್ಪಾಗ ಲಾರದು. ಅದಕ್ಕೆ ಅನುಗುಣವಾಗಿ ಸದನದ ಗಮನಕ್ಕೆ ನಾನು ಕೆಲವು ವಿಷಯಗಳನ್ನು ತರುವುದಕ್ಕೆ ಬಯಸುತ್ತೇನೆ. ಅಕ್ಕಿ ಗಿರಣಿಗಳಿಂದ. ಭಾರತ ಆಹಾರ ನಿಗಮದವರು ಸಂಗ್ರಹಿಸಬೇಕಾದ ಗುರಿ ೧೬,೮೭,೦೫೦ ಟನ್ ಆಗಿದ್ದರೆ, ಸಂಗ್ರಹಿಸಿದ್ದು ೪೦,೯೭೮ ಟನ್ ಅದೇ ರೀತಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಸಂಗ್ರಹಿಸಬೇಕಾಗಿದ್ದಂತಹ ಗುರಿ ೫೦ ಸಾವಿರ ಟನ್ ಆಗಿದ್ದರೆ ಸಂಗ್ರಹಿ ಸಿದ್ದು ೩೫ ಸಾವಿರ ಟನ್. ಒಟ್ಟು ೨,೧೮,೦೦೦ ಟನ್ ಆಹಾರವನ್ನು ಸಂಗ್ರಹಿಸಬೇಕಾಗಿತ್ತು. ಆದರೆ ಸಂಗ್ರಹಿಸಿದಂತಹ ಆಹಾರ ೨೦,೦೦೦ ಟನ್ ಅಕ್ಕಿ ಮಾತ್ರ. ಈ ರೀತಿ ಸುಮಾರು ೧,೯೮,೦೦೦ ಟನ್ ಆಹಾರವನ್ನು ದಾಸ್ತಾನು ಮಾಡದೆ ಈ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ. ಆಹಾರ ಇಲಾಖೆಯ ಬೇಡಿಕೆಯಲ್ಲಿ ಅಕ್ಕಿಯ ಪೂರೈಕೆಯನ್ನು ನಮ್ಮ ಸರ್ಕಾರ ಹಾಕಿಕೊಂಡು ಅದನ್ನು ಪೂರೈಸುವುದಕ್ಕೆ ಸಾಧ್ಯವಾಗಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಅದಕ್ಕಾಗಿ ಸನ್ಮಾನ್ಯ ಮಂತ್ರಿಗಳನ್ನು ಸಭಾಧ್ಯಕ್ಷರ ಮೂಲಕ ಒತ್ತಾಯ ಮಾಡುವುದೇನೆಂದರೆ, ರೈತನಿಂದ ಈ ಲೆವಿಯನ್ನು ವಸೂಲು ಮಾಡುವಂತಹ ಕ್ರಮವನ್ನು ಈಗಿನಿಂದಲಾದರೂ ಜಾರಿಗೊಳಿಸಿ. ಅವನಿಗೆ ನ್ಯಾಯವಾದ ಬೆಲೆಯನ್ನು ಕೊಟ್ಟು ದಾಸ್ತಾನು ಮಾಡುವಲ್ಲಿ, ವಿತರಣೆ ಮಾಡುವುದರಲ್ಲಿ ಆಗುವಂತಹ ವೆಚ್ಚ ಏನಿದೆ ಅದನ್ನು ಕಡಿಮೆ ಮಾಡಿ, ಗ್ರಾಹಕರಿಗೆ ಒಳ್ಳೆಯ ಅಕ್ಕಿಯನ್ನು ಕಡಿಮೆ ದರದಲ್ಲಿ ಕೊಡುವಂತೆ ಮಾಡಿ ಮತ್ತು ರೈತನಿಗೆ ಏನು ಖರ್ಚಾಗಿದೆ ಎಂಬುದನ್ನು ನೋಡಿಕೊಂಡು ಒಳ್ಳೆಯ ದರವನ್ನು ಅವನಿಗೆ ಕೊಡಿ. ಗ್ರಾಹಕನಿಗೂ ಹಾಗೂ ಉತ್ಪಾದಕನಿಗೂ ಮಧ್ಯೆ ಇರುವಂತಹ ಮಧ್ಯವರ್ತಿಗಳ ಕಾಟವನ್ನು ತಪ್ಪಿಸಬೇಕು. ಅದಕ್ಕಾಗಿ ಒಂದು ಸೂಕ್ತ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ಸಭಾಧ್ಯಕ್ಷರ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿತರಣಾ ವ್ಯವಸ್ಥೆಯಲ್ಲಿ ಅನೇಕ ಹಿರಿಯ ಸದಸ್ಯರು ಮೊದಲು ಮಾತನಾಡುವಾಗ ಸಮಾಜದ ವ್ಯವಸ್ಥೆಯಲ್ಲಿ ಏನು ಲೋಪದೋಷಗಳಿವೆ ಎನ್ನುವ ವಿಷಯವನ್ನು ಬಹುಶಃ ಸಭೆಯ ಗಮನಕ್ಕೆ ತಂದು ಸನ್ಮಾನ್ಯ ಮಂತ್ರಿಗಳು ಅದನ್ನು ಕೂಡಲೇ ತಿದ್ದುಪಡಿ ಮಾಡುವಂಥ ಸೂಚನೆಗಳನ್ನು ನೀಡಲಿಲ್ಲ. ನಾನು ಅದಕ್ಕಾಗಿ ಅನೇಕ ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡು ತ್ತೇನೆ. ಮೊಟ್ಟಮೊದಲನೆಯದಾಗಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಸೀಮೆಎಣ್ಣೆ ಇರ ಬಹುದು, ಅಥವಾ ಅಕ್ಕಿ ಆಗಿರಬಹುದು, ಗೋಧಿ ಆಗಿರಬಹುದು, ರವೆ ಆಗಿರಬಹುದು, ಆ ಪದಾರ್ಥ ಗಳನ್ನು ವಿತರಣೆಗೆ ತೆಗೆದುಕೊಂಡು ಹೋಗುವಂತಹ ವ್ಯಕ್ತಿಗಳು ಅಲಾಟ್ ಆದ ಪ್ರಮಾಣದಲ್ಲಿ

ಅದನ್ನು ತೆಗೆದುಕೊಳ್ಳದೆ ಸಾಮಾನ್ಯ ಜನರಿಗೆ ಅದನ್ನು ವಿತರಣೆ ಮಾಡದೆ ಅದನ್ನು ಮಧ್ಯದಲ್ಲೇ ಮಾರಾಟ ಮಾಡುವಂತಹ ಒಂದು ವ್ಯವಸ್ಥೆಯನ್ನು ಇವತ್ತು ನಾವು ತಾಲ್ಲೂಕು ಮಟ್ಟದಲ್ಲಿ ನೋಡುತ್ತಿದ್ದೇವೆ. ಈ ವ್ಯವಸ್ಥೆಯನ್ನು ನಮ್ಮ ಸರ್ಕಾರದ ಮತಿಯಿಂದ ತಪ್ಪಿಸಿ ಏನು ಪಟ್ಟಭದ್ರ ಹಿತಾಶಕ್ತಿಗಳು ನಮ್ಮ ದೇಶದಲ್ಲಿ ದೊಡ್ಡದಾಗಿ ಬೆಳೆದುಬಂದಿವೆ, ಅವುಗಳನ್ನು ಈಗಲಾದರೂ ಬದಲಾಯಿಸಬೇಕು. ಅವರು ಈ ಸರ್ಕಾರದ ಆಹಾರದ ನೀತಿಯನ್ನು ಬುಡಮೇಲು ಮಾಡಿ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವಂಥ ವ್ಯವಸ್ಥೆ ಮಾಡಿದ್ದಾರೆ. ಈ ವಿತರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ತಪ್ಪಿಸಿ ಬೇರೆಯವರನ್ನು ಈ ಬಗ್ಗೆ ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಕಾರ್ಡುಗಳನ್ನು ಹಂಚಿಕೆ ಮಾಡುವಂತಹ ಸಂದರ್ಭದಲ್ಲಿ ಅನೇಕ ಖೋಟಾ ಕಾರ್ಡುಗಳನ್ನು ಇಟ್ಟುಕೊಂಡು ಆಹಾರವನ್ನು ವಿತರಣೆ ಮಾಡುವುದಕ್ಕೆ ಅವರಿಗೆ ಏನು ಧಾನ್ಯ ನೀಡುತ್ತಿದ್ದಾರೆ ಅದನ್ನು ತೆಗೆದುಕೊಂಡು ಬ್ಲಾಕ್ ಮಾರ್ಕೆಟ್ ಮಾಡುವಂತಹ ವ್ಯವಸ್ಥೆ ಅಲ್ಲಿದೆ. ಇದು ಬಹುಭಾಗ ಎಲ್ಲಾ ಕಡೆಯಲ್ಲೂ ಇದೆ. ಆದ್ದರಿಂದ ಇದನ್ನೆಲ್ಲಾ ಕಂಡುಹಿಡಿದು ಹೊಸದಾಗಿ ಕಾರ್ಡುಗಳನ್ನು ಕೊಡಬೇಕು, ಖೋಟಾ ಕಾರ್ಡುಗಳನ್ನು ವಾಪಸ್ಸು ತೆಗೆದುಕೊಂಡು ಹೊಸ ಕಾರ್ಡುಗಳ ವಿತರಣಾ ವ್ಯವಸ್ಥೆ ಮಾಡಬೇಕೆಂದು ಮಂತ್ರಿವರ್ಯರನ್ನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಸೀಮೆಎಣ್ಣೆ ವಿತರಣೆಯಲ್ಲಿ ನಮ್ಮ ತಾಲ್ಲೂಕು ಮಟ್ಟದಲ್ಲಾಗಲಿ, ಅಥವಾ ಜಿಲ್ಲಾ ಮಟ್ಟದಲ್ಲಾಗಲಿ ನೋಡಿದಾಗ ಯಾವ ಪ್ರಮಾಣದಲ್ಲಿ ಸೀಮೆಎಣ್ಣೆ ವಿತರಣೆ ಮಾಡುವಂತಹ ಡೀಲರ್ಸ್ ಏನಿದ್ದಾರೆ ಅವರು ಅಷ್ಟು ಪ್ರಮಾಣದಲ್ಲಿ ಸೀಮೆಎಣ್ಣೆಯನ್ನು ತೆಗೆದುಕೊಂಡು ತಾಲ್ಲೂಕು ಮಟ್ಟದಲ್ಲಿರುವ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಣೆ ಮಾಡುತ್ತಿಲ್ಲ. ಆದರೆ ತೆಗೆದುಕೊಂಡು ಹೋದಂತಹ ಸೀಮೆಎಣ್ಣೆಯನ್ನು ಏನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಸೂಕ್ತವಾಗಿ ಸರ್ಕಾರದವರು ಅದನ್ನು ಗಮನಿಸಿ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ ವ್ಯವಸ್ಥೆ ಬಹಳ ದಿವಸಗಳಿಂದ ಬೆಳೆದು ಬಂದಿದೆ. ಅಧಿಕಾರಿಗಳೂ ಕೂಡ ಇದರಲ್ಲಿ ಬಹಳಮಟ್ಟಿಗೆ ತೊಡಗಿರುವಂತಹದ್ದು ನಮ್ಮ ಗಮನಕ್ಕೆ ಬಂದಿದೆ. ಅಂತಹವರನ್ನೂ ಕೂಡ ಶಿಕ್ಷಿಸಿ ಸಾಮಾನ್ಯ ಜನರ ರಕ್ಷಣೆ ಮಾಡತಕ್ಕಂತಹ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿದೆ ಎಂಬುದಾಗಿ ನಾನು ಭಾವಿಸುತ್ತೇನೆ. ಅದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಂಡು ಈ ಆಹಾರ ವಿತರಣಾ ವ್ಯವಸ್ಥೆಯನ್ನು ಸುವ್ಯವಸ್ಥೆಯನ್ನಾಗಿ ಮಾಡಿ ಜನರಿಗೆ ಅನುಕೂಲ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಸಭೆಯ ಮುಂದಿಟ್ಟಿರುವ ಬೇಡಿಕೆ ೨೦ರ ಬಗ್ಗೆ ಮಾರ್ಕಿಸ್ಟ್ ಕಮ್ಯುನಿಸ್ಟ್ ಪಾರ್ಟಿಯ ಪರವಾಗಿ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಅನೇಕ ಜನ ಮಿತ್ರರು ಮಾತನಾಡಿದ್ದಾರೆ. ರಾಜ್ಯದಲ್ಲಿ ಬೆಲೆಗಳ ಏರಿಕೆಯಿಂದಾಗಿ ಜನಸಾಮಾನ್ಯರು ತಲ್ಲಣಿಸಿ ಹೋಗಿದ್ದಾರೆ. ಇದಕ್ಕೆ ಕಾರಣಗಳನ್ನು ಒಬ್ಬೊಬ್ಬರು ಒಂದೊಂದನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಮಾರ್ಚಿನಿಂದ ಈಚೆಗೆ ಬೆಲೆ ಏರುವುದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕಾರಣ. ಬೆಲೆ ಏರುವುದಕ್ಕೆ ಕೇಂದ್ರ ಸರ್ಕಾರ ಕಾರಣವಲ್ಲ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಕೇಂದ್ರ ಸರ್ಕಾರ ಕಾರಣವಲ್ಲ ಎಂದು ಹೇಳಲಿಲ್ಲ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬುಲೆಟ್‌ನಲ್ಲಿ ಬಂದಿದ್ದುದನ್ನು ನಾನು ಹೇಳಿದೆ. ನಾನು ಹೇಳದೆ ಇರುವುದನ್ನು ಮಾನ್ಯ ಸದಸ್ಯರು ಇಲ್ಲಿ ಹೇಳುವುದು ಬೇಡ.

ಡಾ|| ವಿ.ಎಸ್. ಆಚಾರ್ಯ.—ತಾವು ಎಲ್ಲವನ್ನೂ ಕೂಡಿಸಿ ಹೇಳಿದ್ದರಿಂದ ಈ ಕನ್‌ಫ್ಯೂಷನ್ ಆಯಿತು. ತಾವು ಎಸೆನ್ಸಿಯಲ್ ಕಮಾಡಿಟಿಸ್ ಬಗ್ಗೆ ಪ್ರತ್ಯೇಕವಾಗಿ ಹೇಳಿದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಬೆಲೆ ಏರಿಕೆಗೆ ಕೇಂದ್ರ ಸರ್ಕಾರ ಕಾರಣ ಹೇಗೆ ಎಂದರೆ, ಪೆಟ್ರೋಲ್ ಬೆಲೆ ಏರಿಕೆಯಾಗಿದೆ, ರೈಲ್ವೆ ಸಾಗಾಣಿಕೆಯ ದರ ಏರಿಕೆಯಾಗಿದೆ, ಈ ಎಲ್ಲಾ

---

† ಈ ಚಿನ್ಹೆ ಸಂಭಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಾರಣಗಳಿಂದ ಬೆಲೆಗಳ ಏರಿಕೆಯೂ ಆಗಿದೆ ಎನ್ನುವುದನ್ನು ನಾವು ಯಾರೂ ಮರೆಯುವ ಹಾಗಿಲ್ಲ. ಮತ್ತೆ ನಮ್ಮ ರಾಜ್ಯ ಸರ್ಕಾರ ಸಗಟು ವ್ಯಾಪಾರವನ್ನು ತೆಗೆದುಕೊಳ್ಳದೆ ಪ್ರಕ್ಯೂರ್‌ಮೆಂಟ್ ಮಾತ್ರ ಮಾಡಿದ್ದಾರೆ. ರೈತರಿಗೂ ಇಲ್ಲಿ ನ್ಯಾಯವಾದ ಬೆಲೆಯನ್ನು ಕೊಡದೆ ಹಿಂದು ಮುಂದು ನೋಡಿ ಅವರಿಗೂ ಸಹ ಇತರೆ ವಸ್ತುಗಳ ಬೆಲೆ ಏರಿಕೆಯು ಕಾರಣವನ್ನು ಹೇಳಿರುವುದನ್ನು ನಾವು ಮರೆಯುವ ಹಾಗಿಲ್ಲ. ಆದರೆ ತಮ್ಮ ವರದಿಯಲ್ಲಿ ಮಾನ್ಯ ಮಂತ್ರಿಗಳು ಆಹಾರದಲ್ಲಿ ನಾವು ಕೊರತೆಯನ್ನು ಕಾಣುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. Karnataka is generally considered as a marginally surplus state in respect of rice. However, the surplus is dependent upon good seasonal conditions. ಎಂದು ಹೇಳಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ನಮ್ಮಲ್ಲಿ ಶೇಕಡ ೬೦ ಜನ ಬಿಲೋ ಪಾವರ್ಟಿ ಲೈನ್‌ನಲ್ಲಿದ್ದಾರೆ. ಒಂದು ಹೊತ್ತು ಊಟಕ್ಕೆ ಇಲ್ಲದೆ ಇರತಕ್ಕ ಜನರು ಇದ್ದಾರೆ. ಪರಿಸ್ಥಿತಿ ಹೀಗಿರುವಾಗ ನಾವು ಆಹಾರದಲ್ಲಿ ಸರ್ಪ್ಲಸ್ ಆಗಿದ್ದೇವೆಂದು ಹೇಳುವ ಮಾತು ಸರಿಯಲ್ಲ. ಇದರಿಂದಾಗಿ ನಮ್ಮ ಪ್ರಕ್ಯೂರ್‌ಮೆಂಟ್ ಪಾಲಿಸಿಯೂ ಸಹ ತಪ್ಪು ಹಾದಿಯಲ್ಲಿ ಹೋಗಲಿಕ್ಕೆ ಸಾಧ್ಯವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕ ಭೂಮಿಯನ್ನು ಸಾಗುವಳಿಗೆ ತರುವುದರಲ್ಲಿ, ಹೆಚ್ಚು ಭೂಮಿಯನ್ನು ನೀರಾವರಿ ಮಾಡುವುದರಲ್ಲಿ ನಾವು ಬಹಳ ಹಿಂದೆ ಬಿದ್ದಿದ್ದೇವೆ. ಇದಲ್ಲದೆ ರಾಜ್ಯದಲ್ಲಿ ಲ್ಯಾಂಡ್ ರಿಫಾರಂಸ್ ಸರಿಯಾದ ರೀತಿಯಲ್ಲಿ ಜಾರಿಯಾಗದೇ ಇರುವುದಕ್ಕೆ ಮತ್ತು ರೈತನಿಗೆ ಸರಿಯಾದ ರೀತಿಯಲ್ಲಿ ಉತ್ತೇಜನ ದೊರೆಯದೆ ಇದ್ದುದರಿಂದ ನಮಗೆ ಆಹಾರದ ಕೊರತೆಯಾಗಿದೆ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಭೂಸುಧಾರಣೆಯೂ ಕಾರಣ ಎನ್ನುವುದನ್ನು ಯಾರೂ ಮರೆಯಬಾರದು. ಚೈನಾದಲ್ಲಿ ನಮಗಿಂತಲೂ ಕಡಿಮೆ ಭೂಮಿ ಸಾಗುವಳಿಯಾಗುತ್ತಿದ್ದರೂ ಸಹ ನಮಗಿಂತ ಎರಡೂವರೆಯಷ್ಟು ಜಾಸ್ತಿ ಆಹಾರವನ್ನು ಅವರು ಬೆಳೆಯುವುದಕ್ಕೆ ಕಾರಣ ಫರ್ಟಿಲೈಸರ್ಸನ್ನು ಉಪಯೋಗ ಮಾಡದೆ ಲೊಕಲ್ ಮೆನ್ಯೂರ್‌ನ್ನು ಉಪಯೋಗ ಮಾಡಿದ್ದರ ಜೊತೆಗೆ ಭೂಮಿಯ ಹಂಚಿಕೆಯೂ ಕಾರಣವಾಗಿದೆ. ರಾಜ್ಯದಲ್ಲಿ ಶೇಕಡ ೪೦ರಷ್ಟು ಜನ ಕೃಷಿ ಕಾರ್ಮಿಕರು ಇದ್ದಾರೆ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸರಿಯಾದ ಮೇಲ್ವಿಚಾರಣೆಯಲ್ಲಿ ಇಲ್ಲದೇ ಇದ್ದುದರಿಂದ ಇದಕ್ಕೆ ತಾವು ಸಿಟಿಜನ್ಸ್ ಕಮಿಟಿಗಳನ್ನು ಮಾಡದೆ ಇದ್ದರೆ ಇರತಕ್ಕ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಹಿಂದಿನ ಸರ್ಕಾರದವರು ಮಾಡದೆ ಇದ್ದು ಹೋದರು. ಈ ೩೫ ವರ್ಷಗಳ ಪರಂಪರೆಗೆ ತಾವು ಪೂರ್ಣ ವಿರಾಮವನ್ನು ಹಾಕಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮೂರು ಜನರ ಒಂದು ಕಮಿಟಿಯನ್ನು ಮಾಡಿ ಬೆಲೆ ಏರಿಕೆಯ ಬಗ್ಗೆ ವರದಿಕೊಟ್ಟು ಬೆಲೆಗಳನ್ನು ಏರದಂತೆ ತಡೆಗಟ್ಟುತ್ತೇವೆಂದು ಹೇಳಿದರು. ಇವತ್ತಿನ ದಿವಸ ಕಾರ್ಮಿಕರು ಕ್ಯಾಷ್ಯೂ ಗಾರ್ಡನ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಕಡಿಮೆ ಕೂಲಿ ಇದೆ. ಬೀಡಿ ಕೆಲಸಗಾರರಿಗೆ ಕಡಿಮೆ ಕೂಲಿ ಇದೆ, ಈ ರೀತಿಯಾಗಿ ಹತ್ತು ಸಾವಿರ ಜನರು ಕಡಿಮೆ ಕೂಲಿಯನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ ಇವರು ಹೇಗೆ ನಾಲ್ಕು ರೂಪಾಯಿಗಳನ್ನು ಕೊಟ್ಟು ಕೆ.ಜಿ. ಅಕ್ಕಿಯನ್ನು ಕೊಳ್ಳಬೇಕು? ಇದನ್ನು ಸರ್ಕಾರದವರೇ ವಿಚಾರ ಮಾಡಬೇಕಾಗುತ್ತದೆ. ಸರ್ಕಾರದವರು ಇವರಿಗೆ ಆಹಾರ ಪೂರೈಕೆ ವಿಚಾರದಲ್ಲಿ ಮತ್ತು ಜನಗಳಿಗೆ ನ್ಯಾಯವಾದ ಬೆಲೆಯನ್ನು ಕೊಡುವ ವಿಚಾರದಲ್ಲಿ ವೈಫಲ್ಯತೆಯನ್ನು ಹೊಂದಿದ್ದಾರೆ ಎನ್ನುವುದನ್ನು ನಾವು ಮನಗಾಣಿಸಬೇಕಾಗಿದೆ. ಜನಸಾಮಾನ್ಯರ ಜೀವನ ದುಸ್ತರವಾಗುತ್ತಿದೆ, ಎಲ್ಲಾ ಕಡೆ ಜೀವನ ಕಷ್ಟದಲ್ಲಿ ನಡೆಯುತ್ತಿದೆ, ಈಗ ಆಂಧ್ರದಿಂದ ಬರುತ್ತಿದ್ದ ರೈಸ್ ಸಹ ನಿಂತು ಹೋಗಿದೆಯೆಂದು ಕೇಳಿದ್ದೇನೆ. ಕಳೆದ ವರ್ಷ ರಾಜ್ಯದ ೧೬ ಜಿಲ್ಲೆಗಳಲ್ಲಿ ಬರಗಾಲ ಬಿದ್ದಾಗ ಕೇಂದ್ರದವರು ರಾಜ್ಯಕ್ಕೆ ಜಾಸ್ತಿ ಅಕ್ಕಿಯನ್ನು ಕೊಡಬೇಕಾಗಿತ್ತು, ಮಾನ್ಯ ಮೊಯಿಲಿಯವರು ಹತ್ತು ಸಾವಿರ ಟನ್ ಕೊಟ್ಟಿದ್ದಾರೆಂದು ಹೇಳಿದರು. ರಾಜ್ಯ ಸರ್ಕಾರದವರು ಕೇಂದ್ರಕ್ಕೆ ಎಷ್ಟು ಬೇಕು ಎಂದು ಹೇಳಿದ್ದರು ಅವರು ಕೊಟ್ಟಿದ್ದು ಎಷ್ಟು ಎನ್ನುವುದನ್ನು ನಾವು ನೋಡಬೇಕಾಗಿದೆ. ೪೦ ಸಾವಿರ ಟನ್ ಅಕ್ಕಿ ಬೇಕು ಎಂದು ಕೇಳಿದರೆ ಅವರು ೩೫ ಸಾವಿರ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆ. ಸಕ್ಕರೆ ೨೨ ಸಾವಿರ ಟನ್ ಬೇಕು ಎಂದರೆ ೧೫ ಸಾವಿರ ಟನ್ ಕೊಟ್ಟಿದ್ದಾರೆ ಕೆರೋಸಿನ್ ೩೪ ಸಾವಿರ ಲೀಟರ್ಸ್ ಬೇಕು ಎಂದರೆ ೧೯ ಸಾವಿರ ಲೀಟರ್ ಕೊಟ್ಟಿದ್ದಾರೆ. ಕಳೆದ ಬಾರಿ ಬರಗಾಲ ಪರಿಸ್ಥಿತಿ ಇದ್ದಾಗ ಪ್ರಕ್ಯೂರ್‌ಮೆಂಟ್ ಕಡಿಮೆ ಇದ್ದುದರಿಂದ ಕೇಂದ್ರದವರು ಜಾಸ್ತಿ ಆಹಾರ ಧಾನ್ಯಗಳನ್ನು ಅಗತ್ಯ ವಸ್ತುಗಳನ್ನು ರಾಜ್ಯಕ್ಕೆ ಕೊಡಬೇಕಾಗಿತ್ತು. ಆದರೆ ಅವರು ಪರಿಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇದ್ದುದರಿಂದ ವ್ಯವಸ್ಥೆ ಅಸ್ತವ್ಯಸ್ತವಾಯಿತು. ಕರ್ನಾಟಕದಲ್ಲಿ ರೈತರು ಬೆಳೆಯದೆ ಇದ್ದರೆ ಪ್ರಕ್ಯೂರ್‌ಮೆಂಟ್ ಮಾಡುವುದಾದರೂ ಹೇಗೆ? ಇಂಥ ಸಂದರ್ಭದಲ್ಲಿ ಕೇಂದ್ರದವರ ನೆರವು ಅತ್ಯಗತ್ಯವಾಗಿತ್ತು, ಅದು ಬರಲಿಲ್ಲ. ಇದನ್ನು ನಾವು ಮರೆಯಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕಾರ್ಪೊರೇಷನ್

ನವರು ಸುಗ್ಗಿ ಕಾಲದಲ್ಲಿ ಮಾರ್ಕೆಟ್‌ಗೆ ಹೋಗುವುದಿಲ್ಲ. ಇವರು ಸುಗ್ಗಿ ಕಾಲದಲ್ಲಿ ಕಣ್ಣು ಮುಚ್ಚಿ ಕೊಂಡು ಕುಳಿತಿದ್ದರಿಂದ ಮಾರ್ಜಿನಲ್ ರೈತರು, ಸಣ್ಣ ರೈತರು ಏನು ಬೆಳೆದಿರುತ್ತಾರೋ ಅದನ್ನು ಮಾರಾಟ ಮಾಡಿ ಹೋಗಿರುತ್ತಾರೆ. ಸರಿಯಾದ ಬೆಲೆಯಲ್ಲಿ ಬೆಳೆಗಳನ್ನು ಇವರು ಕೊಂಡುಕೊಳ್ಳು ವುದಕ್ಕೆ ಆಗಲಿಲ್ಲ. ಶ್ರೀಮಂತ ರೈತರು ಯಾರೂ ಸಹ ಸುಗ್ಗಿ ಕಾಲದಲ್ಲಿ ಕಡಿಮೆ ಬೆಲೆಗೆ ಬೆಳೆಗಳನ್ನು ಮಾರಾಟ ಮಾಡುವುದಿಲ್ಲ. ಆದ್ದರಿಂದ ಸುಗ್ಗಿ ಕಾಲದಲ್ಲಿ ನಮ್ಮ ಕಾರ್ಪೊರೇಷನ್‌ನವರು ಮಾರು ಕಟ್ಟೆಗೆ ಹೋಗಿ ಆಹಾರ ಪದಾರ್ಥಗಳನ್ನು ಕೊಂಡು ಸ್ಟಾಕ್ ಮಾಡಿಕೊಂಡರೆ ಜನರಿಗೆ ಕಷ್ಟಕಾಲದಲ್ಲಿ ನೆರವಾಗುವುದಕ್ಕೆ ಸಹಾಯಕವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದೇ ಹೋದರೆ ಇವರು ದುಬಾರಿ ಇದ್ದಾಗ ಪದಾರ್ಥಗಳನ್ನು ಕೊಂಡರೆ ಅದರಿಂದ ಜನಸಾಮಾನ್ಯರಿಗೆ ಅಷ್ಟು ಪ್ರಯೋಜನವಾಗುವುದಿಲ್ಲ. ಈಗಲಾದರೂ ಸಹ ಮುಂದಿನ ವರ್ಷದಿಂದಲಾದರೂ ಸಹ ರೈತರಿಗೆ ಸಪೋರ್ಟಿಂಗ್ ಪ್ರೈಸ್ ಕೊಟ್ಟಾದರೂ ಕೂಡ ದೊಡ್ಡ ಪ್ರಮಾಣ ದಲ್ಲಿ ಆಹಾರ ಪದಾರ್ಥಗಳನ್ನು ಸ್ಟಾಕ್ ಮಾಡಿದರೆ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವಾಗು ತ್ತದೆ. ಇದರಿಂದ ವ್ಯಾಪಾರಸ್ಥರೂ ಸಹ ಬೆಲೆಗಳನ್ನು ಏರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನು ವುದನ್ನು ನಾವು ಮರೆಯಬಾರದು. ಇನ್ನೊಂದು ಅಂಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡ ಬೇಕಾಗಿದೆ. ನಮ್ಮಲ್ಲಿ ಆಹಾರ ಧಾನ್ಯಗಳನ್ನು ಮಾರಾಟ ಮಾಡಿದರೆ ಸರ್ಕಾರದವರು ನಾಲ್ಕು ಪರ್ಸೆಂಟ್ ತೆರಿಗೆಯನ್ನು ಹಾಕುತ್ತಾರೆ. ಕೆಲವು ಅಧಿಕಾರಿಗಳು ಹೇಳುತ್ತಾರೆ, ೫೦ ಪರ್ಸೆಂಟ್ ಲೆವಿ ಕೊಟ್ಟು ಕೇರಳಕ್ಕೆ ಸಾಗಾಣಿಕೆ ಮಾಡಿದರೆ ಸೇಲ್ಸ್ ಟ್ಯಾಕ್ಸ್ ಕೊಡಬೇಕಾಗಿಲ್ಲ, ಇದರ ಬಗ್ಗೆ ಕಾನೂನು ಏನು ಇದೆ ಅದನ್ನು ತಿದ್ದುಪಡಿ ಮಾಡಬೇಕು ಎಂದು. ಕಾನೂನನ್ನು ತಿದ್ದುಪಡಿ ಮಾಡದಿದ್ದರೆ ಅಕ್ಕಿ ಸಾಗಾಣಿಕೆ ಮಾಡುವವರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಈ ಪದ್ಧತಿಯಲ್ಲಿ ಎಷ್ಟು ಅಕ್ಕಿ ಸಾಗಾಣಿಕೆ ಮಾಡಿದರೂ ಇದಕ್ಕೆ ಹೇಳುವವರು ಇಲ್ಲ ಕೇಳುವವರೂ ಇಲ್ಲ ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಅಭಾವ ಪ್ರದೇಶಕ್ಕೆ ಸಹಾಯಾರ್ಥವಾಗಿ ಹೋಗುವಂಥ ಪ್ರಾಮಾಣಿಕ ವ್ಯಾಪಾರಸ್ಥರು ಇದ್ದಾರೆಯೇ? ಅಡಲ್ಟರೇಷನ್ ಮಾಡಿ ದುಡ್ಡು ಮಾಡಬೇಕು ಎನ್ನುವ ವ್ಯಾಪಾರಸ್ಥರು ಇರುವಾಗ ಪ್ರಾಮಾಣಿಕತನವನ್ನು ನಿರೀಕ್ಷೆ ಮಾಡುವುದು ಆಗದೇ ಇರುವ ಕೆಲಸ. ಮಾನ್ಯ ಬಂಗಾರಪ್ಪನವರು ಇಂಟರ್‌ನ್ಯಾಷನಲ್ ಸೆಕ್ಯೂರಿಟಿ ಅಂಡ್ ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟನ್ನು ಎನ್‌ಫೋರ್ಸ್ ಮಾಡುವುದರ ಬಗ್ಗೆ ಹೇಳಿದರು. ಅವರು ಮುಂದುವರೆದು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ್ನು ಎನ್‌ಫೋರ್ಸ್ ಮಾಡಿ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ತಾವು ಎರಡನ್ನೂ ಎನ್‌ಫೋರ್ಸ್ ಮಾಡುವುದಕ್ಕೆ ಆಗುವುದಿಲ್ಲ, ಏಕೆಂದರೆ ಇದರಲ್ಲಿ ದುರುಪಯೋಗವಾಗತಕ್ಕ ಸನ್ನಿವೇಶಗಳೂ ಇವೆ. ಪ್ರಾಮಾಣಿಕ ಜನಗಳ ಮೇಲೆ ಸೇಡು ತೀರಿಸಿಕೊಳ್ಳತಕ್ಕ ಪ್ರಯತ್ನವೂ ಇದರಿಂದ ನಡೆಯಬಹುದು. ಆದ್ದರಿಂದ ಇದನ್ನು ಉಪಯೋಗ ಮಾಡಬಾರದು ಎಂದು ನನ್ನ ಅಭಿಪ್ರಾಯ. ಬೆಲೆ ಏರಿಕೆಯಿಂದ ಜನಗಳಿಗೆ ಈಗಾಗಲೇ ಅತೃಪ್ತಿ ಉಂಟಾಗಿರುವಾಗ ಮತ್ತು ಸರ್ಕಾರ ಬದಲಾವಣೆಯಾದರೂ ಸಹ ಬೆಲೆಗಳನ್ನು ಇಳಿಸು ವುದರಲ್ಲಿ, ಇದರ ಬಗ್ಗೆ ಇವರು ಚುನಾವಣೆಯಲ್ಲಿ ಘೋಷಣೆಯನ್ನು ಮಾಡಿದ್ದರೂ ಸಹ, ಇದನ್ನು ಈಡೇರಿಸುವುದರಲ್ಲಿ ಈ ಸರ್ಕಾರ ವೈಫಲ್ಯತೆಯನ್ನು ಕಂಡಿದೆ ಎಂದು ನಾನು ಹೇಳಬೇಕಾಗಿದೆ.

೬-೩೦ ಪಿ.ಎಂ.

ಡಿಪಾರ್ಟ್‌ಮೆಂಟ್ ಸ್ಟ್ರೀಂಲೈನ್ ಆಗಬೇಕಾಗಿದೆ. ಸೀಮೆ ಎಣ್ಣೆ ಎಷ್ಟು ಬೇಕೋ ಅಷ್ಟು ಸಿಗುತ್ತಾ ಇಲ್ಲ, ಎಲೆಕ್ಟ್ರಿಸಿಟಿ ಇಲ್ಲ, ಹಳ್ಳಿಗಳಲ್ಲಿ ಸೀಮೆ ಎಣ್ಣೆ ಇಲ್ಲ ಒಂದು ಲೀಟರ್‌ಗೆ ೫ ರೂಪಾಯಿಗಳಂತೆ ಮಾರುತ್ತಾ ಇದ್ದಾರೆ. ಈ ರೀತಿಯಾದರೆ ಯಾವ ರೀತಿ ಜನ ಬದುಕುವುದಕ್ಕೆ ಸಾಧ್ಯ ಎಂದು ನಾವು ವಿಚಾರಮಾಡಬೇಕಾಗಿದೆ. ೩೦-೪೦ ಸಾವಿರ ಪಾಪ್ಯುಲೇಷನ್ ಇರುವ ಟೌನ್‌ನಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ತರುತ್ತೇವೆ ಎಂದು ಹೇಳಿದ್ದೀರಿ. ಹೆಚ್.ಎ.ಎಲ್. ಸ್ಯಾನಿಟರಿ ಬೋರ್ಡ್‌ನಲ್ಲಿ ೭೦ ಸಾವಿರ ಜನ ಇದ್ದಾರೆ, ಅಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಆಗಿದೆಯೇ ? ಐ.ಟಿ.ಸಿ. ಐಡೆಂಟಿಫೈ ಏರಿಯಾದಲ್ಲಿ ಒಂದು ಲಕ್ಷ ಜನಸಂಖ್ಯೆ ಇದೆ, ಅಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಆಗಿದೆಯೇ ? ಇಂಡಸ್ಟ್ರಿಯಲ್ ಸಬರ್ಬನ್ ಏರಿಯಾ ಇದೆ, ಹಳ್ಳಿಯ ಪ್ರದೇಶಕ್ಕೆ ಏಕೆ ಇಲ್ಲ ? ಹಳ್ಳಿಯ ಪ್ರದೇಶಕ್ಕೆ ಸಕ್ಕರೆ ಇಲ್ಲ, ಹಳ್ಳಿಯ ರೈತ ನಮಗೆಲ್ಲಾ ಅನುಕೂಲ ಮಾಡಿಕೊಡಬೇಕು, ಅಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಮಾಡಿಲ್ಲ. ಇದು ಇಡೀ ಸ್ಟೇಟಿಗೆ ಬರಬೇಕು. ಹಳ್ಳಿಯ ಜನಗಳಿಗೆ, ಕೃಷಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಮಾಡಬೇಕು. ಅವನಿಗೆ ದಿನಕ್ಕೆ ೪ ರೂಪಾಯಿ ಗಳ ಸಂಬಳ ಬರುತ್ತದೆ. ಅವನು ೫ ರೂಪಾಯಿಗಳನ್ನು ಕೊಟ್ಟು ಒಂದು ಕೇಜಿ ಅಕ್ಕಿಯನ್ನು ಕೊಂಡು ಕೊಳ್ಳುವುದಕ್ಕೆ ಹೇಗೆ ಸಾಧ್ಯ ? ರಾಜ್ಯದಲ್ಲಿ ಯೋಜನೆಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡುತ್ತಾರೆ,

ಅದನ್ನೆಲ್ಲಾ ಕಡಿಮೆ ಇವರಿಗೆ ಅನುಕೂಲವಾಗುವ ಹಾಗೆ ಮಾಡಬೇಕು, ಕೆಲವರು ಸರ್ಕಾರಿ ನೌಕರರಿಗೆ ೩೯೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಇದು ಎಲ್ಲಾ ದೇಶಗಳಲ್ಲಿದೆ ಸ್ವಾಮಿ, ಅದು ನಾನ್ ಪ್ರೊಡಕ್ಟೀವ್ ಇರಬಹುದು, ಆದರೆ ಎಸೆನ್‌ಷಿಯಲ್. ಸರ್ಕಾರಿ ಯಂತ್ರ ಚಾಲನೆ ಆಗಬೇಕಾದರೆ ಸರ್ಕಾರಿ ನೌಕರರಿಗೆ ಕೊಡತಕ್ಕಂಥಾದ್ದನ್ನು ಕೊಡಲೇಬೇಕು, ಅದು ಜಾಸ್ತಿ ಯಾಗುತ್ತದೆ ಎಂದರೆ, ಯಾರು ಕಛೇರಿಯನ್ನು ನಡೆಸುವವರು ? ಇವತ್ತಿನ ದಿವಸ ಬಂಡವಾಳಶಾಹಿ ಸಿಸ್ಟಂ ಇದೆ, ಮತ್ತು ಕರಪ್‌ಷನ್ ಇದೆ. ಇವತ್ತಿನ ದಿವಸ ಇಡೀ ಸಮಾಜದಲ್ಲಿ ಕರಪ್‌ಷನ್ ಇದೆ. ಬಂಡವಾಳಶಾಹಿ ಪದ್ಧತಿ ಹೋದರೆ ಕರಪ್‌ಷನ್ ಹೇಗೆ ಹೋಗುವುದಕ್ಕೆ ಸಾಧ್ಯ ? ನಮ್ಮ ರಾಜಕೀಯ ಮುಖಂಡರುಗಳು ಸ್ವಲ್ಪ ಹಸ್ತವನ್ನು ಶುದ್ಧಿಯಾಗಿಟ್ಟುಕೊಂಡರೆ ಈ ಕರಪ್‌ಷನ್ ಸ್ವಲ್ಪ ಕಡಿಮೆ ಯಾಗುತ್ತದೆ. ನಾವು ರಾಜಕೀಯ ಮುಖಂಡರುಗಳೆಲ್ಲಾ ಇವತ್ತಿನ ದಿವಸ ಕರಪ್ಟಾಗಿ, ಅಧಿಕಾರಿಗಳು ಕರಪ್ಟವರು ಎಂದು ಹೇಳಿದರೆ ಏನು ಪ್ರಯೋಜನ ? ಕರಪ್‌ಷನ್ನು ನಾವು ರೆಡ್ಯೂಸ್ ಮಾಡ ಬೇಕಾದರೆ ಜನಗಳಲ್ಲಿ ನಾವು ಇಂಟಿಗ್ರಿಟಿಯನ್ನು ಬೆಳೆಸಬೇಕು, ಪೆಟ್ರಿಯಾಟಿಕ್ ಫೀಲಿಂಗ್ಸ್ ಜನಗಳಲ್ಲಿ ಬೆಳಸಬೇಕು. ನಮ್ಮ ಕರ್ನಾಟಕದಲ್ಲಿ ೩ ಕೋಟಿ ೪೭ ಲಕ್ಷ ಜನಸಂಖ್ಯೆ ಇದೆ. ಇನ್‌ಫಾರ್ಮಲ್ ರೇಷನಿಂಗ್ ಏರಿಯಾಗಳಲ್ಲಿ ಬರುವುದು ೬೫ ಲಕ್ಷ ಮಾತ್ರ. ಸಬ್ಸಿಡಿ ಏನು ಕೊಡುತ್ತಾರೆ ಅದನ್ನು ರೈತರಿಗೂ ಕೊಡಬೇಕು. ಸಮಾಜವಾದಿ ರಾಷ್ಟ್ರಗಳಿಗೆ ಮಾನ್ಯ ಆಚಾರ್ಯರು ಹೋಗಿ ಬರಬೇಕು. ಅಲ್ಲಿ ರೈತರಿಗೂ ಸಬ್ಸಿಡಿ ಕೊಡುತ್ತಾರೆ, ಕಾರ್ಮಿಕರಿಗೂ ಸಬ್ಸಿಡಿ ಕೊಡುತ್ತಾರೆ.

ಡಾ।। ವಿ.ಎಸ್. ಆಚಾರ್ಯ.—ಆ ೨೮ ಕೋಟಿ ಏನಿದೆ ಅದು ರೈತರಿಗೆ ಮತ್ತು ಕೃಷಿ ಕಾರ್ಮಿಕ ರಿಗೆ ಸಿಕ್ಕಿದರೆ ನನ್ನಷ್ಟು ಖುಷಿ ಪಡುವವರು ಬೇರೆ ಯಾರೂ ಇಲ್ಲ. ಆ ೨೮ ಕೋಟಿ ಇವರಿಬ್ಬರಿಗೂ ಸಿಕ್ಕುವುದಿಲ್ಲ ಎಂದು ಬೇಜಾರು ಅಷ್ಟೆ.

ಶ್ರೀ ಎಸ್ ಸೂರ್ಯನಾರಾಯಣರಾವ್.—ಅದಕ್ಕೆ ಇವತ್ತಿನ ದಿವಸ ನಮ್ಮ ಜೊತೆಗೆ ಬನ್ನಿ. ಹೋಲ್‌ಸೇಲ್ ರೇಟ್ ಫುಡ್‌ಗ್ರೈನ್‌ನನ್ನು ಒಪ್ಪಿಕೊಳ್ಳಿ. ಆಗ ಸರಿಹೋಗುತ್ತದೆ. ಆದುದರಿಂದ ಈ ಬೆಲೆ ಏರಿಕೆಯನ್ನು ತಡೆಯಬೇಕು ಎಂದು ಹೇಳುವುದಾದರೆ ಈ ಕೂಡಲೇ ಇವರು ಸಗಟು ವ್ಯಾಪಾರ ವನ್ನು ತೆಗೆದುಕೊಳ್ಳಬೇಕು. ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಆಗಬೇಕು, ಹಳ್ಳಿಗಳಿಗೂ ಸಹ ಪಡಿತರ ಪದ್ಧತಿಯನ್ನು ಮಾಡಬೇಕು, ಅದಕ್ಕೆ ಸರ್ಕಾರದವರು ಸಬ್ಸಿಡಿ ಕೊಡಬೇಕು. ಇವತ್ತು ನೀರು ಕೊಡಬೇಕಾದರೆ ಅಲ್ಲಿ ೨೦ ಕೋಟಿಯಾದರೂ ಕೊಡುತ್ತೇವೆ. ಊಟ ಇಲ್ಲದೇ ಹೋದರೆ ಹಾಹಾಕಾರ ಆಗುತ್ತದೆ. ಈ ದೇಶದಲ್ಲಿ ಹಾಹಾಕಾರವನ್ನು ತಡೆಯಬೇಕು ಎನ್ನುವುದಾದರೆ ನಾಗರೀಕರ ಸರ್ಕಾರ ಆಗಬೇಕು ಎನ್ನುವುದಾದರೆ, ಜನತಾ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಎನ್ನುವುದಾದರೆ ಏನೇ ಆಗಲಿ ದೊಡ್ಡ ದೊಡ್ಡ ರೋಲರ್ ಫ್ಲೋರ್ ಮಿಲ್ಸ್ ಏನಿದೆ ಅವರ ಮೇಲೆ ಹತೋಟಿ ಇಡಬೇಕು. ಯಾರ ಮನೆಗೆ ಹೋಗಿ ಊಟ ಮಾಡಿದಾಕ್ಷಣ ಆ ಕಡೆ ಹೋದರು ಎಂದು ಹೇಳುವುದಲ್ಲ. ಇವತ್ತಿನ ದಿವಸ ಸರ್ಕಾರದವರು ಸರಿಯಾದ ವಿಲ್ ಪವರ್ ಇಟ್ಟುಕೊಳ್ಳಬೇಕು, ಆಗ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಕಂಟ್ರೋಲ್ ಮಾಡತಕ್ಕ ಧೈರ್ಯಸ್ಥೈರ್ಯ ತಮಗೆ ಬೇಕು. ರೋಲರ್ ಫ್ಲೋರ್ ಮಿಲ್ಸ್‌ನವರ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಧೈರ್ಯ ಎಲ್ಲಿಂದ ಬರಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಜನಗಳು ಬೆಂಬಲ ಕೊಟ್ಟಿದ್ದಾರೆ, ಧೈರ್ಯ ಇದೆ, ಅದನ್ನು ಉಪಯೋಗ ಮಾಡಿಕೊಳ್ಳಿ. ಅದಕ್ಕೆ ಸರಿಯಾದ ಸಿಬ್ಬಂದಿಯನ್ನು ಸ್ಟ್ರಿಕ್ಟಾಗಿ ಮಾಡುವುದಕ್ಕೆ ಹೇಳಬೇಕು. ಇಲ್ಲದೇಹೋದರೇ, ನೀವು ಬೆಲೆಗಳನ್ನು ಇಳಿಸದೇ ಹೋದರೆ ನಮ್ಮ ಪಕ್ಷದವರು ದೊಡ್ಡ ಪ್ರಮಾಣದಲ್ಲಿ ಚಳುವಳಿ ನಡೆಸಬೇಕಾಗುತ್ತದೆ, ಜೈಲಿಗೆ ಹೋಗತಕ್ಕ ಪ್ರಸಂಗ ಜನಗಳಿಗೆ ಬರಬೇಕಾಗಿರುತ್ತದೆ, ದಯವಿಟ್ಟು ತಾವು ಅದಕ್ಕೆ ಅವಕಾಶ ಮಾಡಿಕೊಡಬೇಡಿ, ಬೆಲೆಗಳನ್ನು ಇಳಿಸು ವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ನಾಗನಗೌಡ (ಕುರುಗೋಡು).—ಸನ್ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈಗ ಪ್ರೊಕ್ಯೂರ್‌ಮೆಂಟ್ ಬಗ್ಗೆ ನಮ್ಮ ಹಿರಿಯರು ಸಾಕಷ್ಟು ಚರ್ಚೆ ಮಾಡಿದ್ದಾರೆ. ಆದರೆ ಇಲ್ಲಿ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ಈಗ ಬೆಲೆ ಏರುವುದು ಯಾವಾಗ ? ಸರ್ಕಾರ ಇಲ್ಲಿ ತಪ್ಪಿರುವುದು ಯಾವಾಗ ಎನ್ನುವುದಕ್ಕೆ ನಾನು ಎರಡು ಉದಾಹರಣೆ ಕೊಡುತ್ತೇನೆ. ಮುಂಗಾರು ಬೆಳೆ ಮಾರ್ಕೆಟ್ಟಿಗೆ

ಬರತಕ್ಕಂಥಾದ್ದು ಅಕ್ಟೋಬರ್‌ನಿಂದ ಜನವರಿವರೆಗೆ, ಹಿಂಗಾರಿ ಬೆಳೆ ಮಾರ್ಕೆಟ್ಟಿಗೆ ಬರತಕ್ಕಂಥಾದ್ದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ. ಈ ಎರಡೂ ಸಂದರ್ಭ ಬಿಟ್ಟು ಜೂನ್ ಮತ್ತು ಸೆಪ್ಟೆಂಬರ್‌ವರೆಗೆ ಈ ಬೆಲೆ ಏರತಕ್ಕ ಪರಿಸ್ಥಿತಿ ನಮ್ಮ ದೇಶದಲ್ಲಾಗಲೀ ಅಥವಾ ನಮ್ಮ ರಾಜ್ಯದಲ್ಲಾಗಲಿ ಇರತಕ್ಕಂಥ ಪರಿಸ್ಥಿತಿ. ಆಗ ಸರ್ಕಾರ ಪ್ರೊಕ್ಯೂರ್‌ಮೆಂಟ್ ಮಾಡಬಹುದಾಗಿತ್ತು. ತಮ್ಮ ಸರ್ಕಾರ ಜನವರಿ ತಿಂಗಳಲ್ಲಿ ಅಧಿಕಾರಕ್ಕೆ ಬಂದಾಗ ಲೆವಿ ಪ್ರೊಕ್ಯೂರ್‌ಮೆಂಟ್ ಮಾಡಬಹುದಾಗಿತ್ತು. ಕೇವಲ ೪೦ ಲಕ್ಷ ಟನ್ ಪ್ರೊಕ್ಯೂರ್‌ಮೆಂಟ್‌ನ್ನು ಕೇಂದ್ರಕ್ಕೆ ಕೇಳಿದ್ದೇವೆ ಎಂದು ಹೇಳಿದ್ದೀರಿ. ಅದನ್ನು ಇಲ್ಲೇ ಪ್ರಯತ್ನ ಮಾಡಿ ತೆಗೆದುಕೊಳ್ಳತಕ್ಕ ಸಂದರ್ಭ ಇತ್ತು. ಇದನ್ನು ಏಕೆ ಮಾಡಲಿಲ್ಲ ಎಂದರೆ, ಇದರಲ್ಲಿ ಒಂದು ಅನುಮಾನ ಬರುತ್ತಾ ಇದೆ. ಈಗ ಪ್ರೊಕ್ಯೂರ್‌ಮೆಂಟ್ ಮಾಡಿದರೆ ಮುಂದೆ ಸರ್ಕಾರ ತಪ್ಪಿತಸ್ಥ ಆದಲ್ಲಿ ಕೇಂದ್ರಕ್ಕೆ ಹೊಣೆ ಹೊರಿಸಬೇಕು ಎನ್ನತಕ್ಕ ಉದ್ದೇಶದಿಂದ ಇದನ್ನು ಮಾಡಿದರು ಎಂದು ಭಾವನೆ ಬರುತ್ತಾ ಇದೆ. ನೀವು ಮೊದಲು ಪ್ರೊಕ್ಯೂರ್ ಮಾಡುವುದಕ್ಕೆ ಆಸ್ಪದ ಇದ್ದರೂ ನೀವು ಮಾಡಲಿಲ್ಲ ಎನ್ನತಕ್ಕಂಥಾದ್ದು ನನ್ನ ದೂರು. ಅದೇ ರೀತಿ ಡಿಸ್ಟ್ರಿಬ್ಯೂಷನ್ ಬಗ್ಗೆ ಹೇಳಬೇಕಾದರೆ ಯಾವುದೋ ಪೇಪರಿನಲ್ಲಿ ಓದಿದೆ. "Where there is fair price there is no rice, where there is rice, there is no fair price." ಇದನ್ನು ವಿಶ್ಲೇಷಣೆ ಮಾಡಿ ನೋಡಿದಾಗ ನಿಮಗೆ ಕಾಣುವುದು ಕೇವಲ ಅರ್ಬನ್‌ನಲ್ಲಿರತಕ್ಕ ಜನರು ಮಾತ್ರ. ಹಳ್ಳಿಯ ಜನರು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ನಿಮ್ಮ ಇಂಡೆಕ್ಸ್ ತೆಗೆದು ನೋಡಿದಾಗ ಕೇರಳ, ವೆಸ್ಟ್ ಬೆಂಗಾಲ್, ಜಮ್ಮು ಕಾಶ್ಮೀರಗಳಲ್ಲಿ ಹಳ್ಳಿಗಳಿಗೆ ೩೦ ರಿಂದ ೪೦ ಪರ್ಸೆಂಟ್ ಹಂಚಿಕೆಯಾಗತಕ್ಕ ಪರಿಸ್ಥಿತಿಯನ್ನು ನೋಡಿದ್ದೇವೆ. ಆದರೆ ದುರದೃಷ್ಟವಶಾತ್ ೧೫–೨೦ ಪರ್ಸೆಂಟ್ ಆಹಾರವನ್ನು ನಮ್ಮಲ್ಲಿ ಹಂಚುವುದಿಲ್ಲ. ಹಳ್ಳಿಯಲ್ಲಿರುವವರು ಮನುಷ್ಯರಲ್ಲವೆ, ತಿನ್ನತಕ್ಕ ಹೊಟ್ಟೆ ಕಾದು ಕುಂತಿದೆ. Either they are unfit or unable to feed or underfed ಎನ್ನತಕ್ಕ ಭಾವನೆ ಬರುತ್ತಾ ಇದೆ. ಉದಾಹರಣೆಗೆ ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ೧೦೦ ಹಳ್ಳಿಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ೧೦೦ ಚೀಲ ಅಕ್ಕಿ ಮಾತ್ರ ಕೊಟ್ಟಿದ್ದಾರೆ. ಪಕ್ಕದ ೪ ಮೈಲಿ ದೂರದಲ್ಲಿರುವ ಆಂಧ್ರ ರಾಜ್ಯಕ್ಕೆ ಸೇರಿದ ಪ್ರದೇಶದಲ್ಲಿ ಕಾಂಗ್ರೆಸ್ ಐ ಸರ್ಕಾರ ಆಳುತ್ತಿಲ್ಲ, ಅಲ್ಲಿ ತೆಲುಗುದೇಶಂ ಆಳುತ್ತಿದೆ. ಅಲ್ಲಿ ಕೇವಲ ೨೫೦ ಮನೆಗಳಿವೆ. ತೆಲುಗುದೇಶಂ ಸರ್ಕಾರದವರು ೩೦ ಚೀಲ ಅಕ್ಕಿ ತಾವೇ ತಂದು ವಿಲೇವಾರಿ ಮಾಡುತ್ತಾ ಇದ್ದಾರೆ. ತಿಂಗಳಲ್ಲಿ ಎರಡು ಬಾರಿ, ೨–೧೦ ಪೈಸೆಯಂತೆ ಕೊಡುತ್ತಿದ್ದಾರೆ. ಇವರಿಗೆ ಕೇಂದ್ರದ ಪ್ರೊಕ್ಯೂರ್ ಅಲಾಟ್‌ಮೆಂಟ್ ಇಲ್ಲವೇ. ಆದರೆ ಇಲ್ಲಿ ಕೇವಲ ಅರ್ಬನ್‌ನವರಿಗೆ ಮಾತ್ರ ಹೆಚ್ಚು ಹಂಚುತ್ತಿದ್ದೀರಿ. ಬಳ್ಳಾರಿಯಲ್ಲಿ ೧೮೦೦ ಚೀಲ ಸಕ್ಕರೆ ಕೊಡುತ್ತಿದ್ದಾರೆ, ಹಳ್ಳಿಗಳಿಗೆ ೩೦೦ ಚೀಲ ಸಕ್ಕರೆ ಕೊಡುತ್ತಾ ಇದ್ದಾರೆ. ಅಲ್ಲಿಗೆ ಹೋದರೆ ಜನರು ಹೊಡೆಯುತ್ತಾರೆ ಎನ್ನುವ ಭಯ ಬರುತ್ತಾ ಇದೆ. ಇದಕ್ಕೆ ಸರ್ಕಾರ ಹೊಣೆ ಎನ್ನುವುದು ನನ್ನ ಅಭಿಪ್ರಾಯ.

ಪಟ್ಟಣಗಳಲ್ಲಿ ರೇಷನ್ ಹಂಚುವುದಕ್ಕಾಗಿ ೧ ಸಾವಿರ ಕಾರ್ಡ್‌ಗಳವರೆಗೆ ಒಂದೊಂದು ಡಿಪೋಗೆ ಕೊಟ್ಟಿದ್ದನ್ನು ೭೦೦ಕ್ಕೆ ಇಳಿಸಿದ್ದೀರಿ. ಅದೇ ರೀತಿಯಾಗಿ ಹಳ್ಳಿಗಳಲ್ಲೂ ಸಹ ೫೦೦ ಜನಕ್ಕೆ ಇಳಿಸುವುದು ಒಳ್ಳೆಯದು. ಇದರಿಂದ ಅವರು ಸಹ ಜಾಸ್ತಿ ಜನರು ರೇಷನನ್ನು ಸ್ಟೋರ್ ಮಾಡಿಟ್ಟುಕೊಂಡು ದುರುಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಮತ್ತು ಇದನ್ನು ಚೆಕ್ ಅಪ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಆದುದರಿಂದ ಆ ಸಂಖ್ಯೆಯನ್ನು ಕಡಿಮೆ ಮಾಡಿ ಹೆಚ್ಚಿನ ಡಿಸ್ಟ್ರಿಬ್ಯೂಟಿಂಗ್ ಸೆಂಟರ್ಸ್‌ಗಳನ್ನು ಮಾಡಿದರೆ ಒಳ್ಳೆಯದು. ಇನ್ನು ರೇಷನ್ ಡಿಪೋಗಳವರೆಗೆ ಮಾರ್ಜಿನ್ ಪ್ರಾಫಿಟ್ ಕಡಿಮೆ ಇಟ್ಟಿರುವುದರಿಂದ ಅವರು ಹಾನೆಸ್ಟ್ ಆಗಿ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಅದನ್ನು ಹೆಚ್ಚಿಗೆ ಮಾಡಿದರೆ ಒಳ್ಳೆಯದು, ಆಗಲೂ ಸಹ ಅವರು ತಪ್ಪು ಮಾಡಿದರೆ ಅಂಥವರನ್ನು ಶಿಕ್ಷೆ ಮಾಡಬಹುದು. ಇನ್ನು ಅಡಲ್ಟ್ರೇಷನ್ ಬಗ್ಗೆ ಹೇಳುವುದನ್ನು ಮಾನ್ಯ ಸದಸ್ಯರುಗಳು ಮರೆತಿರಬಹುದೆಂದು ಕಾಣುತ್ತದೆ. ಇಂಡಿಯನ್ ಎಕ್ಸ್‌ಪ್ರೆಸ್ ತಾ ೧೮–೫–೮೩ರಲ್ಲಿ ಬಂದ ಪ್ರಕಾರವಾಗಿ ನಮ್ಮ ರಾಜ್ಯದಲ್ಲಿ ೬೦ ಪರ್ಸೆಂಟ್ ಅಡಲ್ಟ್ರೇಷನ್ ನಡೆಯುತ್ತಿದೆ. ಇದರಿಂದ ಆಗತಕ್ಕ ಅನಾಹುತಗಳು ಅಪಾರ. ಅದರಿಂದ ಕ್ಯಾನ್ಸರ್, ಲೀವರ್ ಟ್ರಬಲ್, ಲೆಪ್ರಸಿ ಇನ್ನು ಮುಂತಾದ ರೋಗಗಳು ಉಂಟಾಗುತ್ತಿದೆ. ಇದನ್ನು ಕಂಡು ಹಿಡಿಯತಕ್ಕ ಟೆಸ್ಟ್ ಮಾಡತಕ್ಕ ಲ್ಯಾಬೋರೇಟರಿಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾತ್ರ ಇದೆ. ಆದರೆ ಬೇರೆ ಭಾಗದಲ್ಲಿರತಕ್ಕವರೂ ಸಹ ಇಲ್ಲಿಗೇ ಬರಬೇಕಾಗಿದೆ ಆದುದರಿಂದ ಹುಬ್ಬಳ್ಳಿಯಲ್ಲಿ ಮತ್ತು ಗುಲ್ಬರ್ಗಗಳಲ್ಲೂ ಇದರ ಕೇಂದ್ರಗಳನ್ನು ಮಾಡಿ ಅಡಲ್ಟ್ರೇಷನ್‌ನಿಂದ ಆಗತಕ್ಕ ಅನಾಹುತಗಳ ಬಗ್ಗೆ, ತೊಂದರೆಯ ಬಗ್ಗೆ, ಜನರನ್ನು ಎಜುಕೇಟ್ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ತಾವು ಜನರ ಕಳಕಳಿ

ಯನ್ನು ಅರಿತುಕೊಂಡು ಈ ಕೆಲಸ ಮಾಡುತ್ತೀರೆಂದು ನನ್ನ ಭಾವನೆ ಇದೆ. ಇನ್ನು ನಮ್ಮ ಬಳ್ಳಾರಿ ಜಿಲ್ಲೆಯವರು ಹೆಚ್ಚಾಗಿ ಗೋಧಿಯನ್ನು ತಿನ್ನುವುದಿಲ್ಲ, ಇದರ ಬಗ್ಗೆ ನಾವು ಒಂದು ರೆಸೊಲ್ಯೂಷನ್ ಮಾಡಿ ಕಳುಹಿಸಿದ್ದೇವೆ. ಆದುದರಿಂದ ಗೋಧಿಯ ಬದಲು ನಮ್ಮ ಕಡೆಗೆ ಜೋಳ ಮತ್ತು ಸಕ್ಕರೆಯನ್ನು ನೀವು ಹೆಚ್ಚಿಗೆ ಕೊಡದಿದ್ದರೂ ಚಿಂತೆ ಇಲ್ಲ. ಹಬ್ಬಗಳು ಬರುತ್ತಿರುವುದರಿಂದ ನಮ್ಮ ಕಡೆಗೆ ಪಾಮೋಯಿಲ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಒಂದು ಕಡೆಗೆ ಕೊಟ್ಟು ಮತ್ತೊಂದು ಕಡೆಯ ಭಾಗದವರಿಗೆ ಕೊಡದಿದ್ದರೆ ಜನ ದಂಗೆ ಏಳುವಂಥಾ ಪರಿಸ್ಥಿತಿ ಉಂಟಾಗುತ್ತದೆ ಅದಕ್ಕೆ ತಾವು ಅವಕಾಶವನ್ನು ಕೊಡಬಾರದೆಂದು ವಿನಂತಿಸಿಕೊಳ್ಳುತ್ತೇನೆ. ಕೊನೆಯದಾಗಿ, ಪ್ರತಿಯೊಂದು ಹಂತದಲ್ಲೂ ನಮ್ಮ ಮಂತ್ರಿಗಳವರು ಕೇಂದ್ರದ ಕಡೆಗೆ ಕೈ ಮಾಡಿ ತೋರಿಸುತ್ತಿರುವುದು ಸರಿಯಲ್ಲ. ಆದುದರಿಂದ ಪಾಮೊಯಿಲ್ ಆಗಲೀ ಅಥವಾ ಕೆರೋಸಿನ್ ಆಗಲೀ ಅಕ್ಕಿಯಾಗಲೀ ಹಂಚುವಾಗ ಸರಿಯಾಗಿ ವಿತರಣೆ ಮಾಡಬೇಕು ಅದು ನಿಮ್ಮ ಮೇಲಿನ ಜವಾಬ್ದಾರಿಯಾಗಿದೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಿಮಗೆಲ್ಲಾ ತಿಳಿದ ಹಾಗೆ ಆಹಾರ ಮತ್ತು ನಾಗರೀಕ ಪೂರೈಕೆ ಬಹಳ ಮಹತ್ವದ ಒಂದು ಅಂಶ. ಸಮಾಜ ಜೀವನದಲ್ಲಿ ಕನಿಷ್ಟ ಪಕ್ಷ ಬೇಕಾಗಿರತಕ್ಕದ್ದು ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ. ಉಳಿದುಕೊಳ್ಳುವುದಕ್ಕೆ ಬೇಕಾದಂಥ ವಸತಿ. ಇದನ್ನೆಲ್ಲಾ ಪೂರೈಸತಕ್ಕದ್ದರ ಬಗ್ಗೆ ಸರ್ಕಾರ ಬದ್ಧವಾಗಿರಬೇಕೆಂದು ಹೇಳಿ ನಮ್ಮ ದೇಶದ ರಾಜ್ಯಾಂಗದ ಘಟನೆಯಲ್ಲಿ ಹೇಳಿಕೊಂಡಿದ್ದೇವೆ. ಆದರೆ ಇವತ್ತು ನಮ್ಮ ದೇಶದಲ್ಲಿ ಆಗುತ್ತಿರುವ ದುಸ್ಥಿತಿಯನ್ನು ನೋಡಿದರೆ ಅಧಿಕಾರಕ್ಕೆ ಬರದಂಥ ಸರ್ಕಾರಗಳು ಯಾವುದೇ ಕಾಳಜಿ ವಹಿಸದೆ ಇವತ್ತು ಬಡ ಜನರನ್ನು ಒಂದು ಶೋಷಣೆಗೆ ಅವರ ಶಾಪಕ್ಕೆ ತುತ್ತು ಆಗುವಂಥಾ ಪ್ರಸಂಗ ಬಂದಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅನೇಕ ಮಿತ್ರರು ಮಾತನಾಡುತ್ತಾ ಹೇಳಿದರು ಈ ಖಾತೆಯ ಸಚಿವರು ಕೇವಲ ಬೆಳೆದಂಥ ಬೆಳೆಯನ್ನು ಖರೀದಿ ಮಾಡಿಕೊಂಡು ಅದನ್ನು ಪೂರೈಸತಕ್ಕ ಜವಾಬ್ದಾರಿ ಮಾತ್ರ ಇದೆ ಎಂದು ಆದರೆ ವಿಶೇಷವಾದ ಜವಾಬ್ದಾರಿ ಅವರ ತಲೆಯ ಮೇಲೆ ಇದೆ ಅದು ಏನೆಂದರೆ ಅವರು ಪೂರೈಕೆ ಮಾಡುವುದಕ್ಕಿಂತ ಮುಂಚಿತವಾಗಿ, ಪೂರೈಕೆ ಮಾಡಬೇಕಾಗಿದ್ದರೆ ಎಷ್ಟು ಬೆಳೆಯನ್ನು ರಾಜ್ಯದಲ್ಲಿ ಬೆಳೆಯಲಿಕ್ಕೆ ಸಾಧ್ಯವಿದೆ ? ಇನ್ನು ಮಿಕ್ಕಿದ್ದನ್ನು ಬೇರೆ ರಾಜ್ಯಗಳಿಂದ ಎಷ್ಟು ಖರೀದಿ ಮಾಡಬಹುದು, ನಮ್ಮ ರಾಜ್ಯದಲ್ಲಿ ಜನತೆ ಉಪಯೋಗಿಸತಕ್ಕ ಆಹಾರಧಾನ್ಯಗಳ ಪ್ರಮಾಣವೆಷ್ಟು ? ಇದರ ಬಗ್ಗೆ ಖಚಿತವಾದ ನೀತಿ ಇಲ್ಲದೇ ಇದ್ದಾಗ ತೊಂದರೆಯನ್ನು ಖಂಡಿತವಾಗಿ ಅನುಭವಿಸಲೇ ಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಅನೇಕ ಬಾರಿ ನಮ್ಮ ಸಚಿವರು ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ನಮ್ಮ ರಾಜ್ಯದಲ್ಲಿ ಸರಪ್ಲಸ್ ಅಕ್ಕಿ ಇದೆಯೆಂದು ಹೇಳಿದ್ದಾರೆ. ಕಳೆದ ವರ್ಷ ನಾವು ಬೆಳೆದಂಥ ಅಕ್ಕಿ ಪ್ರಮಾಣ ಸುಮಾರು ೨೭ ಲಕ್ಷ ಟನ್ ಎಂದು ಹೇಳಿದರು. ಇವತ್ತು ಪೂರೈಕೆ ಮಾಡುವುದಕ್ಕೆ ಭಾರತ ಆಹಾರ ನಿಗಮಕ್ಕೆ ನಾವು ನಮ್ಮ ರಾಜ್ಯದಿಂದ ೩ ಲಕ್ಷ ಟನ್ ಅಕ್ಕಿಯನ್ನು ಒದಗಿಸಿಕೊಡಬೇಕಾಗಿತ್ತು. ಆ ರೀತಿಯಾಗಿ ೩ ಲಕ್ಷ ಟನ್ ಅಕ್ಕಿಯನ್ನು ಕೊಟ್ಟಾಗ, ಭಾರತ ಆಹಾರ ನಿಗಮದವರ ಈ ವಿತರಣೆಯ ಜಾಲದ ಮೂಲಕ ನಾವು ನಮ್ಮ ರಾಜ್ಯದ ಜನತೆಯ ಅಕ್ಕಿಯನ್ನು ಒದಗಿಸಿಕೊಳ್ಳಬಹುದು. ಆ ಪ್ರಮಾಣದಲ್ಲಿ ನಾವು ಏನು ಅವರಿಗೆ ಅಕ್ಕಿಯನ್ನು ಒದಗಿಸಿ ಕೊಡಬೇಕಾಗಿತ್ತು ಅದರಲ್ಲಿ ದುರಾದೃಷ್ಟವಶಾತ್ ೧.೬ ಲಕ್ಷ ಟನ್ ಮಾತ್ರ ಅಕ್ಕಿಯನ್ನು ಅವರಿಗೆ ನಾವು ಒದಗಿಸಿಕೊಟ್ಟಿದ್ದೇವೆ. ನಾವು ನಮ್ಮ ಬೇಡಿಕೆಯನ್ನು ಅವರ ಮುಂದಿಟ್ಟಾಗ ಅವರಿಗೆ ನಮ್ಮ ಬೇಡಿಕೆಯನ್ನು ಮನಸ್ಸಿನಲ್ಲಿ ಇಲ್ಲದಿದ್ದರಿಂದ ಅದು ಸಾಧ್ಯವಾಗಲಿಲ್ಲ. ಆದರೆ ಮಂತ್ರಿಗಳವರು ಹೇಳುತ್ತಿದ್ದಾರೆ ಕೇಂದ್ರ ಸರ್ಕಾರದ ನೀತಿಯಿಂದ ನಮಗೆ ತೊಂದರೆಯಾಗುತ್ತಿದೆ ಎಂದು. ಆದರೆ ನಾನು ಇವತ್ತು ಸ್ಪಷ್ಟವಾದ ಮಾತಿನಲ್ಲಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಭಾರತ ಆಹಾರ ನಿಗಮದವರ ಮೇಲೆಯೇ ನಾವು ವಿಶೇಷವಾಗಿ ಹೊಂದಿಕೊಂಡಿರುವುದರಿಂದ ಈ ರೀತಿಯ ತೊಂದರೆಗೆ ಒಳಗಾಗಿದ್ದೇವೆ. ಆದರೆ ನಮ್ಮ ರಾಜ್ಯದಲ್ಲಿಯೇ ಸಾಕಷ್ಟು ಬೆಳೆಯನ್ನು ಬೆಳೆಯುತ್ತಿರುವಾಗ ಅವನ್ನು ಖರೀದಿ ಮಾಡಿಟ್ಟುಕೊಂಡು ಕಾಪು ದಾಸ್ತಾನು ಇಟ್ಟುಕೊಂಡು ಸರಿಯಾಗಿ ವಿತರಣೆ ಮಾಡತಕ್ಕ ವ್ಯವಸ್ಥೆ ಇಲ್ಲದೇ ಇರುವುದರಿಂದ ಇಂಥಾ ಒಂದು ದುಸ್ಥಿತಿಯಾಗುತ್ತಿದೆ. ಇವತ್ತು ಬೇರೆ ಎಲ್ಲಾ ಮಾಹಿತಿಗಳನ್ನೂ ಮಾನ್ಯ

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಚಿವರು ಒದಗಿಸಿದ್ದಾರೆ ಅದರೆ ನಮ್ಮ ರಾಜ್ಯದಲ್ಲಿ ಅಕ್ಕಿ ಗಿರಣಿಗಳು ಎಷ್ಟು ಇವೆ ? ಅವರ ಮೇಲೆ ನಮ್ಮ ಹತೋಟಿ ಎಷ್ಟರಮಟ್ಟಿಗೆ ಇದೆ ಎನ್ನುವ ಮಾಹಿತಿಯನ್ನು ಒದಗಿಸಿಲ್ಲ. ಜೊತೆಗೆ ನಮ್ಮ ರಾಜ್ಯದಲ್ಲಿ ಕಾಪು ದಾಸ್ತಾನು ಇಡುವುದಕ್ಕೆ ವ್ಯವಸ್ಥೆ ಏನಿದೆ ? ಗೋದಾಮುಗಳು ಎಷ್ಟು ? ಸರ್ಕಾರದ ವಶದಲ್ಲಿರತಕ್ಕ ಗೋದಾಮುಗಳು ಎಷ್ಟು ? ಸರ್ಕಾರದ ವಶದಲ್ಲಿರತಕ್ಕ ಗೋದಾಮುಗಳು ಎಷ್ಟು ಇವೆ ? ಅಕ್ಕಿ, ಭತ್ತವನ್ನು ಸಂಗ್ರಹಣೆ ಮಾಡಿದರೆ ಯಾವ ರೀತಿಯಲ್ಲಿ ದಾಸ್ತಾನು ಮಾಡುತ್ತಾರೆ ಎನ್ನುವ ಬಗ್ಗೆ ನಮ್ಮ ಮುಂದೆ ಸರಿಯಾದ ವಿವರಣೆ ಬರುತ್ತಿಲ್ಲ. ಇದಕ್ಕೆ ವೈಜ್ಞಾನಿಕವಾದ ರೀತಿಯಲ್ಲಿ ಸಂಗ್ರಹಣೆ ಮಾಡಿ ದಾಸ್ತಾನು ಮಾಡತಕ್ಕ ಕಲ್ಪನೆ ಇವತ್ತು ನಮ್ಮಲ್ಲಿ ಇಲ್ಲದೆ ಇರುವುದರಿಂದ ಈ ರೀತಿಯ ತೊಂದರೆಯಾಗಿದೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಹೊಸ ಸರ್ಕಾರ ರಚನೆ ಆದ ತಕ್ಷಣ ೩ ಜನ ಮಂತ್ರಿಗಳ ಒಂದು ಸಮಿತಿಯನ್ನು ರಚನೆ ಮಾಡಿದರು. ಮಾನ್ಯ ಬೊಮ್ಮಾಯಿಯವರ ನೇತೃತ್ವದಲ್ಲಿ ಸಮಿತಿ ರಚನೆಯಾಯಿತು, ನಾವೆಲ್ಲ ಕಾತುರದಿಂದ ಆ ಸಮಿತಿಯ ವರದಿ ಬಂದಕೂಡಲೇ ಬೆಲೆಗಳೆಲ್ಲ ಕುಸಿದು ಬೀಳುತ್ತವೆಂದು ಇದ್ದೆವು. ಆ ಸಮಿತಿಯ ವರದಿ ಬರಲಿಲ್ಲ. ಮೊನ್ನೆ ಪುನಃ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅದು ೮ ದಿನಗಳಲ್ಲಿ ವರದಿ ಕೊಡಬೇಕೆಂದು ಅವಧಿ ನಿಗಧಿ ಮಾಡಿದ್ದಾರೆಂದು ಕೂಡ ಪತ್ರಿಕೆಯಲ್ಲಿ ಬಂದಿದೆ. ಹಿಂದೆ ಇದಂತಹ ಮಂತ್ರಿಗಳೇ ಇವತ್ತೂ ಇದ್ದಾರೆ, ಅವರಿಂದ ಏನೂ ಮಾಡುವುದಕ್ಕಾಗುವುದಿಲ್ಲವೆಂದು ವಿಶಾದದಿಂದ ಹೇಳಬೇಕಾಗಿದೆ. ಆ ವರದಿ ಸದನದ ಮುಂದೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ರಾಜ್ಯದ ಜನತೆ ಇವತ್ತು ಇದನ್ನು ನಿರೀಕ್ಷೆ ಮಾಡುತ್ತಿದೆ. ನಮಗೆ ಸಾಕಷ್ಟು ಅಕ್ಕಿಯ ಪೂರೈಕೆ ಆಗಬೇಕು, ಹೊರ ರಾಜ್ಯಗಳಿಗೆ ಕಳ್ಳಸಾಗಾಣಿಕೆ ಆಗುವುದನ್ನು ತಡೆಗಟ್ಟಬೇಕು. ಕಳ್ಳ ಸಾಗಾಣಿಕೆ ಮಾಡುವುದನ್ನು ತೋರಿಸಿಕೊಟ್ಟವರು ನಿಮ್ಮವರು. ಕೇರಳದಲ್ಲಿ ಸಾರಾಸಗಟು ಸಿಗುತ್ತಿದ್ದ ಅಕ್ಕಿಯ ಸರಬರಾಜು ನಿಂತಾಗ ಅಲ್ಲಿನ ಸರ್ಕಾರ ಕಣ್ಣು ತೆರೆಯಲು ಅನುಕೂಲವಾಯಿತು. ಆಮೇಲೆ ಆ ಸಮಸ್ಯೆ ಕೂಡಲೇ ನಿವಾರಣೆ ಆಯಿತು. ಆದರೆ ನಮ್ಮಲ್ಲಿ ಅದು ಆಗುತ್ತಿಲ್ಲ. ೧೯೭೪ರಲ್ಲಿ ಅಂತರ್ಜಿಲ್ಲಾ ನಿರ್ಬಂಧ ಇತ್ತು. ನಮ್ಮ ಜಿಲ್ಲೆಗೆ ಬೇರೆ ಕಡೆಯಿಂದ ಅಕ್ಕಿ ಬರಬಾರದೆಂದು ಇದ್ದಾಗ ಆ ಬಗ್ಗೆ ದಿಟ್ಟ ಹೋರಾಟ ಮಾಡಿ ನಮ್ಮ ಜಿಲ್ಲೆಗೆ ಸಾಕಷ್ಟು ಅಕ್ಕಿ ಪೂರೈಕೆ ಆಗಬೇಕೆಂದು ಮಾಡಿದೆವು. ಸಾಮಾನ್ಯವಾಗಿ ಜನರು ದಪ್ಪಕ್ಕಿ ಮತ್ತು ಸಣ್ಣಕ್ಕಿ ಎರಡೂ ತರಹದ ಅಕ್ಕಿಯನ್ನು ಉಪಯೋಗಿಸುತ್ತಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ದಪ್ಪಕ್ಕಿಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಕೇರಳದಲ್ಲಿ ಸಣ್ಣ ಅಕ್ಕಿಗೆ ಬೇಡಿಕೆ ಜಾಸ್ತಿ. ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಬೆಳೆಯತಕ್ಕದ್ದು ದಪ್ಪಕ್ಕಿ ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಪ್ಪಕ್ಕಿ ಬೆಳೆಯುವ ಪ್ರಮಾಣ ಕಡಿಮೆಯಾದರೂ ೬ ತಿಂಗಳಿಗೆ ಬೇಕಾಗುವಷ್ಟು ಅಕ್ಕಿಯನ್ನು ಬೆಳೆಯುತ್ತಾರೆ. ಉಳಿದ ೬ ತಿಂಗಳಿಗೆ ಬೇಕಾದ ಅಕ್ಕಿಯನ್ನು ಬೇರೆ ಕಡೆಯಿಂದ ತರಿಸಿಕೊಳ್ಳುತ್ತಾರೆ ಶಿವಮೊಗ್ಗ, ರಾಯಚೂರು, ಮಂಡ್ಯ ಜಿಲ್ಲೆಗಳಲ್ಲಿ ದಪ್ಪಕ್ಕಿ ಬೆಳೆಯುತ್ತಾರೆ. ಅಲ್ಲಿಯ ಜನರು ಅದನ್ನು ಊಟ ಮಾಡುವುದಿಲ್ಲ ಅವರು ನಮಗೆ ಅದನ್ನು ಕಳುಹಿಸಿಕೊಟ್ಟರೆ ಮಿಲ್‌ಗಳಲ್ಲಿ ಅಕ್ಕಿ ಮಾಡಿಕೊಂಡು ನಮ್ಮ ಜಿಲ್ಲೆಗೆ ಬೇಕಾದ ಅಕ್ಕಿಯನ್ನು ಪೂರೈಕೆ ಮಾಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಸರ್ಕಾರದ ಗಮನಕ್ಕೆ ತಂದರೂ ಅದಕ್ಕೆ ಬೇಕಾದ ವ್ಯವಸ್ಥೆ ಆಗದೆ ಇರುವುದರಿಂದ ಈ ರೀತಿ ತೊಂದರೆ ಆಗಿದೆ. ಇಷ್ಟು ಮಾತ್ರವಲ್ಲದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಪೂರೈಸತಕ್ಕ ಅಕ್ಕಿಯ ಪ್ರಮಾಣ ಏನೇನು ಸಾಲದೆಂಬುದನ್ನು ಮನಗಂಡಾಗ ಲೆವಿ ನೀತಿಯನ್ನು ವಿರೋಧಿಸಿ ಲೆವಿಯನ್ನು ಕೊಡದೆ ಇದ್ದಾಗ ೩ ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಲಿಕ್ಕೆ ಸಾಧ್ಯತೆ ಇದೆ ಎಂಬುದನ್ನು ನಾವು ನಮ್ಮ ಜಿಲ್ಲೆಯಲ್ಲಿ ಮಾಡಿ ತೋರಿಸಿದ್ದೇವೆ. ಶಿವಮೊಗ್ಗ ಮತ್ತು ರಾಯಚೂರಿನಿಂದ ಅಕ್ಕಿಯನ್ನು ತರಿಸಿ ನಮ್ಮ ಜಿಲ್ಲೆಯಲ್ಲಿ ಲೆವಿ ಕೊಡದೆ ೩ ರೂಪಾಯಿಗಳಿಗೆ ಒಂದು ಕೆ.ಜಿ. ಯಂತೆ ಅಕ್ಕಿಯನ್ನು ನಾವು ಒದಗಿಸಿದ ಪರಿಸ್ಥಿತಿ ಇತ್ತು. ಇವತ್ತು ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಲೆವಿ ಮೂಲಕ ಅಕ್ಕಿಯನ್ನು ಅಥವಾ ಭತ್ತವನ್ನು ರೈತರಿಂದಲೋ ಅಥವಾ ಮಾಲೀಕರಿಂದಲೋ ನಾವು ಪಡೆಯುವಂತ ಪದ್ಧತಿ ಇರುವಾಗ ಇದಕ್ಕೆ ಯಾವುದಾದರೂ ಒಂದು ಮೂಲ ಎಸ್ಟಾಬ್ಲಿಷ್‌ಮೆಂಟ್ ಬೇಕು. ನಾವು ಇವತ್ತು ರೈತರನ್ನು ನೀವು ಬೆಳೆದ ಬೆಳೆಯಲ್ಲಿ ಅರ್ಧ ಭಾಗ ಕೊಡಿ ಎಂದು ಕೇಳಬೇಕಾದರೆ ನಾವು ರೈತರಿಗೆ ಏನುಕೊಡುತ್ತಿದ್ದೇವೆಂದು ವಿಚಾರ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಹೊಸ ನೀತಿಯನ್ನು ಹಾಕಿಕೊಡಬೇಕು. ಬೆಳೆಗಳನ್ನು ಬೆಳೆಯುವುದಕ್ಕೆ ಮುಂಚಿತವಾಗಿ ರೈತರಿಗೆ ಬೇಕಾದ ರಸಗೊಬ್ಬರಗಳು, ಕ್ರಿಮಿನಾಶಕಗಳು, ಉತ್ತಮ ತಳಿಯ ಬೀಜಗಳು ಮತ್ತು ಕೃಷಿ ಉಪಕರಣಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸಿ ನೀವು ಬೆಳೆದಿದ್ದರಲ್ಲಿ ಇಷ್ಟಂಶವನ್ನು ಸರ್ಕಾರಕ್ಕೆ ಕೊಡಿ ಎಂದು ಹೇಳುವ ಆಜ್ಞೆ ಮಾಡಿದರೆ ನಮಗೆ ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗಬಹುದು. ಭಾರತ ಸರ್ಕಾರ ಈ ಬಾಬಿಗೆ ೨೫ ಕೋಟಿ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ

ಕೊಟ್ಟಿದೆ. ೨.೧೦ಕ್ಕೆ ಒಂದು ಕೆ.ಜಿ, ಅಕ್ಕಿ ಪಡೆದು ಅದನ್ನು ೧.೯೦ ರಂತೆ ರಾಜ್ಯದ ಜನತೆಗೆ ಒದಗಿಸಬೇಕೆಂದು ಮಾಡಿದೆ. ಆದರೆ ಇದರಿಂದ ರೈತರಿಗೆ ಪ್ರಯೋಜನವಾಗಿಲ್ಲ. ಅವರು ಬೆಳದಂತಹ ಬೆಳೆಗೆ ಬೆಲೆ ಬರಲಿಲ್ಲ. ಈ ಕಡೆ ಬಡಜನರು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಕೊಡುವ ಅಕ್ಕಿ ಅಥವಾ ಇತರ ಆಹಾರ ಪದಾರ್ಥಗಳನ್ನು ಹೊಂದಿಕೊಂಡು ಏನು ಜೀವನ ಮಾಡುತ್ತಾರೆ ಅವರಿಗೂ ಪ್ರಯೋಜನ ಸಿಕ್ಕಿದಂತಾಗಿಲ್ಲಿಲ್ಲ. ಆದ್ದರಿಂದ ಸರ್ಕಾರವನ್ನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಮತ್ತೊಮ್ಮೆ ತೀವ್ರವಾಗಿ ಆಲೋಚನೆ ಮಾಡಬೇಕು ಎಂದು. ಸಬ್ಸಿಡಿ ರೂಪದಲ್ಲಿ ಕೊಡತಕ್ಕ ಹಣವನ್ನು, ಬೆಳೆಗಳನ್ನು ಬೆಳೆಯುವಂಥ ಸಂದರ್ಭದಲ್ಲಿ ರೈತರಿಗೆ ಬೇರೆ ಬೇರೆ ರೀತಿಯಲ್ಲಿ ಒದಗಿಸಿಕೊಟ್ಟರೆ ಆಗ ನಮಗೆ ಅವರನ್ನು ಕೇಳಲು ಒಂದು ನೈತಿಕ ಹಕ್ಕು ಬರುತ್ತದೆ. ನೀವು ನಮಗೆ ಬೆಳೆದಂತಹ ಬೆಳೆಯಲ್ಲಿ ಒಂದಂಶವನ್ನು ಕೊಡಿ ಎಂದರೆ ಕೊಡಲಿಕ್ಕೆ ಮುಂದಾಗುತ್ತಾರೆ. ಅವರಿಗೆ ಒಳ್ಳೆಯ ಬೆಲೆಯೂ ಸಿಗುತ್ತದೆ. ಈ ರೀತಿ ಮಾಡಿದರೆ ನಾಗರೀಕರಿಗೆ ಸಾಕಷ್ಟು ಅಕ್ಕಿಯನ್ನು ಪೂರೈಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಸಕ್ಕರೆ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಅನೇಕ ಮಾತುಗಳನ್ನು ಇಲ್ಲಿ ಹೇಳಿದರು. ನಮಗೆ ಸಿಕ್ಕಿರುವ ಅಂಕಿ ಅಂಶದ ಪ್ರಕಾರ ಜೂನ್ ತಿಂಗಳ ೩೦ಕ್ಕೆ ಅಂತ್ಯಗೊಳ್ಳುವ ಲೆಕ್ಕದ ಪ್ರಕಾರ ಕಾರ್ಖಾನೆಗಳಲ್ಲಿ ೭ ಲಕ್ಷ ಟನ್ ಸಕ್ಕರೆ ಕೊಳೆತು ನಿರಾಗುತ್ತಿದೆ. ಅದೇ ಪ್ರಕಾರ ಇಡೀ ದೇಶದಲ್ಲಿ ೪೬ ಲಕ್ಷ ಟನ್ ಸಕ್ಕರೆ ನಿರಾಗುತ್ತಿದೆ. ಇದರ ಬೆಲೆ ೧೭೦೦ ಕೋಟಿ ರೂಪಾಯಿಗಳಷ್ಟಾಗುತ್ತದೆ. ಹಳ್ಳಿಗಳಲ್ಲಿ ಬಡ ಜನರು ಅರ್ಧ ಕೆ.ಜಿ ಸಕ್ಕರೆಯನ್ನು ಹೆಚ್ಚಿಗೆ ಕೇಳಿದರೆ ಕೊಡುವುದಕ್ಕೆ ತಯಾರಿಲ್ಲ. ಈ ರೀತಿಯ ನೀತಿಯನ್ನು ಏತಕ್ಕೆ ಅನುಸರಿಸುತ್ತಿದ್ದಾರೆಂದು ಗೊತ್ತಿಲ್ಲ. ಇದು ಕೇಂದ್ರ ಸರ್ಕಾರದ ನೀತಿ ಎಂದು ಹೇಳಬಹುದು. ಆದರೆ ಇವರ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದ ಬೇಡಿಕೆ ಬಗ್ಗೆ ಜ್ಞಾನ ಇದ್ದರೆ ಸಾಕಷ್ಟು ಸಕ್ಕರೆಯನ್ನು ಬಿಡುಗಡೆ ಮಾಡಿಸಿಕೊಡಲಿ. ನಾನು ಸರ್ಕಾರದ ನೀತಿ ಏನಿದೆ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ. ಅದನ್ನು ಸರ್ಕಾರ ಬಿಡಿಸಿ ಕೊಡಬೇಕಾಗಿತ್ತು. ಇಲ್ಲಿ ಸೀಮೆ ಎಣ್ಣೆಯ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಅಂಕಿ ಅಂಶಗಳ ಪ್ರಕಾರ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಏನು ಸೀಮೆ ಎಣ್ಣೆ ಕೊಡಲಿಕ್ಕೆ ಒಪ್ಪಿದ್ದಾರೆ ಅಷ್ಟನ್ನು ಕೂಡ ತರಿಸಿಕೊಳ್ಳುವಂಥ ಯೋಗ್ಯತೆ ನಮ್ಮ ಸರ್ಕಾರಕ್ಕೆ ಇಲ್ಲ. ಮಾತು ಮಾತಿಗೆ ವಿರೋಧ ಪಕ್ಷದ ನಾಯಕರ ಕಡೆ ಕೈತೋರಿಸಿ ನಿಮ್ಮ ಸರ್ಕಾರ ಕೇಂದ್ರದಲ್ಲಿದೆ, ಸೀಮೆ ಎಣ್ಣೆ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಅವರು ದೊಡ್ಡ ಮನಸ್ಸು ಮಾಡಿ ಕೊಡಲಿಕ್ಕೆ ಒಪ್ಪಿದ್ದರೂ ಇವರು ಅದನ್ನು ತರಿಸಿಕೊಳ್ಳತಕ್ಕ ಯೋಗ್ಯತೆ ಹೊಂದಿಲ್ಲವೆಂದು ಬಹಳ ಬೇಸರದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯಕ್ಕೆ ಬೇಕಾದ ಆಹಾರ ವಸ್ತುಗಳನ್ನು ಮತ್ತಿತರ ನಾಗರೀಕ ಪೂರೈಕೆಗಳನ್ನು ಸಮರ್ಥವಾಗಿ ಒದಗಿಸತಕ್ಕ ಸಾಮರ್ಥ್ಯ ನಮ್ಮ ಕರ್ನಾಟಕ ರಾಜ್ಯದ ಆಹಾರ ಮತ್ತು ನಾಗರೀಕ ಸರಬರಾಜು ಕಾರ್ಪೊರೇಷನ್ನಿಗೂ ಇಲ್ಲ ಮತ್ತು ಆಹಾರ ಇಲಾಖೆಗೂ ಇಲ್ಲವೆಂದು ಹೇಳಬೇಕಾಗುತ್ತದೆ ಇವತ್ತು ಅಕ್ಕಿಯ ಬಗ್ಗೆ ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಮಿಲ್ಲುಗಳಲ್ಲಿ ಎಷ್ಟು ಅಕ್ಕಿ ಇದೆ, ಭತ್ತ ಇದೆ ಎಂಬುದನ್ನು ತಿಳಿದುಕೊಂಡ ಹಾಗೆ ವ್ಯಾಪಾರಸ್ಥರ ಹತ್ತಿರ ಎಷ್ಟಿದೆ ಎಂಬುದನ್ನು ನಿಖರವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಕಳ್ಳ ಸಾಗಾಣಿಕೆ ಮಾಡಲು ಕಾರಣ ಕಾನೂನು ಬಲ್ಲ ಇಲ್ಲವೆಂದು ಹೇಳಬಹುದು. ಕರ್ನಾಟಕ ಎಸ್‌ನ್ಷಿಯಲ್ ಕಮಾಡಿಟೀಸ್ ಮೆಯಿಂಟೆನ್‌ನ್ಸ್ ಆಫ್ ಅಕೌಂಟ್ಸ್ ಮತ್ತು ಡಿಸ್‌ಪ್ಲೇ ಆಫ್ ಪ್ರೈಸಸ್ ಆಕ್ಟ್ ೧೯೮೧ ಇದು ಬರಹದಲ್ಲಿ ಜಾರಿಯಲ್ಲಿದೆಯೇ ಹೊರತು ಕೃತಿಯಲ್ಲಿ ಇಲ್ಲ. ಪ್ರತಿಯೊಬ್ಬ ಡೀಲರ್ ಮತ್ತು ಮಿಲ್ಲರ್ ಅವರಲ್ಲಿರತಕ್ಕ ದಾಸ್ತಾನೆಷ್ಟು, ಮತ್ತು ಅದರ ಬೆಲೆ ಎಷ್ಟು ಎಂಬ ಬಗ್ಗೆ ಸರಿಯಾದ ಲೆಕ್ಕ ಪತ್ರಗಳನ್ನು ಇಡಬೇಕಾಗುತ್ತದೆ. ಮತ್ತು ಆ ಲೆಕ್ಕ ಪ್ರತಿಗಳನ್ನು ಕಾಲ ಕಾಲಕ್ಕೆ ಸರ್ಕಾರಕ್ಕೆ ಒದಗಿಸಬೇಕಾಗುತ್ತದೆ. ವ್ಯಾಪಾರಸ್ಥರು ವ್ಯಾಪಾರ ಮಾಡುವ ಸ್ಥಳದಲ್ಲಿ ಸರಿಯಾದ ಬೆಲೆಯ ಮತ್ತು ದಾಸ್ತಾನಿನ ಬೋರ್ಡ್ ಹಾಕಬೇಕಾಗುತ್ತದೆ. ಇಂಥ ಕಾನೂನು ಜಾರಿಯಲ್ಲಿರುವಾಗ ಯಾರು ಯಾರ ಹತ್ತಿರ ಎಷ್ಟೆಷ್ಟು ದಾಸ್ತಾನಿದೆ ಎಂಬುದನ್ನು ಹೇಳುವಂಥ ವ್ಯವಸ್ಥೆ ಸರ್ಕಾರವಲ್ಲಿರಬೇಕು. ಈ ರೀತಿ ದಾಸ್ತಾನು ಮಾಡುವವರನ್ನು ಮತ್ತು ಕಳ್ಳ ಸಾಗಾಣಿಕೆಗಾರರನ್ನು ಮಟ್ಟ ಹಾಕಲಿಕ್ಕೆ ಖಂಡಿತವಾಗಿ ಸರ್ಕಾರಕ್ಕೆ ಸಾಮರ್ಥ್ಯ ಇದೆ ಎಂಬ ಮಾತನ್ನು ಹೇಳಬೇಕಾಗಿದೆ.

೭-೦೦ ಪಿ.ಎಂ.

ಈ ರೀತಿ ದಾಸ್ತಾನು ಮಾಡುವವರನ್ನು ಕಳ್ಳಸಾಗಾಣಿಕೆ ಮಾಡುವವರನ್ನು ಮಟ್ಟಹಾಕುವುದಕ್ಕೆ ಸಾಮರ್ಥ್ಯ ಇದೆ. ಆದರೆ ಮನಸ್ಸಿಲ್ಲ. ಭಾರತ ಆಹಾರ ನಿಗಮದ ಬಗ್ಗೆ ಒಂದು ಮಾತನ್ನು ಹೇಳು

ತ್ತೇನೆ. ಈ ವಿಚಾರ ಕೆಲವು ದಿವಸಗಳ ಹಿಂದೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ೧ ಲಕ್ಷ ೨೫ ಸಾವಿರದ ೧೦೧ ಮೆಟ್ರಿಕ್ ಟನ್ ಭತ್ತ ೧೯೮೦-೮೧ನೇ ಇಸವಿಯಲ್ಲಿ ಪಂಜಾಬ್ ರಾಜ್ಯಕ್ಕೆ ಕೊಟ್ಟಿದ್ದು ಚಂಡೀಗಢದ ಭಾರತ ಆಹಾರ ನಿಗಮದಲ್ಲಿ ಶೇಖರಣೆಯಾಗಿತ್ತು. ಅದು ಹಾಳಾಗಿರುವ ಭತ್ತವನ್ನು ಯಾವ ಪರಿಸ್ಥಿತಿಯಲ್ಲಿದೆಯೋ ಅದೇ ಪರಿಸ್ಥಿತಿಯಲ್ಲಿ ಯಾರೂ ಬೇಕಾದರೂ ಖರೀದಿ ಮಾಡಬಹುದು ಎಂಬ ಪ್ರಕಟಣೆ ಪತ್ರಿಕಯಲ್ಲಿ ಬಂದಿದೆ. ಈ ರೀತಿ ಭಾರತ ಆಹಾರ ನಿಗಮದಲ್ಲಿ ದಾಸ್ತಾನಾಗಿ ಕೊಳೆಯುತ್ತಿದ್ದರೂ ಜನ ಇಲ್ಲಿ ಅರೆಹೊಟ್ಟೆಯಿಂದ ಸಾಯುತ್ತಿದ್ದಾರೆ. ಬೆಲೆ ಗಗನಕ್ಕೆ ಏರುತ್ತಿದೆ. ಈ ರೀತಿ ಇರುವಾಗ ಸರಿಯಾದ ವ್ಯವಹಾರ ನಡೆಯುತ್ತಿಲ್ಲ ಎಂದು ಸ್ಪಷ್ಟವಾಗಿ ನಾನು ಹೇಳಬೇಕಾಗಿದೆ. ಈ ಸರ್ಕಾರ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ. ನಾನು ಜನತಾ ಪಕ್ಷದ ಸರ್ಕಾರಕ್ಕೆ ಒಂದು ನೆನಪು ಮಾಡಿಕೊಡುತ್ತೇನೆ, ೧೯೮೦ನೇ ಇಸವಿಯಲ್ಲಿ ಲೋಕಸಭಾ ಚುನಾವಣೆ ನಡೆದಾಗ ಶ್ರೀಮತಿ ಇಂದಿರಾಗಾಂಧಿಯವರು ಒಂದೇ ಒಂದು ಘೋಷಣೆ ಮಾಡಿದರು. ನೀರುಳ್ಳಿ ಬೆಲೆ ಒಂದು ಬೆಲೆ ಒಂದು ಕೆ.ಜಿ.ಗೆ ೫ ರೂಪಾಯಿಗಳು ಆಯಿತು, ಆದ್ದರಿಂದ ಜನತಾ ಪಕ್ಷಕ್ಕೆ ಓಟು ಕೊಡಬೇಡಿ ಎಂದು ಹೇಳಿ ಜನತೆಯ ಮನಸ್ಸನ್ನು ಗೆದ್ದಿದ್ದರು. ಸರ್ಕಾರ ಏನೇ ಒಳ್ಳೆಯ ಕೆಲಸ ಮಾಡಿದರೂ ದಿನಬಳಕೆಯ ವಸ್ತುಗಳ, ಆಹಾರ ಧಾನ್ಯಗಳ ಬೆಲೆಯನ್ನು ಹತೋಟಿಗೆ ತರದಿದ್ದರೆ ಜನಸಾಮಾನ್ಯರ ವಿಶ್ವಾಸವನ್ನು ಸರ್ಕಾರ ಕಳೆದುಕೊಳ್ಳುತ್ತದೆ. ಆದ್ದರಿಂದ ತಕ್ಷಣ ಈ ಬಗ್ಗೆ ತೀವ್ರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹಣವನ್ನು ವೆಚ್ಚ ಮಾಡುವುದಕ್ಕೆ ಏನು ಅಧಿಕಾರ ಕೊಡುತ್ತಿದ್ದೇವೆ ಇದನ್ನು ಸರಿಯಾಗಿ ಉಪಯೋಗಿಸಿಕೊಂಡು ಆಹಾರ ಧಾನ್ಯಗಳ ಬೆಲೆಯನ್ನು ಹತೋಟಿಗೆ ತಂದು ಸಾಕಷ್ಟು ಆಹಾರ ಧಾನ್ಯಗಳ ಪೂರೈಕೆಯನ್ನೂ ಮಾಡುತ್ತೀರಿ ಎಂದು ವಿಶ್ವಾಸವನ್ನು ಹೊಂದಿದ್ದೇನೆ, ಕೇವಲ ಸಾರ್ವಜನಿಕ ವಿತರಣಾ ಜಾಲದ ಮೂಲಕ ವಿತರಣೆ ಮಾಡಿದರೆ ಸಾಲದು. ಮುಕ್ತ ಮಾರುಕಟ್ಟೆಯಲ್ಲಿ ಕೂಡ ಬೆಲೆಗಳು ಸ್ಥಿಮಿತದಲ್ಲಿರಬೇಕು ಮತ್ತು ಸಾಕಷ್ಟು ಪೂರೈಕೆಯಾಗಬೇಕು. ಕಿಸೆಯಲ್ಲಿ ಹಣವಿದ್ದರೂ ಮಾರುಕಟ್ಟೆಯಲ್ಲಿ ವಸ್ತುಗಳು ಖರೀದಿಗೆ ಸಿಗದಿದ್ದರೆ ಬೆಲೆಗಳು ಏರುತ್ತವೆ. ಆದ್ದರಿಂದ ನಾಗರೀಕ ಪೂರೈಕೆ ವಿಚಾರದಲ್ಲಿ ಮಾತ್ರ ಗಮನ ಹರಿಸದೆ ಮಾರುಕಟ್ಟೆಯಲ್ಲಿ ಸಾಕಷ್ಟು ಆಹಾರಧಾನ್ಯಗಳನ್ನು ಪೂರೈಸಿ ಕಡಿಮೆ ಬೆಲೆಯಲ್ಲಿ ಜನರಿಗೆ ಸಿಗುವಂತೆ ಮಾಡಬೇಕಾದ ದೊಡ್ಡ ಜವಾಬ್ದಾರಿ ಆಹಾರ ಮಂತ್ರಿಗಳ ಮೇಲಿದೆ. ಇದನ್ನು ಸಚಿವರು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಾರೆಂಬ ವಿಶ್ವಾಸವನ್ನು ವ್ಯಕ್ತಪಡಿಸಿ ಮತ್ತೊಮ್ಮೆ ಬೇಡಿಕೆಗೆ ನನ್ನ ಸಮ್ಮತಿಯನ್ನು ಸೂಚಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಸನ್ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಯನ್ನು ಸಮರ್ಥಿಸುತ್ತಾ ೫-೧೦ ನಿಮಿಷಗಳಲ್ಲಿ ಹಲವಾರು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮನ್ನೆಲ್ಲಾ ಪಾವಗಡದ ತೋಳ ಎಂದು ಹೇಳಿದ್ದಾರೆ. ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ಪಾವಗಡದ ತೋಳದಂತೆ ಇದ್ದೀರಿ ಎಂಬ ಮಾತನ್ನು ಆಡಿದ್ದಾರೆ. ಮಾನ್ಯ ಬಂಗಾರಪ್ಪನವರು ಈ ಸರ್ಕಾರಕ್ಕೆ ಬೆಲೆ ಏರಿಸುವುದರಲ್ಲಿ ಹೊಣೆಗಾರಿಕೆ ಇದೆ, ಬೆಲೆ ಇಳಿಸುವುದರಲ್ಲಿ ಹೊಣೆಗಾರಿಕೆ ಇಲ್ಲ ಎಂದು ಹೇಳಿದರು. ಅಂಕಿಅಂಶಗಳ ಮೂಲಕ ಕೇಂದ್ರ ಸರ್ಕಾರ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವುದರಲ್ಲಿ ಯಾವ ರೀತಿ ರಾಜ್ಯದಲ್ಲಿ ರಾಜಕೀಯ ಮಾಡುತ್ತಿದೆ ಎಂಬುವುದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ನಾನು ಅವರನ್ನು ಪಾವಗಡದ ತೋಳ ಎಂದು ಹೇಳುವುದಿಲ್ಲ. ಆದರೆ ಆಹಾರ ಸಾಮಾಗ್ರಿಯನ್ನು ಜನತೆಗೆ ಒದಗಿಸುವುದರಲ್ಲಿ ಕೇಂದ್ರದ ರಾಜಕೀಯ ಯಾವರೀತಿ ಇದೆ ಎಂಬ ಬಗ್ಗೆ ಒಂದೆರಡು ಉದಾಹರಣೆಗಳನ್ನು ಹೇಳುತ್ತಿದ್ದೇನೆ. ಸ್ವಾಮಿ, ಪಠ್ಯ ಪುಸ್ತಕಗಳನ್ನು ಅಚ್ಚು ಮಾಡುವುದಕ್ಕೆ ಮತ್ತು ಲೇಖಕ್ ಪುಸ್ತಕಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವುದಕ್ಕೆಂದು ಕೇಂದ್ರದವರು ರಿಯಾಯಿತಿ ದರದಲ್ಲಿ ಕಾಗದ ಒದಗಿಸುತ್ತಾರೆ. ಇದು ಹಿಂದಿನಿಂದಲೂ ಕೊಡುತ್ತಿದ್ದಾರೆ. ಈ ಸಾರಿ ನಮ್ಮ ಬೇಡಿಕೆ ಇದ್ದದ್ದು ೧೦,೬೦೦ ಮೆಟ್ರಿಕ್ ಟನ್ ಕಾಗದ. ಆ ಬೇಡಿಕೆಯಲ್ಲಿ ಕೇಂದ್ರದಿಂದ ಕೊಟ್ಟಿರತಕ್ಕದ್ದು ಕೇವಲ ೨,೫೪೫ ಮೆಟ್ರಿಕ್ ಟನ್ ಈ ವರ್ಷ ಏನು ಮಾಡಿದ್ದಾರೆ ಗೊತ್ತೆ ? ಮಾರ್ಚ್ ೮೩ರಲ್ಲಿ ಪೇಪರ್ ಅಲಾಟ್‌ಮೆಂಟ್ ಕೊಡಲಿಲ್ಲ. ಏಪ್ರಿಲ್ ೮೩ ಮತ್ತು ಜೂನ್ ೮೩ರಲ್ಲಿ ಕೇವಲ ೪೧೦ ಮೆಟ್ರಿಕ್ ಟನ್ ಕಾಗದ ಕೊಟ್ಟರು. ಮೈಸೂರು ಪೇಪರ್ ಮಿಲ್ಸ್‌ನಿಂದ ೩೦೦ ಮೆಟ್ರಿಕ್ ಟನ್, ವೆಸ್ಟ್ ಕೋಸ್ಟ್ ಪೇಪರ್ ಮಿಲ್‌ನಿಂದ ೧೧೦ ಮೆಟ್ರಿಕ್ ಟನ್ ಕೊಟ್ಟಿದ್ದಾರೆ. ಆದರೆ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನವರು ಇನ್ನೂ ಸರಬರಾಜು

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಲಿಲ್ಲ. ಅಂದರೆ ಕೇವಲ ೩೦೦ ಮೆಟ್ರಿಕ್ ಟನ್ ಕೊಟ್ಟಿದ್ದಾರೆ. ಮೊದಲು ೪೭೦೦ ರೂಪಾಯಿಗಳ ಸಬ್ಸಿಡೈಸ್ಡ್ ರೇಟ್ ಇದ್ದರೆ ಈಗ ೫೪೦೦ ರೂಪಾಯಿಗಳಲ್ಲಿ ಕೊಟ್ಟರು. ನಮಗೆ ಬೇಕಾಗಿರತಕ್ಕ ಕಾಗದ ೧೦,೬೦೦ ಮೆಟ್ರಿಕ್ ಟನ್ ಇದ್ದರೆ ನಮ್ಮ ಬೇಡಿಕೆಯಲ್ಲಿ ಕನಿಷ್ಠಪಕ್ಷ ೪೫–೫೦ ಪರ್ಸೆಂಟೂ ಕೊಡಲಿಲ್ಲ. ಆದರೆ ಸರ್ಕಾರದ ಜವಾಬ್ದಾರಿ ಇರುವುದರಿಂದ ನಮ್ಮ ಸರ್ಕಾರ ವಿದ್ಯಾರ್ಥಿಗಳ ಬೇಡಿಕೆಯನ್ನು ಈಡೇರಿಸಬೇಕು ಎಂದು ಮುಕ್ತ ಮಾರುಕಟ್ಟೆಯಲ್ಲಿ ೬೫೦೦ ರೂಪಾಯಿಗಳಂತೆ ೩೪೦೦ ಮೆಟ್ರಿಕ್ ಟನ್ ಕಾಗದ ತೆಗೆದುಕೊಂಡು ಹಂಚಿ ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸದಿದ್ದಾಗ ತಾವು (ವಿರೋಧಪಕ್ಷದವರು) ಏನು ಮಾಡಿದ್ದೀರಿ ? ಕೇಂದ್ರ ಸರ್ಕಾರದ ಬಗ್ಗೆ ಏನಾದರೂ ಹೇಳಿದರೆ ಅದನ್ನು ರಕ್ಷಣೆ ಮಾಡುವ ದೃಷ್ಟಿಯಲ್ಲಿ ಮಾತನಾಡುತ್ತೀರೇ ಹೊರತು ಜನತೆಯ ಹಿತಾಶಕ್ತಿಯಿಂದ ಮಾತನಾಡುವುದಿಲ್ಲ. ಕರ್ನಾಟಕ ಜನರಿಂದ ನಾವೆಲ್ಲಾ ಆರಿಸಿ ಬಂದಿರುವರು, ಅವರು ಅಭಿಮಾನ ಇದ್ದರೆ ಮತ್ತೆ ನಾವು ಆರಿಸಿಬರುತ್ತೇವೆ, ಇಲ್ಲದಿದ್ದರೆ ಇಲ್ಲ ಎಂಬ ಭಾವನೆ ಇರಬೇಕು. ಕೇಂದ್ರ ಸರ್ಕಾರದ ಅಭಿಮಾನದ ಪ್ರಶ್ನೆ ಮುಖ್ಯವಲ್ಲ. ಕರ್ನಾಟಕ ರಾಜ್ಯದ ಹಿತಾಶಕ್ತಿಯನ್ನು ಕಾಪಾಡುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂಬುದಕ್ಕೆ ಇದು ಉದಾಹರಣೆ. ನಮ್ಮ ಸರ್ಕಾರ ಜನತೆಯ ಹಿತದೃಷ್ಟಿಯಿಂದ ೬೫೦೦ ರೂಪಾಯಿಗಳಂತೆ ೩೪೦೦ ಮೆಟ್ರಿಕ್ ಟನ್ ಕಾಗದವನ್ನು ಮುಕ್ತ ಮಾರುಕಟ್ಟೆಯಲ್ಲಿ ಕೊಂಡುಕೊಂಡು ವಿತರಣೆ ಮಾಡಿರುವ ಕೆಲಸವನ್ನು ತಾವು ಸ್ವಾಗತ ಮಾಡಬೇಕಾಗಿತ್ತು. ಎರಡನೆಯದಾಗಿ ಈ ಸರ್ಕಾರ ಬಂದಮೇಲೆ ಆಹಾರದ ವಿಷಯದಲ್ಲಿ ಕೇಂದ್ರದಿಂದ ಏನು ಕೇಳಿದ್ದೀರಿ, ಅವರು ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಅವರು ಮಾತನಾಡಿದರು. ನಮ್ಮ ಆಹಾರ ಮಂತ್ರಿಗಳು ನವದೆಹಲಿಯಲ್ಲಿ ಒಂದು ಸಮ್ಮೇಳನಕ್ಕೆ ಹೋದಾಗ ಅವರು ನಮಗೆ ೪೦ ಸಾವಿರ ಟನ್ ಅಕ್ಕಿ ಬೇಕಾಗುತ್ತದೆ ಎಂಬ ಮಾತನ್ನು ಹೇಳಿದರು. ಆದರೆ ಕೊಟ್ಟಿರತಕ್ಕದ್ದು ೧೫ ಸಾವಿರ ಟನ್ ಅಕ್ಕಿ ಮಾತ್ರ. ಹಿಂದೆ ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ೧೦,೦೦೦ ಟನ್ ನಮಗೆ ಕೊಟ್ಟಿರತಕ್ಕ ಅಕ್ಕಿ ಸಾಲದು ಎಂಬ ಮಾತನ್ನು ಹೇಳಿದ್ದೆವು. ೧೯೮೨–೮೩ನೇ ಸಾಲಿನಲ್ಲಿ ಒಂದು ಕಾಳು ಅಕ್ಕಿ ಕೂಡ ಜಾಸ್ತಿ ಮಾಡಲಿಲ್ಲ. ಈಗ ೫ ಸಾವಿರ ಟನ್ ಹೆಚ್ಚು ಅಕ್ಕಿ ಬರತಕ್ಕದ್ದನ್ನು ಮಾನ್ಯ ವಿರೋಧಪಕ್ಷದವರು ಸ್ವಾಗತ ಮಾಡುತ್ತಾರೆ ಎಂದು ನಾನಂದುಕೊಂಡಿದ್ದೇನೆ.

ಶ್ರೀ ವೀರಪ್ಪ ಮೊಯಿಲಿ.—ಕೇಂದ್ರಕ್ಕೆ ಅಭಿನಂದನೆ ಕೊಡಿ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳು ಅಲ್ಲಿ ಕುಳಿತು ರಾಜ್ಯದ ಬವಣೆಯನ್ನು ಹೇಳಿದ್ದಾರೆ. ಆದ್ದರಿಂದ ನಮ್ಮ ಮಂತ್ರಿಗಳಿಗೆ ಶಹಬಾಸ್‌ಗಿರಿ ಕೊಡಬೇಕು. ಕೊರತೆ ರಾಜ್ಯವಾದ ಕೇರಳಕ್ಕೆ ೧,೩೫,೦೦೦ ಟನ್ ಕೊಡುತ್ತಿದ್ದಾರೆ, ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾರ್ಜಿನಲ್ಲಿ ಸರ್‌ಪ್ಲಸ್ ಇದೆ ಕರ್ನಾಟಕ. ಕೇರಳದಲ್ಲಿ ಟೋಟಲ್ ಡಿಫಿಸಿಟ್ ಇದೆ. ಹೋಲಿಕೆ ಮಾಡುವಾಗ ತಾವು ನೋಡಿಕೊಂಡು ಮಾಡಿ.

ಶ್ರೀ ಪಿ. ರಾಮದೇವ್.—ಮಂಗಳೂರಿನಲ್ಲಿ ಸಾಕಾಗುವುದಿಲ್ಲ ಎಂದು ಹೇಳಿದ್ದೀರಿ ನಿಜ ಆದರೆ ನೀವು ಈ ಬಗ್ಗೆ ಚಕಾರ ಎತ್ತಲಿಲ್ಲ. ಪ್ರತಿಭಟನೆ ಮಾಡಲಿಲ್ಲ. ಕೇಂದ್ರದ ಏಜೆಂಟರುಗಳ ತರಹ ಮಾತನಾಡುವವರು ಈ ಬಗ್ಗೆ ಹೋರಾಟವನ್ನು ಏತಕ್ಕೆ ಮಾಡಲಿಲ್ಲ ? ಇಲ್ಲಿ ಶೂರತ್ವ, ವಿರತ್ವವನ್ನು ತೋರಿಸುತ್ತೀರಿ, ಆದರೆ ಅವರನ್ನು ಕೇಳತಕ್ಕ ಪ್ರಯತ್ನ ಏತಕ್ಕೆ ಮಾಡಲಿಲ್ಲ ? ನಿಮ್ಮ ಶೌರ್ಯವನ್ನು ಅಲ್ಲಿ ಪ್ರದರ್ಶನ ಮಾಡಬೇಕು. ನಿಮ್ಮ ನಾಯಕಿಯು ಮುಂದೆ ಏತಕ್ಕೆ ಮಾಡಲಿಲ್ಲ ? ನಮ್ಮ ಜನರ ಹಿತಾಶಕ್ತಿಯನ್ನು ಕಾಪಾಡುವುದರಲ್ಲಿ ತಾವು ವಿಫಲರಾಗಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ನೀವುಎಲ್ಲ ಜನರ ಏಜೆಂಟರಾಗಿ ಕೆಲಸ ಮಾಡುತ್ತಿದ್ದೇವೆ. ನೀವು ಕೇಂದ್ರದ ಏಜೆಂಟಾಗಿ, ಮುಖ್ಯ ಮಂತ್ರಿಗಳು ಮತ್ತು ಮಂತ್ರಿಗಳ ಏಜೆಂಟಾಗಿ ಏಜೆನ್ಸಿ ಕೆಲಸ ಮಾಡಬೇಡಿ. ಇದನ್ನು ಬೇರೆ ಕಡೆ ಮಾಡಿ. ಇಲ್ಲಿ ಬೇಡ.

ಶ್ರೀ ಪಿ. ರಾಮದೇವ್.—ಕೇಂದ್ರ ಸರ್ಕಾರದ ತಪ್ಪನ್ನು ತೋರಿಸಿದರೆ ನೀವು ಹೌಹಾರುತ್ತೀರಿ. ಸಭೆಯಲ್ಲಿ ಕುಳಿತುಕೊಳ್ಳುವುದೇ ಇಲ್ಲ. ತಾವು ಮೊದಲು ಕನ್ನಡಿಗರ ಬಗ್ಗೆ ಸ್ವಾಭಿಮಾನ ಇಟ್ಟುಕೊಳ್ಳಬೇಕು. ಅದನ್ನು ಕಲಿತುಕೊಳ್ಳಿ. ನಿಮ್ಮಲ್ಲಿ ಕನ್ನಡಿಗರ ಬಗ್ಗೆ ಸ್ವಾಭಿಮಾನ ಸಾಲದು. ಎಲ್ಲ ಕ್ಷೇತ್ರದಲ್ಲಿ ಆಗುತ್ತಾ ಇರುವುದು ತಮಗೆ ಗೊತ್ತಿದೆ. ಮಾತೆತ್ತಿದರೆ ನಾವು ಕೇಂದ್ರದ ವಿರೋಧಿಗಳು ಎಂದು ಹೇಳುತ್ತೀರಿ. ನಮಗೆ ಹೇಗೆ ಅನ್ಯಾಯವಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ಮದ್ರಾಸ್‌ಗೆ ೪೦ ಸಾವಿರ ಟನ್ ಅಕ್ಕಿ ಕೊಡುತ್ತಿದ್ದಾರೆ. ಅವರಿಗಿಂತಾ ಕಡಿಮೆಯೇ ಸ್ವಾಮಿ

ನಾವು? ಎಂ.ಜಿ.ಆರ್. ಸರ್ಕಾರ ಕಂಡರೆ ಇವರಿಗೆ ಭಯ. ಎಲ್ಲಿ ಅವರು ಉಪವಾಸ ಕುಳಿತುಕೊಂಡು ಬಿಡುತ್ತಾರೋ ಎಂದು ಇವರು ಹೆದರುತ್ತಾರೆ. ಆದರೆ ಇಲ್ಲಿ ಏನಾಗಿದೆ, ಈಗ ಸ್ವಲ್ಪ ಹೆದರಿಕೆ ಬಂದಿರುವುದರಿಂದ ೫ ಸಾವಿರ ಟನ್ ಜಾಸ್ತಿ ಮಾಡಿದ್ದಾರೆ. ಇಲ್ಲಿ ಅನ್ಯಾಯವಾಗಿದೆ.

ಡಾ|| ವಿ.ಎಸ್. ಆಚಾರ್ಯ.—ನಿಮ್ಮನ್ನು ಕಂಡರೆ ಅವರಿಗೆ ಹೆದರಿಕೆ ಅಷ್ಟೇ?

ಶ್ರೀ ಪಿ. ರಾಮ್‌ದೇವ್.—೫.೦೦೦ ಟನ್ ಆದರೂ ಬಂತಲ್ಲಾ ?

ಶ್ರೀ ಜೆ.ಡಿ. ಸೋಮಪ್ಪ.—ನಿಮ್ಮ ಬಗ್ಗೆ ಹೆದರಿಕೆ ಎಂದು ನೀವೇ ಹೇಳಿದಿರಿ. ಇದನ್ನು ನಾಳೆ ಪ್ರೆಸ್‌ನವರು ಹಾಕಿಬಿಟ್ಟರೆ ಆಮೇಲೆ ನಿಮ್ಮನ್ನು ಕಂಡರೆ ಯಾರೂ ಹೆದರೋಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಕಡೆ ಇದ್ದಾಗ ನಿಮ್ಮ ಟೋನೇ ಬೇರೆ ಇತ್ತು. ಬೆಂಗಳೂರಿನ ನಾಗರೀಕರ ಬಗ್ಗೆ, ಇಲ್ಲಿನ ವಿತರಣೆ ಬಗ್ಗೆ ತಾವು ಮಾತನಾಡುತ್ತಿದ್ದುದು ಕಡತದಲ್ಲಿ ಇದೆ. ಈಗ ನಿಮ್ಮ ಪ್ಲೇಟು ಛೇಂಜ್ ಆಗಿರುವುದಕ್ಕೆ ಯಾರ ಹೆದರಿಕೆ ಕಾರಣ ?

ಶ್ರೀ ಪಿ. ರಾಮ್‌ದೇವ್.—ಅದಕ್ಕೂ ನಾನು ಬರುತ್ತೇನೆ. ನಾವು ಹೆಚ್ಚಿನ ಗೋಧಿಯನ್ನು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನಲ್ಲಿ ಒದಗಿಸಬೇಕೆಂದು ಹೇಳುತ್ತಿದ್ದೆವು. ಹಿಂದೆ ೩ ಸಾವಿರ ಟನ್ ಬರುತ್ತಿದ್ದುದು ಈಗ ೪,೮೫೦ ಟನ್ ಬರುತ್ತಿದೆ. ನಾವು ಕೇಳಿದ್ದುದು ೧೦ ಸಾವಿರ ಟನ್. ಏಕೆ ಸ್ವಾಮಿ ಕೊಡುವುದಿಲ್ಲ ? ರೋಲರ್ ಫ್ಲೋರ್ ಮಿಲ್ಸ್‌ಗೆ ೨೨ ಸಾವಿರದಿಂದ ೪೦ ಸಾವಿರ ಟನ್‌ವರೆಗೆ ಕೊಡಬೇಕೆಂದು ಹೇಳುತ್ತೀರಿ. ಅಲ್ಲಿ ಆಗತಕ್ಕ ಭ್ರಷ್ಟಾಚಾರ, ಅವ್ಯವಹಾರ ಜಗತ್ತಿಗೇ ಗೊತ್ತಿದೆ. ಅಲ್ಲಿಗೆ ಕೊಡುವುದನ್ನು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಸ್ವಾಮಿ, ನಿಮ್ಮ ಕೇಂದ್ರ ಸರ್ಕಾರದ ಎಫ್.ಸಿ.ಐ. ಅಧಿಕಾರಿಗಳು ಮಾಡಿರತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತೇವೆ. ತಾವು ಇದನ್ನು ಕೇಳುತ್ತೀರೆಂದು ತಿಳಿದುಕೊಂಡಿದ್ದೆ. ಕೇಂದ್ರ ಸರ್ಕಾರದವರು ಗೋಧಿಯ ಬೆಲೆಯನ್ನು ೧೫–೪–೮೩ರಲ್ಲಿ ಜಾಸ್ತಿ ಮಾಡಿದರು. ರೋಲರ್ ಫ್ಲೋರ್ ಮಿಲ್‌ಗೆ ಆಗ ಸಪ್ಲೈ ಮಾಡುತ್ತಿದ್ದ ಬೆಲೆ ರೂ. ೯೬.೪೫ ಒಂದು ಕ್ವಿಂಟಾಲ್‌ಗೆ. ಆ ಮೇಲೆ ಏನು ಮಾಡಿದರು ಎಂಬುದು ಗೊತ್ತೇ ? ಅದನ್ನು ೧೫–೪–೮೩ ರಿಂದ ೨೧೮.೮೧ ರೂಪಾಯಿಗಳಿಗೆ ಏರಿಸಿದರು. ಆಗ ಬೆಲೆ ಜಾಸ್ತಿಯಾಯಿತು ನಾವು ಸಾರ್ವಜನಿಕ ವಿತರಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ನಿಲ್ಲಿಸಿ ಬಿಟ್ಟರು. ಆದರೆ ರೋಲರ್ ಫ್ಲೋರ್ ಮಿಲ್‌ಗಳಿಗೆ ೪ ದಿವಸ ಅವಕಾಶ ಕೊಟ್ಟು ಹಳೇ ರೇಟ್‌ನಲ್ಲಿ ೨೨ ಸಾವಿರ ಟನ್ ಗೋಧಿಯನ್ನು ಮಾರಿದರು. ಇದರ ಅವ್ಯವಹಾರ ಎಷ್ಟು ಗೊತ್ತೇ ಸ್ವಾಮಿ ? ಇಲ್ಲಿ ೫೫ ಲಕ್ಷ ರೂಪಾಯಿಗಳ ಮೋಸ ನಡೆದಿದೆ. ಈ ಬಗ್ಗೆ ತಾವು ಕೇಂದ್ರ ಸರ್ಕಾರವನ್ನು ಕೇಳಬೇಕು. ೫೫ ಲಕ್ಷ ರೂಪಾಯಿಗಳನ್ನು ಇವರು ತಿಂದು ಹಾಕಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದನ್ನು ನಿಮ್ಮ ಮಂತ್ರಿಗಳಿಗೆ ಹೇಳಿ.

ಶ್ರೀ ಪಿ. ರಾಮ್‌ದೇವ್.—ಅವರ ಗಮನಕ್ಕೆ ನಾನು ಆಗಲೇ ತಂದಿದ್ದೇನೆ. ಇನ್ನು ಕಂಟ್ರೋಲ್ ಕ್ಲಾತ್ ಬಗ್ಗೆ ಹೇಳಬೇಕೆಂದರೆ ಬೇರೆ ಬೇರೆ ರಾಜ್ಯಗಳಿಗೆ ೪ ಸಾವಿರ ೫ ಸಾವಿರ ಬೇಲ್ಸ್ ಕೊಟ್ಟರೆ ನಮಗೆ ಬರೀ ೯೦೦ ಬೇಲ್ಸ್ ಮಾತ್ರ ಕೊಡುತ್ತಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಪವರ್‌ಫುಲ್ ಇದ್ದಾರೆ. ಅವರು ಸ್ವಲ್ಪ ಕೇಂದ್ರಕ್ಕೆ ಹೇಳಬೇಕು. ಜನರಿಗೆ ಅನುಕೂಲ ಆಗುವ ವಿಷಯದಲ್ಲಿ ಸಹಕಾರ ಕೊಡಬೇಕು. ಇನ್ನು ಪ್ಯಾಕೇಜ್ ಕಮಾಡಿಟೀಸ್ ಆಕ್ಟ್ ೧೯೭೩ ಇದೆ. ಇವತ್ತು ಸಿಗರೇಟ್ ಮೇಲೆ ಏನು ಬೆಲೆ ನಿಗಧಿ ಮಾಡಿದ್ದಾರೆ ಆ ಬೆಲೆಯಲ್ಲಿ ಯಾರೂ ಸಿಗರೇಟ್ಸ್ ಮಾರುತ್ತಿಲ್ಲ. ತಮ್ಮದೇ ಆದ ಬೆಲೆಯನ್ನು ನಮೂದು ಮಾಡಿರುತ್ತಾರೆ. ಈ ಬಗ್ಗೆ ಬೆಲೆಯನ್ನು ನೀವು ಹದ್ದುಬಸ್ತಿನಲ್ಲಿ ಇಡಬೇಕೆಂದು ಹೇಳುತ್ತೇನೆ. ಮಾನ್ಯ ಕೃಷ್ಣನ್‌ನವರು ಕೂಡ ಇದನ್ನು ಹೇಳಿದ್ದಾರೆ. ಮಂಗಳೂರಿಗೆ ೮ ಕೆ.ಜಿ. ಕೊಟ್ಟು, ಕೆ.ಜಿ.ಎಫ್.ಗೆ ೬ ಕೆ.ಜಿ. ಕೊಟ್ಟು ಬೆಂಗಳೂರಿಗೆ ಬರೀ ಮೂರೂವರೆ ಕೆ.ಜಿ. ಕೊಡುವುದು ಯಾವ ನ್ಯಾಯ ? ಇಲ್ಲೂ ಅಲ್ಲಿ ಕೊಡುವ ಪಡಿತರ ರೀತಿಯಲ್ಲಿ ಕೊಡಬೇಕಾಗುತ್ತದೆ. ಇಲ್ಲೂ ಕಾರ್ಮಿಕರು ಇದ್ದಾರೆ ಸ್ವಾಮಿ. ಇನ್ನು ಹೋಟೆಲ್ ತಿಂಡಿ ತೀರ್ಥಗಳು ಗಗನಕ್ಕೆ ಹೋಗಿವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಲ್ಲಿ ತಮ್ಮವರೇ ಇರುವುದು. ತಾವು ಈ ಬಗ್ಗೆ ಹೇಳಿದರೆ ಸರ್ಕಾರಕ್ಕೆ ಪರಿಣಾಮ ಬೀರುತ್ತದೆ.

ಶ್ರೀ ಪಿ. ರಾಮ್‌ದೇವ್.—ಈ ಬಗ್ಗೆ ಹೇಳಿ ಇನ್ನು ಮಾನ್ಯ ಮೊಯಿಲಿಯವರು ನಮ್ಮನ್ನು ಪಾವಗಡದ ತೋಳ ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ನಿಮ್ಮನ್ನು ಪಾವಗಡದ ತೋಳ ಎಂದು ಹೇಳಲಿಲ್ಲ. ತೋಳ ಬಂತು ತೋಳ ಬಂತು ಎನ್ನುವ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದೀರಿ. ಸುಮ್ಮನೆ ಕೇಂದ್ರವನ್ನು ದೂರುತ್ತಿದ್ದೀರಿ ಎಂದನೆ ಹೇಳಿದ್ದೇನೆಯೋ ಹೊರತು ತಮ್ಮನ್ನು ಪಾವಗಡದ ತೋಳ ಎಂದು ಹೇಳಲಿಲ್ಲ.

ಶ್ರೀ ಪಿ. ರಾಮ್‌ದೇವ್.—ಅದು ಬೇಡ. ಏಕೆಂದರೆ ತಾವು ಅಧಿಕಾರದ ರುಚಿ ನೋಡಿ ಹೊರಗೆ ಬಂದಿದ್ದೀರಿ ಆದುದರಿಂದ ತಾವು ಬ್ರಹ್ಮ ರಾಕ್ಷಸನ ರೀತಿ ವರ್ತನೆ ಮಾಡುವುದು ಬೇಡ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ.ಡಿ. ಸೋಮಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಆಹಾರ ಮಂತ್ರಿಗಳು ತಂದಿರತಕ್ಕ ಆಹಾರ ಮತ್ತು ನಾಗರೀಕ ಸರಬರಾಜು ಖಾತೆಗಳ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಖಾತೆ ಸನ್ಮಾನ್ಯ ಅಧ್ಯಕ್ಷರೇ, ಅಲ್ಲೂ ಜನರು ಇಲ್ಲ, ಇಲ್ಲೂ ಜನರು ಇಲ್ಲ. ರಾಜ್ಯದಲ್ಲಿ ಆಹಾರ ಇಲ್ಲ ಮತ್ತು ಕೇಳುವವರು ಇಲ್ಲ. ಇವತ್ತು ಕ್ಯಾಂಟೀನ್‌ಗೆ ಹೋದರೆ ಅಲ್ಲಿ ಊಟ ಇಲ್ಲ, ರಾಜ್ಯದಲ್ಲಿ ಆಹಾರದ ಕೊರತೆ. ತಾವು ಸಮಯದ ಬಗ್ಗೆ ಮಾತನಾಡುತ್ತೀರಿ. ಮಾನ್ಯ ಲಕ್ಷ್ಮೀಸಾಗರ್ ಅವರು ಈಗ ಬಂದರು ಬಹಳ ಸಂತೋಷ, ನಾನು ಮಾತನಾಡುವಾಗ ಅವರು ಇರುವುದು ಬಹಳ ಸಂತೋಷ. ಪ್ರೆಸ್‌ನವರು ಒಬ್ಬರೂ ಇಲ್ಲ. ನಾನು ಭಾಷಣ ಪ್ರಾರಂಭ ಮಾಡುವ ಮುನ್ನ ಕ್ಯಾಂಟೀನ್‌ಗೆ ಹೋದೆ. ಅಲ್ಲ ಆಹಾರ ಇಲ್ಲ. ಈ ರಾಜ್ಯದ ಆಹಾರ ಎಲ್ಲಿ ಹೋಯಿತು ? ಇನ್ನೊಂದು ವಿಷಯ. ಈ ಸರ್ಕಾರ ಅಧಿಕ ರಕ್ಕೆ ಬಂದ ತಕ್ಷಣ ಒಂದು ಕಮಿಟಿಯನ್ನು ಮಾಡಿತು. ಆ ಬಗ್ಗೆ ವರದಿಯನ್ನು ಪತ್ರಿಕೆಯವರು ''ಆಹಾರ ಪದಾರ್ಥಗಳ ಬೆಲೆ ಇಳಿಸುವುದಕ್ಕೆ'' ಎಂದು ತಪ್ಪು ತಿಳಿದುಕೊಂಡು ಪ್ರಕಟಿಸಿದ್ದಾರೋ ಏನೊ. ''ಬೆಲೆ ಏರಿಸುವುದಕ್ಕೆ'' ಎಂದು ನಾನು ಅದನ್ನು ತಿಳಿದುಕೊಂಡಿದ್ದೇನೆ. ಏಕೆಂದರೆ, ಇವತ್ತು ಬೆಲೆಗಳು ಗಗನಕ್ಕೆ ಏರುತ್ತಿವೆ. ಯಾವ ರೀತಿ ಏರುತ್ತಿವೆ ಎಂದರೆ, ಯಾವ ಕಾರೂ ಯಾವ ಏರೋಪ್ಲೇನೂ, ಯಾವ ಹೆಲಿಕಾಪ್ಟರೂ ಅಷ್ಟು ಸ್ಪೀಡಾಗಿ ಹೋಗುವುದಿಲ್ಲ. ಅವತ್ತು ಇಲ್ಲಿ ಒಂದು ಪೇಪರ್ ತಂದು ಇಟ್ಟಿದ್ದೆ. ಅದೂ ಈಗ ಮಾಯವಾಗಿ ಬಿಟ್ಟಿದೆ. ಅಕ್ಕಿ ಬೆಲೆ ಜನವರಿಯಲ್ಲಿ ೨ ರೂಪಾಯಿಗಳು ಇದ್ದುದು ಈಗ ೫–೬ ರೂಪಾಯಿಗಳು ಆಗಿವೆ. ಒಂದು ರೂಪಾಯಿ ಟೊಮ್ಯಾಟೋ ಇದ್ದುದು ೮ ರೂಪಾಯಿಗಳು ಆಗಿದೆ. ತೆಂಗಿನಕಾಯಿ ಎಣ್ಣೆ ೧೬ ರೂಪಾಯಿಗಳು ಇದ್ದುದು ೨೫–೨೮ ರೂಪಾಯಿಗಳು ಆಗಿದೆ. ಈ ಬೆಲೆ ಗಗನಕ್ಕೆ ಏರಿರುವ ವಿಷಯವನ್ನು ಹೇಳುತ್ತಿರುವಾಗ ಆ ಕಡೆಯ ಮಾನ್ಯ ಸದಸ್ಯರು ನಗಾಡುತ್ತಿದ್ದಾರೆ. ಇಂತಹ ಪ್ರಾಮುಖ್ಯವಾದ ಖಾತೆ, ಎಷ್ಟು ಜವಾಬ್ದಾರಿಯುತವಾದುದೆಂಬುದನ್ನು ಮಾನ್ಯ ಅಧ್ಯಕ್ಷರೇ ತಾವು ಆಲೋಚನೆ ಮಾಡಬೇಕು. ಆಹಾರ ಪದಾರ್ಥಗಳ ಬೆಲೆ ತಡೆಗಟ್ಟುವುದರಲ್ಲಿ ಈ ಸರ್ಕಾರ ವಿಫಲವಾಗಿದೆ, ಏಕೆ ವಿಫಲವಾಗಿದೆ ಎಂದರೆ ಮೂಲತಃ ಅವರು ಏನು ಭ್ರಷ್ಟಾಚಾರ ನಿರ್ಮೂಲನ ಕಾರ್ಯವನ್ನು ನಾವು ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದರೋ ಅದರ ತದ್ವಿರುದ್ಧವಾಗಿ ಇವತ್ತು ಭ್ರಷ್ಟಾಚಾರ ಅದರ ಒಂದು ಪರಿಮಿತಿಯನ್ನು ಮೀರಿ ಹೋಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಅವರು ಕೂಡ ಮಾತನಾಡುತ್ತಾ ಲಂಚಾ, ಲಂಚಾ ಎಂದು ಹೇಳಿದರು. ಮೊದಲು ಮಾನ್ಯ ಲಕ್ಷ್ಮೀಸಾಗರ್ ಅವರು, ರಾಮ್‌ದೇವ್ ಅವರು ಈ ಕಡೆ ಇದ್ದಾಗ ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದರು. ಎಷ್ಟು ಈಗ ಅವರು ನಿಲ್ಲಿಸಿದ್ದಾರೆ ? ಎಷ್ಟು ಪರ್‌ಸೆಂಟ್ ಕಟ್ ಆಗಿದೆ ? ಎಷ್ಟು ಪರ್‌ಸೆಂಟ್ ಜಾಸ್ತಿ ಮಾಡಿದ್ದಾರೆ ? ಜಾಸ್ತಿ ತೆಗೆದುಕೊಂಡುದರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಕೊಡುತ್ತಿದ್ದಾರೆಂಬ ಪಟ್ಟಿ ಅವರಲ್ಲಿ ಇದೆಯೇ ? ಮಾನ್ಯ ರಾಮ್‌ದೇವ್ ಅವರಿಗೆ, ಲಕ್ಷ್ಮೀಸಾಗರ್ ಅವರಿಗೆ ಅದು ಗೊತ್ತು ಲಕ್ಷ್ಮಯ್ಯನವರೇ ನೀವು ಸ್ವಲ್ಪ ಕೇಳಿ ಸ್ವಾಮಿ ?

---

† ಈ ಚಿನ್ಹೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾನ್ಯ ರಾಮದೇವ್‌ರವರು ಮಂತ್ರಿಗಳಾಗಬೇಕಾಗಿತ್ತು, ಏನೋ ದುರದೃಷ್ಟವಶಾತ್ ಆಗಲಿಲ್ಲ......

ಒಬ್ಬ ಸದಸ್ಯರು.—ಅವರನ್ನು ಎತ್ತಿ ಕಟ್ಟುವುದು ಬೇಡ......

ಶ್ರೀ ಜೆ. ಡಿ. ಸೋಮಪ್ಪ.—ಇಲ್ಲ, ಇಲ್ಲ, ನಾನು ನಿಜವಾಗಿಯೂ ಅವರು ಮಂತ್ರಿಗಳಾಗ ಬೇಕಾಗಿತ್ತು ಎಂದು ಹೃದಯ ಪೂರ್ವಕವಾಗಿಯೇ ಹೇಳುತ್ತಿದ್ದೇನೆ. ಆದುದರಿಂದ ಅಧ್ಯಕ್ಷರೇ, ವೇಳೆಯಾಗುತ್ತಾ ಬಂದಿರುವುದರಿಂದ ನಾನು ಹೆಚ್ಚಿಗೆ ಕಾಲಾವಕಾಶವನ್ನು ತೆಗೆದುಕೊಳ್ಳದೇ ಇನ್ನು ಒಂದೆರಡು ವಿಷಯಗಳನ್ನು ಹೇಳಿ ಮುಗಿಸಿ ಬಿಡುತ್ತೇನೆ. ಮಾತೆತ್ತಿದರೆ ನಮ್ಮ ಮಂತ್ರಿಗಳವರು ಕೇಂದ್ರದ ಕಡೆಗೆ ಕೈ ತೋರಿಸುತ್ತಾರೆ. ಆದರೆ ಮಾದ್ರಾಸ್‌ಗೆ ಮಾತ್ರ ರಾಮಚಂದ್ರನ್‌ರವರಿಗೆ ಹೆದರಿ ಹೆಚ್ಚಿಗೆ ಕೊಟ್ಟಿದ್ದಾರೆಂದು ಹೇಳಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕೇಂದ್ರದವರು ಹೆದರುವುದಿಲ್ಲ ಎಂದು ನೀವೇ ಘಂಟಾಘೋಷವಾಗಿ ಹೇಳಿಕೊಂಡಿದ್ದೀರಿ. ಅದರೆ ಆವರು ರಾಮಚಂದ್ರನ್‌ರವರಿಗೂ ಹೆದರುವುದಿಲ್ಲ ಯಾರಿಗೂ ಹೆದರುವುದಿಲ್ಲ, ಆದರೆ ಅಲ್ಲಿ ನಿಜವಾಗಿಯೂ ಡಿಫಿಸಿಟ್ ಇತ್ತು ಆದುದರಿಂದ ಕೊಟ್ಟಿದ್ದಾರೆ. ಈಗ ನೀವೇ ಹೆದರುತ್ತೇವೆಂದು ಹೇಳಿದ ಮೇಲೆ ಅಧಿಕಾರಿಗಳೂ ಸಹ ಹೆದರುವುದಿಲ್ಲ. ಮಾನ್ಯ ಶ್ರೀ ಸೂರ್ಯನಾರಾಯಣರಾವ್‌ರವರು ರೈಲು ದರ ಜಾಸ್ತಿಯಾದುದರಿಂದ ಅಕ್ಕಿ ದರ ಹೆಚ್ಚಲು ಕಾರಣವಾಯಿತೆಂದು ಹೇಳಿದರು. ಆದರೆ ಇವತ್ತು ರೈಲು ದರ ಎಷ್ಟು ಜಾಸ್ತಿಯಾಗಿದೆ? ಇದರ ಬಗ್ಗೆ ತಾವು ಲೆಕ್ಕ ಹಾಕಿ ನೋಡಿದರೆ ಗೊತ್ತಾಗುತ್ತದೆ. ನಾವು ಹಿಂದೆ ಪತ್ರಿಕೆಯಲ್ಲಿ ಎಲ್ಲಾ ಓದುತ್ತಿದ್ದೆವು ಮಹಾರಾಷ್ಟ್ರದಲ್ಲಿ ಅಕ್ಕಿ ಬೆಲೆ ಕೇಜಿಗೆ ೫ ರೂಪಾಯಿಗಳು ಆಗಿದೆ ಕೇರಳದಲ್ಲಿ ಅಕ್ಕಿ ಕೇಜಿ ಬೆಲೆ ೫ ರೂಪಾಯಿಗಳು ಆಗಿದೆಂದು ನೋಡುತ್ತಿದ್ದೆವು ಆದರೆ ಇವತ್ತು ನಾವೇ ಸ್ವತಃ ಇಲ್ಲಿ ಪ್ರತ್ಯಕ್ಷವಾಗಿ ಕಣ್ಣಾರೆ ಅಕ್ಕಿ ಬೆಲೆ ೫–೬ ರೂಪಾಯಿಗಳು ಆಗಿರುವುದನ್ನು ನೋಡುತ್ತಿದ್ದೇವೆ. ಜನ ನಿಮ್ಮನ್ನು ಓಟು ಕೊಟ್ಟು ಇಲ್ಲಿಗೆ ಕಳುಹಿಸಿರತಕ್ಕವರಿಗೆ ನೀವು ಇದನ್ನೇ ಕೊಡುವುದು? ಅವರು ಇವತ್ತು ಏನು ಅನ್ನ ತಿನ್ನಬೇಕೋ ಮಣ್ಣು ತಿನ್ನಬೇಕೋ ಅಕ್ಕಿ ಬೆಲೆ ೬ ರೂಪಾಯಿಗಳು ಆದರೆ ಇವತ್ತು ಕೃಷಿ ಕಾರ್ಮಿಕನ ಕೂಲಿ ೫ ರೂಪಾಯಿಗಳು ಇಲ್ಲ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ದುಡಿದರೆ ಅವನಿಗೆ ೫ ರೂಪಾಯಿಗಳ ಕೂಲಿ ಸಿಗುವುದಿಲ್ಲ. ಇಂಥಾದ್ದರಲ್ಲಿ ಅಕ್ಕಿ ಬೆಲೆ ೬ ರೂಪಾಯಿ ಗಳು ಆದರೆ ಅವನು ಅವನ ಹೆಂಡತಿ ಮಕ್ಕಳು ಹೇಗೆ ಸಾಕಬೇಕು? ಇವತ್ತು ಅಕ್ಕಿ, ಭತ್ತ ನಮ್ಮ ರಾಜ್ಯದಿಂದ ಪಕ್ಕದ ರಾಜ್ಯಗಳಿಗೆ ಹೋಗುತ್ತಲೇ ಇದೆ. ನಮ್ಮ ತಾಲ್ಲೂಕಿನಿಂದಲೂ ಭತ್ತ ಪ್ರತಿ ದಿನ ೧೦–೧೧ ಲಾರಿಗಳನ್ನು ಹೋಗುತ್ತಿದೆ. ಅಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್‌ರವರು ಇದ್ದಾರೆ, ಅವರು ಪಾಪ ಬಹಳ ಒಳ್ಳೆಯ ಧರ್ಮರಾಯ ಇದ್ದ ಹಾಗೆ ಇದ್ದಾನೆ. ಅವನು ಒಂದು ರೇಟನ್ನು ಫಿಕ್ಸ್ ಮಾಡಿ ಬಿಟ್ಟಿದ್ದಾನೆ. ಪರ್ಮಿಟ್ ಇಲ್ಲದೇ ಇದ್ದರೆ ಒಂದೂವರೆ ಸಾವಿರ ಒಂದು ಲಾರಿ ಲೋಡ್‌ಗೆ ಕೊಡಬೇಕು, ಪರ್ಮಿಟ್ ಇದ್ದು ಚೆಕ್ ಅಪ್ ಮಾಡಿದರೆ ಮೂಟೆ ಹೆಚ್ಚು ಕಡಮೆ ಇದ್ದರೆ ಅದಕ್ಕೊಂದು ರೇಟ್, ಚೆಕ್ ಅಪ್ ಮಾಡದೇ ಇದ್ದರೆ ಅದಕ್ಕೆ ೫೦ ಪರ್ಸೆಂಟ್ ಕನ್‌ಸಿಷನ್ ಹೀಗೆ ಮಾಡಿ ಬಿಟ್ಟು ಪ್ರತಿ ದಿವಸದ ಅವನ ವರಮಾನ ಎಷ್ಟು ಗೊತ್ತೆ, ೨೦ ಸಾವಿರ ರೂಪಾಯಿಗಳು. ಎಂದರೆ ತಿಂಗಳಿಗೆ ಎಷ್ಟು ಆಯಿತು, ೬ ಲಕ್ಷವಾಯಿತು. ಇದು ಮಿನಿಮಂ ನಾನು ಹೇಳುತ್ತಿರುವುದು, ಇಷ್ಟು ಹಣ ಎಲ್ಲಿಗೆ ಹೋಗುತ್ತಿದೆ? ಇದು ಅವನಿಗೊಬ್ಬನಿಗೇ ಅಲ್ಲ ಅದು ಬೇರೆ ಬೇರೆ ಕಡೆಗೂ ಹೋಗುತ್ತಿರ ಬಹುದು. ಇದು ಎಲ್ಲಿಗೆ ಹೋಗುತ್ತಿದೆ ಎನ್ನುವ ಬಗ್ಗೆ ತಾವು ಆಲೋಚನೆ ಮಾಡಿ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇದೇ ರೀತಿಯಾಗಿ ಬೆಂಗಳೂರು ನಗರದಲ್ಲಿರತಕ್ಕ ಹೋಲ್‌ಸೇಲ್ ಅಂಗಡಿಯವರು ಮಾಮೂಲು ಎಂದು ಇಷ್ಟು ಕೊಡಬೇಕು, ಬ್ಲಾಕ್ ಮಾರ್ಕೆಟಿಯರ್ಸ್ ಆಗಿದ್ದರೆ ಅವರು ಇಷ್ಟು ಕೊಡಬೇಕು. ಇನ್ನು ರಾಮ ಲಕ್ಷ್ಮಣ ಅಕೌಂಟ್ ಇಡತಕ್ಕಂಥವರು ಇಷ್ಟು ಕೊಡ ಬೇಕೆಂದು ಎಲ್ಲಾ ರೇಟ್‌ಗಳನ್ನು ನಿಗದಿ ಮಾಡಿಬಿಟ್ಟಿದ್ದಾರೆ. ಅಲ್ಲಿ ಒಬ್ಬ ಡಿ.ವೈ.ಎಸ್.ಪಿ. ಯವರು ಇದ್ದಾರೆ, ಅದರ ಬಗ್ಗೆ ಎಲ್ಲಾ ಡಿಟೇಲ್ ಆಗಿ ಹೇಳುವುದಕ್ಕೆ ಅವಕಾಶವಿಲ್ಲ ಇದ್ದಿದ್ದರೆ ಎಲ್ಲಾ ಹೇಳುತ್ತಿದ್ದೆ. ಹೀಗೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನೀವು ಅಧಿಕಾರಕ್ಕೆ ಬಂದು ೯ ತಿಂಗಳಾದರೂ ಅದು ಇನ್ನೂ ನಿಂತಿಲ್ಲ. ಇನ್ನು ಫುಡ್ ಇನ್ಸ್‌ಪೆಕ್ಟರ್‌ಗಳು ಇದ್ದಾರೆ ಅವರು ಸಹ ತಿಂದು ತಿಂದು ಕೊಬ್ಬಿ ಬಿಟ್ಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಸರ್ಕಾರ ಇದ್ದಾಗಲೂ ಸಹ ಇದ್ದರು......

ಶ್ರೀ ಜೆ. ಡಿ. ಸೋಮಪ್ಪ.—ಇರಬಹುದು, ಆದರೆ ನೀವು ಅದನ್ನು ಕತ್ತರಿಸಿ ಹಾಕಿ ಎಂದು ಹೇಳುತ್ತಿದ್ದೇನೆ, ಅದಕ್ಕೆ ನೀವು ಗೊಬ್ಬರ ನೀರು ಹಾಕಿ ಡಬ್ಬಲ್ ಮಾಡುವುದಕ್ಕೆ ಹೋಗಬೇಡಿ. ಇನ್ನು ಮಾನ್ಯ ಸೂರ್ಯನಾರಾಯಣರಾವ್‌ರವರು ಮಾಂಸದ ಬೆಲೆ ಕೇಜಿಗೆ ೨೫ ರೂಪಾಯಿಗಳು

ಆಗಿದೆಂದು ಹೇಳಿದರು. ಅದಕ್ಕೆ ನಾನು ಯೋಚನೆ ಮಾಡಿ ೨ನೇ ಸೆಪ್ಟೆಂಬರ್ ೧೯೮೩ ರಂದ. ಅಲಸೂರಿನಲ್ಲಿ ಗೊಲ್ಲಹಳ್ಳಿಯ ಹತ್ತಿರ ಒಂದು ಹೊಸದಾಗಿ ಮಾಂಸದ ಅಂಗಡಿಯನ್ನು ತೆರೆದಿದ್ದೇವೆ ಅಲ್ಲಿ ಮಾಂಸ ಕೆ.ಜಿ.ಗೆ ೧೮ ರೂಪಾಯಿಗಳು ಆರ್ಡಿನರಿದು. ಒಳ್ಳೆಯ ಮಾಂಸ ಕೆ. ಜಿ.ಗೆ ೨೦ ರೂಪಾಯಿಗಳು. ಇನ್ನು ಕೋಳಿ ಮಾಂಸ ಹೀಗೆಲ್ಲಾ ಕಡಿಮೆ ರೇಟ್‌ನಲ್ಲಿ ನಮ್ಮ ಜನಗಳೂ ಸಹ ತಿನ್ನಬೇಕು ಎನ್ನತಕ್ಕ ಉದ್ದೇಶವನ್ನಿಟ್ಟುಕೊಂಡು ಮಾಡಿದ್ದೇವೆ. ಅದೇ ರೀತಿಯಾಗಿ ನೀವು ಸಹ ಬೆಲೆಗಳು ಕಡಿಮೆ ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು. ಇನ್ನು ಅಡಲ್ಟ್ರೇಷನ್ ಬಗ್ಗೆ ಸ್ವಲ್ಪ ಮಾತನಾಡುವುದು ಇದೆ. ಅಡಲ್ಟ್ರೇಡ್ ಗೌವರ್ನಮೆಂಟ್ ಇರುವಾಗ ನಾವು ಪ್ಯೂರ್ ಫುಡ್‌ನ್ನು ಪಡೆಯುವುದು ಹೇಗೆ? ಆದುದರಿಂದ ನಮಗೆ ಒಳ್ಳೆಯ ಆಹಾರ ಸಿಗುತ್ತಿಲ್ಲ. ಮಾನ್ಯ ಮಂತ್ರಿಗಳವರೇ ಹೇಳಿದ ಪ್ರಕಾರವಾಗಿ ನಮ್ಮಲ್ಲಿ ಇರತಕ್ಕ ಆಹಾರದ ಕೊರತೆ ಕೇವಲ ೦.೪ ಮಾತ್ರ ಎಂದು ಹೇಳಿದ್ದಾರೆ ಹಾಗಿದ್ದ ಮೇಲೆ ಆ ಆಹಾರವೆಲ್ಲಾ ಎಲ್ಲಿಗೆ ಹೋಯಿತು? ಈ ಸರ್ಕಾರ ಬಂದ ಮೇಲೆ ಒಬ್ಬೊಬ್ಬ ೫–೫ ಕೆ. ಜಿ. ತಿನ್ನುವುದಕ್ಕೆ ಶುರು ಮಾಡಿದರೆ? ಎಲ್ಲಿಗೆ ಅಕ್ಕಿ ಹೋಯಿತು? ಇದಕ್ಕೆ ಮಂತ್ರಿಗಳವರು ಉತ್ತರ ಹೇಳಬೇಕು. ಮಾನ್ಯ ಮಂತ್ರಿಗಳವರು ಗೂಂಡಾಗಳನ್ನು ಮತ್ತು ರೌಡಿಗಳನ್ನು ಮಟ್ಟ ಹಾಕುವುದಕ್ಕಾಗಿ ಒಂದು ಕಾನೂನು ತಂದಿದ್ದಾರೆ, ಆದರೆ ಈಗಾಗಲೇ ಇರತಕ್ಕ ಕಾನೂನಿನ ಪ್ರಕಾರವಾಗಿ ಬ್ಲಾಕ್ ಮಾರ್ಕೆಟಿಯರ್ಸ್‌ನ್ನು ಮತ್ತು ಮೋಸ ಮಾಡತಕ್ಕವರನ್ನು ನ್ಯಾಶನಲ್ ಸೆಕ್ಯೂರಿಟಿ ಆ್ಯಕ್ಟ್ ಪ್ರಕಾರವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತಿರಲಿಲ್ಲವೇ? ಆದುದರಿಂದ ಇನ್ನು ಮುಂದೆ ಅಡಲ್ಟ್ರೇಷನ್ ಆಗದೇ ಹಾಗೆ ನೋಡಿಕೊಳ್ಳಿ ಇಲ್ಲದಿದ್ದರೆ ನಮ್ಮ ರಾಜ್ಯಾದ್ಯಂತ ದೊಡ್ಡ ಚಳುವಳಿಯನ್ನೇ ನಡೆಸಬೇಕಾದೀತು. ಅಂಥಾದ್ದಕ್ಕೆ ಆಸ್ಪದ ಕೊಡಬಾರದೆಂದು ನಾನು ಹೇಳಬಯಸುತ್ತೇನೆ. 'ಹಂಗ್ರಿ ಮ್ಯಾನ್ ಈಜ್ ಎ ಅಂಗ್ರಿ ಮ್ಯಾನ್' ಎಂದು ಗಾದೆ ಇದೆ ಆ ತರಹ ಆಗುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಬಯಸುತ್ತೇನೆ.

೭-೩೦ ಪಿ.ಎಂ.

ಅಧ್ಯಕ್ಷರೆ, ಈಗ ಊಟ ಬೇರೆ ಇಲ್ಲ, ಬಿ.ಪಿ. ವ್ಯತ್ಯಾಸವಾದೀತು. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಇಷ್ಟೆ, ಇದು ಹುಡುಗಾಟದ ಸಮಯ ಅಲ್ಲ. ಪ್ರತಿಯೊಬ್ಬರಿಗೂ ಜವಾಬ್ದಾರಿ ಇದೆ. ಆದ್ದರಿಂದ, ಸಾಧ್ಯವಾದಷ್ಟು ಈ ಆಹಾರ ಪದಾರ್ಥಗಳ ಬೆಲೆಗಳನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. CHAIRMAN.—The discussion is concluded. Now the House stands adjourned to meet tomorrow at 10–00 A. M.

(The House adjourned at Thirty-One minutes past Seven of the Clock to meet again on Thursday, the 15th September, 1983)